॥ ಜೈ ಶ್ರೀ ಗುರುದೇವ್ ॥

ಶ್ರೀ ಆದಿಚುಂಚನಗಿರಿ ಶಿಕ್ಷಣ ಟ್ರಸ್ಟ್ (ರಿ.)

# ಗಿರಿ ಕುಸುಮ

## ವಾರ್ಷಿಕ ಸಂಚಿಕೆ

## 2017-18

ಶ್ರೀ ಆದಿಚುಂಚನಗಿರಿ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು

ನಾಗಮಂಗಲ, ಮಂಡ್ಯ ಜಿಲ್ಲೆ – 571432

(ನ್ಯಾಕ್ ಸಂಸ್ಥೆಯಿಂದ 'ಬಿ++' ಗ್ರೇಡ್ ಮಾನ್ಯತೆ ಪಡೆದಿದೆ)





ಕಾಲೇಜಿಗೆ ಶ್ರೀಗಳು ಭೇಟಿ ನೀಡಿದ ಸಂದರ್ಭ





ಯೋಗ ತರಬೇತಿ ಪಡೆಯುತ್ತಿರುವ ವಿದ್ಯಾರ್ಥಿಗಳು

# ಗಿರಿ ಕುಸುಮ

2017–18 ನೇ ಸಾಲಿನ ವಾರ್ಷಿಕ ಸಂಚಿಕೆ

ಪ್ರಧಾನ ಸಂಪಾದಕರು
**ಡಾ. ಬಿ.ಕೆ. ಲೋಕೇಶ**

ಸಂಪಾದಕರು
**ಡಾ. ಎಂ.ಕೆ. ಮಂಜುನಾಥ**

ಸಂಪಾದಕ ಮಂಡಳಿ
**ಪ್ರೊ. ರಾಜೇಂದ್ರ**
**ಪ್ರೊ. ಬೈರೇಗೌಡ**
**ಶ್ರೀ ಎಂ.ಪಿ.ಸುನೀಲ್ ಕುಮಾರ್**
**ಶ್ರೀಮತಿ ಎಚ್.ಆರ್. ತ್ರಿವೇಣಿ**
**ಕುಮಾರಿ ಗುಣವತಿ**

**ಶ್ರೀ ಆದಿಚುಂಚನಗಿರಿ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು**
ನಾಗಮಂಗಲ, ಮಂಡ್ಯ ಜಿಲ್ಲೆ – 571432
ವೆಬ್‌ಸೈಟ್ : www.saccngm.org
ಬ್ಲಾಗ್ : www.saccngm.blogspot.in
ಇ-ಮೇಲ್ : saccngm@gmail.com

# ಕಾಲೇಜಿನ ಪರಿಚಯ

ಪುರಾಣ ಪ್ರಸಿದ್ಧ ಶ್ರೀ ಆದಿಚುಂಚನಗಿರಿ ಮಠವು ಅನ್ನ ದಾಸೋಹಕ್ಕೆ ಹೆಸರುವಾಸಿಯಾಗಿರುವಂತೆಯೇ ದಿನಾಂಕ 13-12-1973ರಂದು 'ಶ್ರೀ ಆದಿಚುಂಚನಗಿರಿ ಶಿಕ್ಷಣ ಟ್ರಸ್ಟ್' ಸ್ಥಾಪಿಸುವುದರ ಮೂಲಕ ಜ್ಞಾನ ದಾಸೋಹಕ್ಕೆ ನಾಂದಿಯಾಯಿತು. ಈಗ ಟ್ರಸ್ಟ್‌ನ ಅಧೀನದಲ್ಲಿ ಪೂರ್ವ ಪ್ರಾಥಮಿಕ ಹಂತದಿಂದ ವೈದ್ಯಕೀಯ-ತಾಂತ್ರಿಕ ಶಿಕ್ಷಣದವರೆಗೆ 500ಕ್ಕೂ ಹೆಚ್ಚು ಶಾಲಾ ಕಾಲೇಜುಗಳು ನಾಡಿನಾದ್ಯಂತ ಲಕ್ಷಾಂತರ ಮಕ್ಕಳಿಗೆ ವಿದ್ಯಾದಾನ ಮಾಡುತ್ತಿವೆ. ಇಂತಹ ಪ್ರಸಿದ್ಧ ಶಿಕ್ಷಣ ಸಂಸ್ಥೆಗಳಲ್ಲಿ 'ಶ್ರೀ ಆದಿಚುಂಚನಗಿರಿ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು' ಪ್ರಥಮವಾಗಿ ಸ್ಥಾಪಿತವಾದ ಸಂಸ್ಥೆಯಾಗಿದೆ.

ಶ್ರೀ ಆದಿಚುಂಚನಗಿರಿ ಕ್ಷೇತ್ರದಲ್ಲಿ ಸುಸಜ್ಜಿತ ಕಟ್ಟಡದೊಂದಿಗೆ 1975ರಲ್ಲಿ ಪ್ರಾರಂಭವಾದ ಈ ಕಾಲೇಜು ಸಮಾಜಕ್ಕೆ ವಿವಿಧ ಆಯಾಮಗಳಲ್ಲಿ ಸೇವೆ ಸಲ್ಲಿಸುತ್ತಿದೆಯಲ್ಲದೆ, ರಾಷ್ಟ್ರಕ್ಕೆ ಅನೇಕ ಪ್ರತಿಭೆಗಳನ್ನು ಕೊಡುಗೆಯಾಗಿ ನೀಡಿದೆ. ಬಿ.ಎ., ಬಿ.ಕಾಂ., ಪದವಿ ತರಗತಿಗಳೊಂದಿಗೆ ಪ್ರಾರಂಭಗೊಂಡ ಈ ಕಾಲೇಜಿನ ವಿದ್ಯಾರ್ಥಿಗಳ ಸಂಖ್ಯೆ 108 ರಿಂದ 1038ಕ್ಕೆ ತಲುಪಿದೆ. ಜೊತೆಗೆ 2006-2007ರಲ್ಲಿ ಬಿ.ಎಸ್ಸಿ., ತರಗತಿಯನ್ನು ಹಾಗೂ 2011-12 ರಲ್ಲಿ ಬಿ.ಬಿ.ಎಂ ತರಗತಿಗಳನ್ನು ಪ್ರಾರಂಭಿಸಲಾಗಿದೆ. 2014-15ನೇ ಸಾಲಿನಲ್ಲಿ ವಾಣಿಜ್ಯಶಾಸ್ತ್ರ ವಿಭಾಗದಲ್ಲಿ ಸ್ನಾತಕೋತ್ತರ ತರಗತಿಗಳನ್ನು(ಎಂ.ಕಾಂ.,) ಪ್ರಾರಂಭಿಸಲಾಗಿದೆ.

ಶಿಕ್ಷಣ ಟ್ರಸ್ಟ್‌ನ ಸಂಸ್ಥಾಪಕ ಅಧ್ಯಕ್ಷರಾಗಿದ್ದ ಭೈರವೈಕ್ಯ ಯುಗಯೋಗಿ, ಪದ್ಮಭೂಷಣ, ಪರಮಪೂಜ್ಯ ಜಗದ್ಗುರು ಶ್ರೀ ಶ್ರೀ ಶ್ರೀ ಡಾ. ಬಾಲಗಂಗಾಧರನಾಥ ಮಹಾಸ್ವಾಮೀಜಿಯವರ ಕೃಪಾಶೀರ್ವಾದ ಹಾಗೂ ಪ್ರಸ್ತುತ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾಗಿರುವ ಪರಮಪೂಜ್ಯ ಜಗದ್ಗುರು ಶ್ರೀ ಶ್ರೀ ಶ್ರೀ ಡಾ. ನಿರ್ಮಲಾನಂದನಾಥ ಮಹಾಸ್ವಾಮೀಜಿಯವರು ಮತ್ತು ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಶ್ರೀ ಪುರುಷೋತ್ತಮಾನಂದನಾಥ ಸ್ವಾಮೀಜಿಯವರ ಮಾರ್ಗದರ್ಶನದಲ್ಲಿ ಈ ಕಾಲೇಜು ಪ್ರವರ್ಧಮಾನಗೊಳ್ಳುತ್ತಿದೆ. ಸೇವಾ ಮನೋಭಾವದ ಪ್ರಾಂಶುಪಾಲರು, ಸಮರ್ಥ ಅಧ್ಯಾಪಕರು ಹಾಗೂ ನೌಕರ ವರ್ಗದವರು ಕಾಲೇಜಿನ ಸರ್ವಾಂಗೀಣ ಪ್ರಗತಿಗಾಗಿ ದುಡಿಯುತ್ತಿದ್ದಾರೆ.

ಪ್ರತಿ ತಾಲ್ಲೂಕು ಕೇಂದ್ರಕ್ಕೆ ಒಂದು ಪ್ರಥಮ ದರ್ಜೆ ಕಾಲೇಜು ಎಂಬ ಸರ್ಕಾರದ ನೀತಿಗೆ ಅನುಗುಣವಾಗಿ ಈ ಕಾಲೇಜು 1988 ರಲ್ಲಿ ಶ್ರೀಕ್ಷೇತ್ರದಿಂದ ನಾಗಮಂಗಲಕ್ಕೆ ಸ್ಥಳಾಂತರಗೊಂಡಿತು. ಸುಸಜ್ಜಿತ ತರಗತಿ ಕೊಠಡಿಗಳು, ಭೌತಶಾಸ್ತ್ರ, ರಸಾಯನಶಾಸ್ತ್ರ ಹಾಗೂ ಕಂಪ್ಯೂಟರ್ ಲ್ಯಾಬ್‌ಗಳು, 25 ಸಾವಿರಕ್ಕೂ ಹೆಚ್ಚು ಪುಸ್ತಕಗಳಿರುವ ಡಿಜಿಟಲ್‌ಗೊಂಡಿರುವ ಗ್ರಂಥಾಲಯ, ಅತ್ಯಾಧುನಿಕ ಸೌಲಭ್ಯವುಳ್ಳ ವಿಚಾರ ಸಂಕಿರಣ ಸಭಾಂಗಣದಿಂದ ಕೂಡಿರುವ ಈ ಕಾಲೇಜು ಈಗ ನ್ಯಾಕ್ ಸಂಸ್ಥೆಯಿಂದ 'ಬಿ++' ಗ್ರೇಡ್ ಮಾನ್ಯತೆಯನ್ನು ಪಡೆದುಕೊಂಡಿದೆಯಲ್ಲದೆ ಪ್ರತಿಭಾವಂತ ವಿದ್ಯಾರ್ಥಿಗಳನ್ನು ರೂಪಿಸುವುದರ ಮೂಲಕ ವಿಶ್ವವಿದ್ಯಾನಿಲಯದ ಮಟ್ಟದಲ್ಲಿ ಅನೇಕ ರ್‍ಯಾಂಕ್ ಹಾಗೂ ಚಿನ್ನದ ಪದಕಗಳನ್ನು ಗಳಿಸಿಕೊಂಡಿದೆ. 50 ಅಧ್ಯಾಪಕರು ಹಾಗೂ 15 ಅಧ್ಯಾಪಕೇತರರು ಶ್ರದ್ಧೆ ಹಾಗೂ ಪ್ರಾಮಾಣಿಕತೆಯಿಂದ ಕರ್ತವ್ಯವನ್ನು ನಿರ್ವಹಿಸುವುದರ ಮೂಲಕ ಈ ಕಾಲೇಜನ್ನು ಅಭಿವೃದ್ಧಿ ಪಥದತ್ತ ಕೊಂಡೊಯ್ಯುತ್ತಿದ್ದಾರೆ.

* * * * *

## SRI ADICHUNCHANAGIRI COLLEGE OF ARTS, COMMERCE AND SCIENCE

Nagamangala - 571432

### VISION :

- To advance the course of education and diffusion of knowledge without distinction of caste and creed.
- To continue as a distinguished Institution fostering an atmosphere of nationalism, secular outlook, Scientific temper with humility, Integrity and Social concern.
- To create an ideal human being full of knowledge, love, respect for society and ready to serve the nation with sacrifice and universal brotherhood.

### MISSION :

- To develop physical, mental, moral, social and spiritual qualities among the students.
- Upliftment of economically and socially backward classes.
- To prepare students for higher education.

### OBJECTIVES :

- Enabling the students to be the responsible citizens of the Country.
- Providing suitable teaching-learning and evaluation programme.
- To prepare the rural students for National and International competitive jobs.
- To promote higher education in the field humanities, Commerce, Basic Science, Management, Computer Science and IT.
- To enhance the quality of teaching-learning process through continuous use of ICT.
- To cater to the needs of industry by equipping students with various skills.
- Growth & development of the community through creating a sense of civic consciousness.

**********



ಭೈರವೈಕ್ಯ ಪದ್ಮಭೂಷಣ ಪರಮಪೂಜ್ಯ ಜಗದ್ಗುರು

**ಶ್ರೀ ಶ್ರೀ ಶ್ರೀ ಡಾ. ಬಾಲಗಂಗಾಧರನಾಥ ಮಹಾಸ್ವಾಮೀಜಿಯವರು**

ಸಂಸ್ಥಾಪಕ ಅಧ್ಯಕ್ಷರು, ಶ್ರೀ ಆದಿಚುಂಚನಗಿರಿ ಶಿಕ್ಷಣ ಟ್ರಸ್ಟ್ (ರಿ.)



**ಪೂಜ್ಯ ಶ್ರೀ ಶ್ರೀ ಪುರುಷೋತ್ತಮಾನಂದನಾಥ ಸ್ವಾಮೀಜಿಯವರು**

ಪ್ರಧಾನ ಕಾರ್ಯದರ್ಶಿಗಳು, ಶ್ರೀ ಆದಿಚುಂಚನಗಿರಿ ಶಿಕ್ಷಣ ಟ್ರಸ್ಟ್ (ರಿ.)



**ಪೂಜ್ಯ ಶ್ರೀ ಶ್ರೀ ಪ್ರಸನ್ನನಾಥ ಸ್ವಾಮೀಜಿಯವರು**

ಕಾರ್ಯದರ್ಶಿಗಳು, ಶ್ರೀ ಆದಿಚುಂಚನಗಿರಿ ಮಠ

# ಸಂದೇಶ



ಶಿಕ್ಷಣ ಸಂಸ್ಥೆಗಳೆಂದರೆ ಬರಿಯ ಕಟ್ಟಡಗಳಲ್ಲ, ಮಕ್ಕಳ ಕಣ್ಣಳಲ್ಲಿ ಅಕ್ಷರಜ್ಞಾನವನ್ನು ಅರಳಿಸಿ ಅವರನ್ನು ಭವಿಷ್ಯದ ಜವಬ್ದಾರಿಯುತ ಮನುಷ್ಯರನ್ನಾಗಿ ರೂಪಿಸುವ ದೇವಾಲಯಗಳು. ವಿದ್ಯಾರ್ಥಿಗಳ ಭವಿಷ್ಯದ ಬದುಕನ್ನು ಸಶಕ್ತಗೊಳಿಸುವಲ್ಲಿ ಶಿಕ್ಷಣ ಸಂಸ್ಥೆಗಳು ನಿರ್ವಹಿಸುವ ಪಾತ್ರ ಅಮೂಲ್ಯವಾದುದು. ವಿದ್ಯಾರ್ಥಿಗಳನ್ನು ಸಮಾಜದ ಉನ್ನತಿಗಾಗಿ ಸಕ್ರಿಯರನ್ನಾಗಿಸುವಲ್ಲಿ ಹಾಗೂ ಭೌತಿಕ ಜಗತ್ತನ್ನು ಮೀರಿದ ಜೀವನ ಮೌಲ್ಯಗಳನ್ನು ಅವರಲ್ಲಿ ಮೈಗೂಡಿಸುವ ನಿಟ್ಟಿನಲ್ಲಿ ಅಧ್ಯಾಪಕ ವರ್ಗ ವಿಶೇಷ ಕಾಳಜಿಯನ್ನು ವಹಿಸಬೇಕಾಗುತ್ತದೆ. ಶಿಕ್ಷಣವೆಂದರೆ ಚಾರಿತ್ರ್ಯದ ನಿರ್ಮಾಣ. ಚಂಚಲ ಚಿತ್ತನಾಗಿರುವ ವಿದ್ಯಾರ್ಥಿಯ ಮನಸ್ಸನ್ನು ಸುಶಿಕ್ಷಿತಗೊಳಿಸುವುದೆಂದರೆ ಗಟ್ಟಿಯಾದ ಕಲ್ಲೊಂದನ್ನು ಕಡೆದು ಸುಂದರವಾದ ಮೂರ್ತಿಯನ್ನುಕಡೆದಂತೆ. ಆ ದೃಷ್ಟಿಯಿಂದ ಶಿಕ್ಷಣ ಎಂಬುದು ಕೇವಲ ಪಠ್ಯವಿಷಯವಾಗಬಾರದು. ಅದು ಅರಿವಿನ ಬೆಳಕಾಗಬೇಕು. ಅದರ ಗುರಿ ಆತ್ಮ ಸಾಕ್ಷಾತ್ಕಾರವಾಗಬೇಕು. ಆ ದೃಷ್ಟಿಯಿಂದ ಭವಿಷ್ಯದ ಬದುಕಿನಲ್ಲಿ ವಿದ್ಯಾರ್ಥಿಗಳು ಹೆಚ್ಚು ಅಂಕಗಳನ್ನು ಪಡೆದು ವಿದ್ಯಾವಂತರಾದರಷ್ಟೇ ಸಾಲದು. ವಿನಯಶೀಲರಾಗಬೇಕು. ಜೊತೆಗೆ ಮಾನವೀಯ ಮೌಲ್ಯಗಳನ್ನು ಮೈಗೂಡಿಸಿಕೊಂಡು ಪರಸ್ಪರ ಪ್ರೀತಿಯಿಂದ, ಸೌಹಾರ್ದಯುತವಾಗಿ ಬಾಳುವುದನ್ನು ರೂಢಿಸಿಕೊಳ್ಳಬೇಕು.

ಇಂದಿನ ಆಧುನಿಕ ಯುಗದಲ್ಲಿ ಮನುಷ್ಯ ವಿಜ್ಞಾನದ ಆವಿಷ್ಕಾರಗಳೊಂದಿಗೆ ವೈಜ್ಞಾನಿಕವಾಗಿ ಬೆಳೆಯುತ್ತಲೇ ಆಧ್ಯಾತ್ಮಿಕ ಭಾವವನ್ನೂ ಮೈಗೂಡಿಸಿಕೊಳ್ಳಬೇಕು; ತನ್ಮೂಲಕ ತನ್ನ ಬದುಕನ್ನು ಕಟ್ಟಿಕೊಳ್ಳಬೇಕು. ಹಾಗಾದಾಗ ಮಾತ್ರ ಸದೃಢ ಸಮಾಜದ ನಿರ್ಮಾಣ ಸುಲಭ ಸಾಧ್ಯವಾಗುತ್ತದೆ. ವೈಜ್ಞಾನಿಕ ಬೆಳವಣಿಗೆ ನಮ್ಮ ಹೊರಜಗತ್ತಿಗೆ ಕಾಣುವ ಬಹುದೊಡ್ಡ ಮಹಲು. ಆದರೆ ಆ ದೊಡ್ಡ ಮಹಲು ಭದ್ರವಾಗಿ ನಿಲ್ಲಲು ಆಧ್ಯಾತ್ಮದ ತಳಹದಿ ಇರಬೇಕು. ಆಧುನಿಕತೆ ಬೆಳೆದಿದೆ ಎಂದಾಕ್ಷಣ ಆಧ್ಯಾತ್ಮಿಕತೆಯನ್ನು ಬಿಡಬೇಕು ಎಂದೇನೂ ಇಲ್ಲ. ಬದಲಾಗಿ ಆಧುನಿಕತೆ ಬೆಳೆದಂತೆ ಆಧ್ಯಾತ್ಮಿಕತೆಗೆ ಮೆರುಗು ಬರಬೇಕು. ಸನಾತನ ಜ್ಞಾನ ಮತ್ತು ಆಧುನಿಕ ವಿಜ್ಞಾನಗಳೆರಡರ ನಡುವೆ ಸಮನ್ವಯತೆಯನ್ನು ಸಾಧಿಸಿಕೊಂಡು ಯುವಜನತೆ ತಮ್ಮ ಬದುಕನ್ನು ಚಿನ್ಮಯಗೊಳಿಸಿಕೊಳ್ಳಬೇಕು. ಆ ನಿಟ್ಟಿನಲ್ಲಿ ನಮ್ಮ ಶ್ರೀ ಆದಿಚುಂಚನಗಿರಿ ಶಿಕ್ಷಣ ಸಂಸ್ಥೆಗಳು ವಿದ್ಯಾರ್ಥಿಗಳನ್ನು ರಾಷ್ಟ್ರ ನಿರ್ಮಾಣ ಕಾರ್ಯದಲ್ಲಿ ಸಕ್ರಿಯರಾಗಿರುವಂತೆ ಸಜ್ಜುಗೊಳಿಸುತ್ತಿರುವುದು ಅತ್ಯಂತ ಸಂತಸದ ವಿಷಯ.

ಗ್ರಾಮಾಂತರ ಪ್ರದೇಶದ ಬಡ ವಿದ್ಯಾರ್ಥಿಗಳಲ್ಲಿ ಜ್ಞಾನದೀವಿಗೆಯನ್ನು ಪಸರಿಸಿ ಅವರಿಗೂ ಉನ್ನತ ಶಿಕ್ಷಣವನ್ನು ನೀಡಬೇಕೆಂಬ ಸದಾಶಯದಿಂದ ನಮ್ಮ ಪರಮಪೂಜ್ಯ ಗುರುಗಳಾದ ಜಗದ್ಗುರು ಶ್ರೀ ಶ್ರೀ ಶ್ರೀ ಪದ್ಮಭೂಷಣ ಡಾ. ಬಾಲಗಂಗಾಧರನಾಥ ಮಹಾಸ್ವಾಮಿಗಳವರು ನಾಲ್ಕು ದಶಕಗಳ ಹಿಂದೆಯೇ ನಾಗಮಂಗಲದಂತಹ ಹಿಂದುಳಿದ ಪ್ರದೇಶದಲ್ಲಿ "ಶ್ರೀ ಆದಿಚುಂಚನಗಿರಿ ಕಲಾ ಮತ್ತು ವಾಣಿಜ್ಯಕಾಲೇಜು" ಪ್ರಾರಂಭಿಸಿದರು. ಈ ಶಿಕ್ಷಣ ಸಂಸ್ಥೆಯು ಅಂದಿನಿಂದಲೂ ಪರಮಪೂಜ್ಯ ಗುರೂಜಿರವರ ಸದಾಶಯವನ್ನು ಸಾಕಾರಗೊಳಿಸುವ ನಿಟ್ಟಿನಲ್ಲಿ ಮುನ್ನಡೆಯುತ್ತಿರುವುದು ನಮಗೆ ಬಹಳ ಸಂತಸವನ್ನುಂಟು ಮಾಡಿದೆ. ಪ್ರಸ್ತುತ ಸಂಸ್ಥೆಯು ವಾರ್ಷಿಕೋತ್ಸವವನ್ನಾಚರಿಸುತ್ತಿರುವ ಶುಭ ಸಂದರ್ಭದಲ್ಲಿ 'ಗಿರಿ ಕುಸುಮ' ಸ್ಮರಣ ಸಂಚಿಕೆಯನ್ನು ಪ್ರಕಾಶಿಸುತ್ತಿರುವುದು ಸಂದರ್ಭೋಚಿತವಾಗಿದೆ. ಇದು ಅಧ್ಯಾಪಕರು ಮತ್ತು ವಿದ್ಯಾರ್ಥಿಗಳಲ್ಲಿರುವ ಸುಪ್ತ ಪ್ರತಿಭೆಯನ್ನು ಪ್ರಕಾಶಿಸಲು ಉತ್ತಮ ಮಾಧ್ಯಮ. ಈ ಸಂಚಿಕೆಯು ಶಿಕ್ಷಣ ಸಂಸ್ಥೆಯು ಬೆಳೆದು ಬಂದ ಬಗೆಯನ್ನು ದಾಖಲಿಸುವ ಜೊತೆಗೆ ಜ್ಞಾನ, ವಿಜ್ಞಾನ, ಧರ್ಮ, ಕಲೆ, ಸಂಸ್ಕೃತಿ ಹಾಗೂ ಜೀವನ ಮೌಲ್ಯಗಳಿಂದೊಡಗೂಡಿದ ಅತ್ಯುತ್ತಮ ಲೇಖನಗಳಿಂದ ಕೂಡಿ ಸರ್ವಾಂಗ ಸುಂದರವಾಗಿ ಮೂಡಿ ಬರಲೆಂದೂ, ಸಂಸ್ಥೆಯ ಸೇವಾಕಾರ್ಯಗಳು ಮತ್ತಷ್ಟು ವಿಸ್ತೃತಗೊಳ್ಳಲೆಂದು ಆಶಿಸುತ್ತಾ, ಹಮ್ಮಿಕೊಂಡಿರುವ ಸಮಾರಂಭವು ಯಶಸ್ವಿಯಾಗಿ ನೆರವೇರಲೆಂದು ತುಂಬು ಹೃದಯದಿಂದ ಹಾರೈಸುತ್ತೇವೆ.

ಇಂತು ಭಗವತ್ಸೇವೆಯಲ್ಲಿ

(ಶ್ರೀ ಶ್ರೀ ಶ್ರೀ ಡಾ. ನಿರ್ಮಲಾನಂದನಾಥ ಸ್ವಾಮಿಗಳವರು)

ಪೀಠಾಧ್ಯಕ್ಷರು, ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠ



**ಡಾ. ಎನ್. ಎಸ್. ರಾಮೇಗೌಡ,** ಎಂ.ಎಸ್ಸಿ, ಪಿಎಚ್.ಡಿ.,
ಸಿ.ಇ.ಒ., ಶ್ರೀ ಆದಿಚುಂಚನಗಿರಿ ಶಿಕ್ಷಣ ಟ್ರಸ್ಟ್ (ರಿ.)




**ಡಾ. ಬಿ.ಕೆ. ಲೋಕೇಶ,** ಎಂ.ಎ, ಪಿಎಚ್.ಡಿ.,
ಪ್ರಾಂಶುಪಾಲರು



ಭಾಷಾ ವಿಭಾಗದ
ಅಧ್ಯಾಪಕರು

ವಿಜ್ಞಾನ ವಿಭಾಗದ
ಅಧ್ಯಾಪಕರು





ಕಲಾ ವಿಭಾಗದ
ಅಧ್ಯಾಪಕರು



ವಾಣಿಜ್ಯ ವಿಭಾಗದ ಅಧ್ಯಾಪಕರು

ಅಧ್ಯಾಪಕೇತರ ಸಿಬ್ಬಂದಿ ವರ್ಗ





ವಾರ್ಷಿಕ ಸಂಚಿಕೆಯ ಸಮಿತಿ ಸದಸ್ಯರು



ಸ್ಕೌಟ್ಸ್ ಮತ್ತು ಗೈಡ್ಸ್ ತಂಡದೊಂದಿಗೆ ಉಪನ್ಯಾಸಕ ವರ್ಗ



ತೃತೀಯ ವರ್ಷದ ಬಿ.ಎ. 'ಎ' ವಿಭಾಗದ ವಿದ್ಯಾರ್ಥಿಗಳು



ತೃತೀಯ ವರ್ಷದ ಬಿ.ಎ. 'ಬಿ' ವಿಭಾಗದ ವಿದ್ಯಾರ್ಥಿಗಳು



ತೃತೀಯ ವರ್ಷದ ಬಿ.ಬಿ.ಎಂ. ವಿದ್ಯಾರ್ಥಿಗಳು



ತೃತೀಯ ವರ್ಷದ ಬಿ.ಕಾಂ. 'ಎ' ವಿಭಾಗದ ವಿದ್ಯಾರ್ಥಿಗಳು



ತೃತೀಯ ವರ್ಷದ ಬಿ.ಕಾಂ. 'ಬಿ' ವಿಭಾಗದ ವಿದ್ಯಾರ್ಥಿಗಳು



ತೃತೀಯ ವರ್ಷದ ಬಿ.ಎಸ್ಸಿ. ವಿದ್ಯಾರ್ಥಿಗಳು



ಎಂ.ಕಾಂ. ವಿದ್ಯಾರ್ಥಿಗಳು




ಪೋಷಕ ಹಾಗೂ ಅಧ್ಯಾಪಕರ ಸಭೆ



ರಸಾಯನಶಾಸ್ತ್ರ
ಪ್ರಯೋಗಾಲಯ



ಭೌತಶಾಸ್ತ್ರ
ಪ್ರಯೋಗಾಲಯ



ಕಂಪ್ಯೂಟರ್ ಲ್ಯಾಬ್‌ನಲ್ಲಿ
ಅಧ್ಯಯನ ನಿರತ ವಿದ್ಯಾರ್ಥಿಗಳು



ಗ್ರಂಥಾಲಯದಲ್ಲಿ
ಅಧ್ಯಯನಶೀಲ ವಿದ್ಯಾರ್ಥಿಗಳು



ಸಾಮೂಹಿಕ ಪ್ರಾರ್ಥನೆ

ಸಾಂಪ್ರದಾಯಿಕ
ಉಡುಗೆಯಲ್ಲಿ ವಿದ್ಯಾರ್ಥಿಗಳು





ಸಾಂಪ್ರದಾಯಿಕ
ಉಡುಗೆಯಲ್ಲಿ ವಿದ್ಯಾರ್ಥಿಗಳು




ಜ್ಞಾನ-ವಿಜ್ಞಾನ-ತಂತ್ರಜ್ಞಾನ ಮೇಳದಲ್ಲಿ
ಭಾಗವಹಿಸಿದ್ದ ಕಾಲೇಜಿನ ವಿದ್ಯಾರ್ಥಿಗಳು
ಶ್ರೀಗಳೊಂದಿಗೆ









24-01-18ರಿಂದ 30-01-18ರವರೆಗೆ ಮೈಲಾರಪಟ್ಟಣದಲ್ಲಿ
ಆಯೋಜಿಸಿದ್ದ ಎನ್.ಎಸ್.ಎಸ್. ವಾರ್ಷಿಕ ಶಿಬಿರದ ಕಾರ್ಯಕ್ರಮಗಳು





8-9-17ರಂದು ಕಾಲೇಜಿನಲ್ಲಿ ನಡೆದ ಮಾಂಡವ್ಯ ವಲಯ ಖೋ-ಖೋ
ಕ್ರೀಡಾಕೂಟದಲ್ಲಿ ಪ್ರಥಮ ಬಹುಮಾನ ಪಡೆದ ನಮ್ಮ ಕಾಲೇಜಿನ ವಿದ್ಯಾರ್ಥಿಗಳು

# ಶ್ರೀ ಆದಿಚುಂಚನಗಿರಿ ಶಿಕ್ಷಣ ಸಂಸ್ಥೆ (ರಿ)

## ಶ್ರೀ ಆದಿಚುಂಚನಗಿರಿ ಕಲಾ ಮತ್ತು ವಾಣಿಜ್ಯ ಕಾಲೇಜು

ನಾಗಮಂಗಲ, ಮಂಡ್ಯ ಜಿಲ್ಲೆ - 571432

## ಟ್ರಸ್ಟಿಗಳು


| | |
|---|---|
| ಜಗದ್ಗುರು ಶ್ರೀ ಶ್ರೀ ಶ್ರೀ ಡಾ. ನಿರ್ಮಲಾನಂದನಾಥ ಮಹಾಸ್ವಾಮೀಜಿ | ಅಧ್ಯಕ್ಷರು |
| ಶ್ರೀ ಶ್ರೀ ಪುರುಷೋತ್ತಮಾನಂದನಾಥ ಸ್ವಾಮೀಜಿ | ಪ್ರಧಾನ ಕಾರ್ಯದರ್ಶಿಗಳು |
| ಶ್ರೀ ಶ್ರೀ ಪ್ರಕಾಶನಾಥ ಸ್ವಾಮೀಜಿ | ಸದಸ್ಯರು |
| ಶ್ರೀ ಬಿ. ಗೋವಿಂದರಾಜು | ಸದಸ್ಯರು |
| ಶ್ರೀ ಡಿ. ದೇವರಾಜು | ಸದಸ್ಯರು |


## ಕಾಲೇಜು ಆಡಳಿತ ಮಂಡಳಿ


| | |
|---|---|
| ಜಗದ್ಗುರು ಶ್ರೀ ಶ್ರೀ ಶ್ರೀ ಡಾ. ನಿರ್ಮಲಾನಂದನಾಥ ಮಹಾಸ್ವಾಮೀಜಿ | ಅಧ್ಯಕ್ಷರು |
| ಶ್ರೀ ಶ್ರೀ ಪುರುಷೋತ್ತಮಾನಂದನಾಥ ಸ್ವಾಮೀಜಿ | ಪ್ರಧಾನ ಕಾರ್ಯದರ್ಶಿಗಳು |
| ಡಾ. ಬಿ.ಕೆ. ಲೋಕೇಶ | ಪ್ರಾಂಶುಪಾಲರು ಮತ್ತು ಕಾರ್ಯದರ್ಶಿ |
| ಶ್ರೀ ಶ್ರೀ ಅಮರಾನಂದ ಪರಮಹಂಸ ಸ್ವಾಮೀಜಿ | ಸದಸ್ಯರು |
| ಶ್ರೀ ಎಲ್. ಆರ್. ಶಿವರಾಮೇಗೌಡ | ಸದಸ್ಯರು |
| ಪ್ರೊ. ರಾಜೇಂದ್ರ | ಸದಸ್ಯರು |
| ಅಧ್ಯಕ್ಷರು, ಪಟ್ಟಣ ಪಂಚಾಯಿತಿ, ನಾಗಮಂಗಲ | ಸದಸ್ಯರು |

# ಬೋಧಕ – ಬೋಧಕೇತರರು

**ಡಾ. ಬಿ. ಕೆ. ಲೋಕೇಶ,** ಎಂ.ಎ., ಪಿಎಚ್.ಡಿ.,

ಪ್ರಾಂಶುಪಾಲರು

## ಕನ್ನಡ ವಿಭಾಗ :

| | |
|---|---|
| **ಡಾ.ಎಂ. ಕೆ. ಮಂಜುನಾಥ,** ಎಂ.ಎ., ಎಂ.ಫಿಲ್., ಪಿಹೆಚ್.ಡಿ., | ಸಹಾಯಕ ಪ್ರಾಧ್ಯಾಪಕರು |
| **ಡಿ. ಎಸ್. ದಿವ್ಯ,** ಎಂ.ಎ., ಎಂ.ಫಿಲ್., ಬಿ.ಇಡಿ., | ಸಹಾಯಕ ಪ್ರಾಧ್ಯಾಪಕರು |
| **ಎಚ್. ಎಂ. ಶ್ರೀನಿವಾಸ್,** ಎಂ.ಎ., | ಸಹಾಯಕ ಪ್ರಾಧ್ಯಾಪಕರು |

## ಇಂಗ್ಲಿಷ್ ವಿಭಾಗ :

| | |
|---|---|
| **ಎಂ. ಪಿ. ಸುನೀಲ್‌ಕುಮಾರ್,** ಎಂ.ಎ., | ಸಹಾಯಕ ಪ್ರಾಧ್ಯಾಪಕರು |
| **ಎಚ್. ಪಿ. ಗೀತಾ,** ಎಂ.ಎ., | ಸಹಾಯಕ ಪ್ರಾಧ್ಯಾಪಕರು |
| **ಎಚ್. ಧನಲಕ್ಷ್ಮಿ,** ಎಂ.ಎ., | ಸಹಾಯಕ ಪ್ರಾಧ್ಯಾಪಕರು |
| ಬಿ. ಜೆ. ಶ್ರೀಕಂಠ, ಎಂ.ಎ., ಬಿ.ಇಡಿ., | ಸಹಾಯಕ ಪ್ರಾಧ್ಯಾಪಕರು |

## ಉರ್ದು ವಿಭಾಗ :

| | |
|---|---|
| **ನೂರ್ ಆಯಿಷಾ,** ಎಂ.ಎ., ಎಂ.ಫಿಲ್., ಬಿ.ಇಡಿ., | ಸಹಾಯಕ ಪ್ರಾಧ್ಯಾಪಕರು |

## ಇತಿಹಾಸ ವಿಭಾಗ :

| | |
|---|---|
| **ಪ್ರೊ. ಬೈರೇಗೌಡ,** ಎಂ.ಎ., ಜಿಡಿಸಿ., | ಸಹ–ಪ್ರಾಧ್ಯಾಪಕರು ಹಾಗೂ ವಿಭಾಗದ ಮುಖ್ಯಸ್ಥರು |
| **ಎ. ಬಿ. ಪವಿತ್ರ.,** ಎಂ.ಎ., ಎಂ.ಫಿಲ್., | ಸಹಾಯಕ ಪ್ರಾಧ್ಯಾಪಕರು |
| **ಕೆ. ಜಿ. ರವಿವರ್ಮ,** ಎಂ.ಎ., ಬಿ.ಇಡಿ., | ಸಹಾಯಕ ಪ್ರಾಧ್ಯಾಪಕರು |
| **ಎಚ್. ಜೆ. ಹರೀಶ,** ಎಂ.ಎ., ಬಿ.ಇಡಿ., | ಸಹಾಯಕ ಪ್ರಾಧ್ಯಾಪಕರು |

## ಅರ್ಥಶಾಸ್ತ್ರ ವಿಭಾಗ :

| | |
|---|---|
| **ಡಾ. ಬಿ. ಕೆ. ಲೋಕೇಶ,** ಎಂ.ಎ., ಪಿಎಚ್.ಡಿ., | ಸಹ–ಪ್ರಾಧ್ಯಾಪಕರು ಹಾಗೂ ವಿಭಾಗದ ಮುಖ್ಯಸ್ಥರು |
| **ಟಿ. ಎಂ. ಮೋಹನ್‌ಕುಮಾರ್ ನಾಯ್ಕ್,** ಎಂ.ಎ., | ಸಹಾಯಕ ಪ್ರಾಧ್ಯಾಪಕರು |
| **ಕೆ. ಪ್ರತಿಮಾ,** ಎಂ.ಎ., ಪಿಜಿ.ಡಿ.ಎಚ್‌ಆರ್‌ಎಂ., | ಸಹಾಯಕ ಪ್ರಾಧ್ಯಾಪಕರು |
| **ಎಸ್. ಶೋಭಾ,** ಎಂ.ಎ., | ಸಹಾಯಕ ಪ್ರಾಧ್ಯಾಪಕರು |

## ರಾಜ್ಯಶಾಸ್ತ್ರ ವಿಭಾಗ :

| | |
|---|---|
| **ಕೆ. ಎಚ್. ಲಕ್ಷ್ಮಣ,** ಎಂ.ಎ., ಬಿ.ಇಡಿ., | ಸಹಾಯಕ ಪ್ರಾಧ್ಯಾಪಕರು |
| **ಎಚ್. ಎಸ್. ವಿನಯ್‌ಕುಮಾರ್,** ಎಂ.ಎ., ಬಿ.ಇಡಿ., | ಸಹಾಯಕ ಪ್ರಾಧ್ಯಾಪಕರು |
| **ಡಿ. ಎಸ್. ವಿಜಯಕುಮಾರ,** ಎಂ.ಎ., | ಸಹಾಯಕ ಪ್ರಾಧ್ಯಾಪಕರು |
| **ಎಂ. ಕೆ. ಗಾಯಿತ್ರಿ,** ಎಂ.ಎ., ಬಿ.ಇಡಿ., | ಸಹಾಯಕ ಪ್ರಾಧ್ಯಾಪಕರು |

**ಸಮಾಜಶಾಸ್ತ್ರ ವಿಭಾಗ :**

| | |
|---|---|
| **ಜಿ. ಕೆ. ಕುಮಾರ,** ಎಂ.ಎ., ಬಿ.ಇಡಿ., | ಸಹಾಯಕ ಪ್ರಾಧ್ಯಾಪಕರು |
| **ಎನ್. ಆರ್. ದೇವಾನಂದ,** ಎಂ.ಎ., | ಸಹಾಯಕ ಪ್ರಾಧ್ಯಾಪಕರು |

**ಭೂಗೋಳಶಾಸ್ತ್ರ ವಿಭಾಗ :**

| | |
|---|---|
| **ಜಿ. ರಾಜಣ್ಣ,** ಎಂ.ಎ., | ಸಹಾಯಕ ಪ್ರಾಧ್ಯಾಪಕರು |
| **ಡಿ. ಸಿ. ಚೇತನ,** ಎಂ.ಎ., | ಸಹಾಯಕ ಪ್ರಾಧ್ಯಾಪಕರು |

**ವಾಣಿಜ್ಯಶಾಸ್ತ್ರ ವಿಭಾಗ :**

| | |
|---|---|
| **ಪ್ರೊ. ರಾಜೇಂದ್ರ,** ಎಂ.ಕಾಂ., ಡಿ.ಐಟಿ., | ಸಹ-ಪ್ರಾಧ್ಯಾಪಕರು ಹಾಗೂ ವಿಭಾಗದ ಮುಖ್ಯಸ್ಥರು |
| **ಎಂ. ಲಲಿತಮ್ಮ,** ಬಿ.ಕಾಂ., ಎಲ್.ಎಲ್.ಬಿ., | ಸಹಾಯಕ ಪ್ರಾಧ್ಯಾಪಕರು |
| **ಎಚ್. ಆರ್. ತ್ರಿವೇಣಿ,** ಎಂ.ಕಾಂ., | ಸಹಾಯಕ ಪ್ರಾಧ್ಯಾಪಕರು |
| **ಬಿ. ಆರ್. ನೀಲಾ,** ಎಂ.ಬಿ.ಎ., | ಸಹಾಯಕ ಪ್ರಾಧ್ಯಾಪಕರು |
| **ಪಿ. ಸುನೀತ,** ಎಂ.ಕಾಂ., | ಸಹಾಯಕ ಪ್ರಾಧ್ಯಾಪಕರು |
| **ಎನ್. ಕೆ. ಹರೀಶ,** ಎಂ.ಕಾಂ., | ಸಹಾಯಕ ಪ್ರಾಧ್ಯಾಪಕರು |
| **ಎಚ್. ಎಸ್. ಶ್ರೀನಿವಾಸನ್,** ಎಂ.ಬಿ.ಎ., | ಸಹಾಯಕ ಪ್ರಾಧ್ಯಾಪಕರು |
| **ರುಬಿಯಾ ಸುಲ್ತಾನ,** ಎಂ.ಕಾಂ., | ಸಹಾಯಕ ಪ್ರಾಧ್ಯಾಪಕರು |
| **ಬಿ. ಕೆ. ಅಶ್ವಥ ಕುಮಾರ,** ಎಂ.ಕಾಂ., | ಸಹಾಯಕ ಪ್ರಾಧ್ಯಾಪಕರು |
| **ಸಿ. ಎಸ್. ಚೈತ್ರ,** ಎಂ.ಕಾಂ., | ಸಹಾಯಕ ಪ್ರಾಧ್ಯಾಪಕರು |
| **ಬಿ. ಆರ್. ರೋಹಿಣಿ,** ಎಂ.ಕಾಂ., | ಸಹಾಯಕ ಪ್ರಾಧ್ಯಾಪಕರು |
| **ಪಿ. ಆರ್. ಭಾಗ್ಯಲಕ್ಷ್ಮಿ,** ಎಂ.ಕಾಂ., | ಸಹಾಯಕ ಪ್ರಾಧ್ಯಾಪಕರು |
| **ಕೆ. ಸಿ. ವಿದ್ಯಾಶ್ರೀ,** ಎಂ.ಕಾಂ., | ಸಹಾಯಕ ಪ್ರಾಧ್ಯಾಪಕರು |
| **ಪುಟ್ಟಲಿಂಗಮ್ಮ,** ಎಂ.ಕಾಂ., | ಸಹಾಯಕ ಪ್ರಾಧ್ಯಾಪಕರು |
| **ಎಚ್. ಎನ್. ಕಾವ್ಯ,** ಎಂ.ಕಾಂ., | ಸಹಾಯಕ ಪ್ರಾಧ್ಯಾಪಕರು |
| **ಜಿ. ಎಸ್. ನಾಗೇಶ,** ಎಂ.ಕಾಂ., | ಸಹಾಯಕ ಪ್ರಾಧ್ಯಾಪಕರು |
| **ಎಂ. ಅರ್ಪಿತ,** ಎಂ.ಕಾಂ., | ಸಹಾಯಕ ಪ್ರಾಧ್ಯಾಪಕರು |

**ಭೌತಶಾಸ್ತ್ರ ವಿಭಾಗ :**

| | |
|---|---|
| **ಎಸ್. ಬೋರೇಗೌಡ,** ಎಂ.ಎಸ್ಸಿ., ಬಿ.ಇಡಿ., | ಸಹಾಯಕ ಪ್ರಾಧ್ಯಾಪಕರು |
| **ಸಿ. ಟಿ. ಚಂದ್ರಶೇಖರ,** ಎಂ.ಎಸ್ಸಿ., ಬಿ.ಇಡಿ., | ಸಹಾಯಕ ಪ್ರಾಧ್ಯಾಪಕರು |

**ರಸಾಯನಶಾಸ್ತ್ರ ವಿಭಾಗ :**

| | |
|---|---|
| **ಎಂ. ಆರ್. ನೇತ್ರಾವತಿ,** ಎಂ.ಎಸ್ಸಿ., ಬಿ.ಇಡಿ., | ಸಹಾಯಕ ಪ್ರಾಧ್ಯಾಪಕರು |
| **ಸಿ. ಪಲ್ಲವಿ,** ಎಂ.ಎಸ್ಸಿ., ಬಿ.ಇಡಿ., | ಸಹಾಯಕ ಪ್ರಾಧ್ಯಾಪಕರು |

## ಗಣಿತಶಾಸ್ತ್ರ ವಿಭಾಗ :

| | |
|---|---|
| **ಬಿ. ಜೆ. ದೀಪಾ,** ಎಂ.ಎಸ್ಸಿ., ಬಿ.ಇಡಿ., | ಸಹಾಯಕ ಪ್ರಾಧ್ಯಾಪಕರು |
| **ಎ. ಜೆ. ಶರತ್‌ಬಾಬು,** ಎಂ.ಎಸ್ಸಿ., ಬಿ.ಇಡಿ., | ಸಹಾಯಕ ಪ್ರಾಧ್ಯಾಪಕರು |

## ಗಣಕ ವಿಜ್ಞಾನವಿಭಾಗ :

| | |
|---|---|
| **ಎಂ. ಗುಣವತಿ,** ಎಂ.ಎಸ್ಸಿ., | ಸಹಾಯಕ ಪ್ರಾಧ್ಯಾಪಕರು |
| **ಸಿ. ಆರ್. ಶಿವರಂಜನಿ,** ಬಿ.ಇ., | ಸಹಾಯಕ ಪ್ರಾಧ್ಯಾಪಕರು |

## ವಿದ್ಯುನ್ಮಾನ ಶಾಸ್ತ್ರ ವಿಭಾಗ :

| | |
|---|---|
| **ಎಲ್. ಎಸ್. ಅನುರಾಗ,** ಬಿ.ಇ., | ಸಹಾಯಕ ಪ್ರಾಧ್ಯಾಪಕರು |

## ದೈಹಿಕ ಶಿಕ್ಷಣ ವಿಭಾಗ :

| | |
|---|---|
| **ಬಿ. ಪಿ. ನಾರಾಯಣ,** ಎಂ.ಪಿ.ಇಡಿ., | ಸಹಾಯಕ ಪ್ರಾಧ್ಯಾಪಕರು |

## ಸ್ನಾತಕೋತ್ತರ ವಿಭಾಗ (ಎಂ.ಕಾಂ.) :

| | |
|---|---|
| **ಪಿ. ರೇಖಾ,** ಎಂ.ಕಾಂ., | ಸಹಾಯಕ ಪ್ರಾಧ್ಯಾಪಕರು |
| **ಎಚ್. ಆರ್. ಸೌಮ್ಯ,** ಎಂ.ಕಾಂ., | ಸಹಾಯಕ ಪ್ರಾಧ್ಯಾಪಕರು |
| **ನವೇರಿಯಾ ಬಾನು,** ಎಂ.ಕಾಂ., | ಸಹಾಯಕ ಪ್ರಾಧ್ಯಾಪಕರು |

## ಗ್ರಂಥಾಲಯ ವಿಭಾಗ :

| | |
|---|---|
| **ಎನ್. ಟಿ. ವಿಜಯಕುಮಾರ,** ಎಂ.ಎ., ಎಂ. ಲಿಬ್‌ಸೈನ್ಸ್ | ಗ್ರಂಥಾಲಯ ಮೇಲ್ವಿಚಾರಕರು |

## ಅಧ್ಯಾಪಕೇತರ ವರ್ಗ

| | |
|---|---|
| **ಎ. ಸಿ. ಭೀಮಯ್ಯ** | ವಿಷಯ ನಿರ್ವಾಹಕರು ಸಹಿತ ಬೆರಳಚ್ಚುಗಾರರು |
| **ಎಂ. ಎಸ್. ರವೀಂದ್ರಕುಮಾರ್,** ಎಂ.ಎಸ್ಸಿ., ಬಿ.ಇಡಿ., | ದ್ವಿತೀಯ ದರ್ಜೆ ವಿಷಯ ನಿರ್ವಾಹಕರು |
| **ಡಿ. ಗೋವಿಂದರಾಜು** | ದ್ವಿತೀಯ ದರ್ಜೆ ವಿಷಯ ನಿರ್ವಾಹಕರು (ನಿ.) |
| **ಕೆ. ಆರ್. ದಿಲೀಪ್‌ರಾಜ್,** ಬಿ.ಎ., ಡಿಸಿಟಿಟಿಸಿ., | ಕಂಪ್ಯೂಟರ್ ಆಪರೇಟರ್ |
| **ಪಿ. ಜ್ಯೋತಿ,** ಎಂ.ಕಾಂ., | ಕಛೇರಿ ಸಹಾಯಕರು |
| **ಟಿ. ಹೆಚ್. ವಿಜಯಕುಮಾರ** | ಜವಾನರು |
| **ಲೋಕೇಶ** | ಸಹಾಯಕರು |
| **ದಾಸಯ್ಯ** | ಜವಾನರು |
| **ಎನ್. ಆರ್. ಲೋಕೇಶ** | ಅಟೆಂಡರ್ |
| **ಎಂ. ಶಿವನಾಯ್ಕ** | ಜವಾನರು |
| **ನಾಗರತ್ನಮ್ಮ** | ಆಯಾ |
| **ರತ್ನಮ್ಮ** | ಆಯಾ |
| **ಪಾರ್ವತಮ್ಮ** | ಆಯಾ |

*******

# ಸಂಪಾದಕೀಯ

2000 ವರ್ಷಗಳ ಗುರುಪರಂಪರೆ ಹೊಂದಿದ್ದು, ಸಾಧು ಸಂತರುಗಳು, ತಪಸ್ವಿಗಳು ಅನುಷ್ಠಾನವಾಗಿ ಜೀವನದ ಪರಮಗುರಿಯನ್ನು ಸಾಧಿಸಿದ ದಿವ್ಯ ಧರ್ಮ ಪೀಠವಾದ ಶ್ರೀ ಕ್ಷೇತ್ರ ಆದಿಚುಂಚನಗಿರಿ ಮಠದ ಆಶ್ರಯದಲ್ಲಿ ಕಾರ್ಯಪ್ರವೃತ್ತವಾಗಿರುವ ಶಿಕ್ಷಣ ಟ್ರಸ್ಟಿನಲ್ಲಿ ಸ್ಥಾಪನೆಯಾಗಿರುವ 500ಕ್ಕೂ ಹೆಚ್ಚು ಶಿಕ್ಷಣಸಂಸ್ಥೆಗಳ ಪೈಕಿ ಚೊಚ್ಚಲ ಸಂಸ್ಥೆ ನಮ್ಮ ಶ್ರೀ ಆದಿಚುಂಚನಗಿರಿ ಕಲಾ ಮತ್ತು ವಾಣಿಜ್ಯ ಕಾಲೇಜು. ಪರಮಪೂಜ್ಯ ಜಗದ್ಗುರು ಯುಗಯೋಗಿ ಭೈರವೈಕ್ಯ ಶ್ರೀ ಶ್ರೀ ಶ್ರೀ ಪದ್ಮಭೂಷಣ ಡಾ. ಬಾಲಗಂಗಾಧರನಾಥ ಮಹಾಸ್ವಾಮೀಜಿಯವರ ಕನಸಿನ ಕೂಸಾದ ನಮ್ಮ ಕಾಲೇಜು 1975ರಲ್ಲಿ ಸ್ಥಾಪನೆಯಾಗಿ ಬೆಳ್ಳಿಹಬ್ಬ ಆಚರಿಸಿ 18 ವರ್ಷ ತುಂಬಿದೆ.

ಬಹುಸಂಖ್ಯಾತ ವಿದ್ಯಾರ್ಥಿಗಳು ನಾಗಮಂಗಲ ತಾಲ್ಲೂಕಿನ ವಿವಿಧ ಗ್ರಾಮಗಳಿಂದ ನಮ್ಮ ಕಾಲೇಜಿಗೆ ಬರುತ್ತಿದ್ದು, ಗ್ರಾಮೀಣ ವಿದ್ಯಾರ್ಥಿಗಳಿಗೆ ತೀರಾ ಕಡಿಮೆ ಖರ್ಚಿನಲ್ಲಿ ಮೌಲ್ಯಾಧಾರಿತ ಉನ್ನತ ಶಿಕ್ಷಣ ನೀಡುವ ಮೂಲಕ ಅವರು ಸಮಾಜದ ಅಗತ್ಯಗಳಿಗೆ ಸ್ಪಂದಿಸುವಂತೆ ಮಾಡುವ ಗುರಿ ನಮ್ಮ ಕಾಲೇಜಿನದಾಗಿದೆ. ಕಾಲೇಜು ಸ್ಥಾಪನೆಯಾದಾಗಿನಿಂದ ಪರಿಣಿತ ಅನುಭವಿ ಪ್ರಾಂಶುಪಾಲರು ಮತ್ತು ಪ್ರಾಧ್ಯಾಪಕರು ಹಾಕಿಕೊಟ್ಟ ಭದ್ರ ತಳಪಾಯದ ಮೇಲೆ ನಮ್ಮ ಕಾಲೇಜು ಅದರದೇ ಆದ ಹೆಸರನ್ನು ಇಂದಿಗೂ ಚಿರಸ್ಥಾಯಿಯಾಗಿ ಉಳಿಸಿಕೊಳ್ಳಲು ಶ್ರಮಿಸುತ್ತಿದೆ. ಬಹುತೇಕ NET & SLET ಅರ್ಹತೆಯೊಂದಿಗೆ ಬೋಧಿಸುತ್ತಿರುವ ಯುವ ಅಧ್ಯಾಪಕರ ತಂಡ ಕಾಲೇಜಿನಲ್ಲಿ ಶಿಸ್ತನ್ನು ಮೂಡಿಸುವಲ್ಲಿ ಶ್ರಮಿಸುತ್ತಿದೆ.

ಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಲೇಪಿತ ಅಭಿವೃದ್ಧಿಯ ಶಿಲ್ಪಿಯೆನಿಸಿರುವ ಪರಮಪೂಜ್ಯ ಜಗದ್ಗುರು ಶ್ರೀ ಶ್ರೀ ಶ್ರೀ ಡಾ. ನಿರ್ಮಲಾನಂದನಾಥ ಮಹಾಸ್ವಾಮೀಜಿಯವರ ಆಶೀರ್ವಾದದಿಂದ ಕಾಲೇಜಿಗೆ ದಕ್ಷ ಆಡಳಿತ ಮಂಡಳಿಯನ್ನು ರಚಿಸಲಾಗಿದ್ದು, ಈ ಆಡಳಿತ ಮಂಡಳಿಯಲ್ಲಿ ಉನ್ನತ ಶಿಕ್ಷಣಕ್ಕಾಗಿ ಬದ್ಧರಾದ ಸಮರ್ಪಣಾಭಾವದ ವ್ಯಕ್ತಿಗಳಿದ್ದು, ಸಂಸ್ಥೆಗೆ ನಿಷ್ಠರಾದ, ಬದ್ಧತೆಯುಳ್ಳ ವಿಧೇಯ ನೌಕರವರ್ಗ, ಉತ್ಸುಕರಾದ ಸಹಕಾರ ಸ್ಫೂರ್ತಿಯ ಮೆರಿಟೋರಿಯಸ್ ಸಾಧನೆಗೈಯುವ ಗ್ರಾಮೀಣ ವಿದ್ಯಾರ್ಥಿ ಕುಸುಮಗಳಿದ್ದು, ವಿದ್ಯಾರ್ಥಿಗಳಲ್ಲಿ ಶಿಸ್ತು, ಸದ್ವರ್ತನೆಯನ್ನು ಸಾಧಿಸುವ ಮೂಲಕ ಕಾಲೇಜು ಗುಣಾತ್ಮಕ ಶಿಕ್ಷಣ ನೀಡುವ ವಿಶೇಷ ಗೌರವವನ್ನು ಪಡೆದಿದೆ.

ನಮ್ಮ ಕಾಲೇಜಿನಲ್ಲಿ ಶ್ರೀಮಂತ ಮೂಲಸೌಕರ್ಯವಿದ್ದು, ಸುಸಜ್ಜಿತ ಕಟ್ಟಡ, ಸಭಾಂಗಣ, ಗ್ರಂಥಾಲಯ, ವ್ಯವಸ್ಥಿತವಾದ ಪ್ರಯೋಗಾಲಯದ ಜೊತೆಗೆ ಕ್ರೀಡಾ ಸಾಮಗ್ರಿಗಳನ್ನೊಳಗೊಂಡಿದೆ. ನಮ್ಮ ಕಾಲೇಜಿಗೆ 3 ಬಾರಿ NAAC ಸಮಿತಿ ಭೇಟಿ ನೀಡಿದ್ದು "B++" ಶ್ರೇಣಿಯನ್ನು ಗಳಿಸಿರುವುದು ಪ್ರಶಂಸನೀಯ. 2017–18ನೇ ಸಾಲಿನ ಪರೀಕ್ಷೆಯಲ್ಲಿ ನಮ್ಮ ಕಾಲೇಜಿನ ವಾಣಿಜ್ಯಶಾಸ್ತ್ರ ವಿಭಾಗದ 27 ಜನ ವಿದ್ಯಾರ್ಥಿಗಳು ವಿವಿಧ ಪತ್ರಿಕೆಗಳಲ್ಲಿ ಶೇಕಡ 100ಕ್ಕೆ 100 ಅಂಕಗಳನ್ನು ಪಡೆದಿರುವುದು ನಮ್ಮ ಬೋಧಕ ಸಿಬ್ಬಂದಿಯ ಬೋಧನಾ ದಕ್ಷತೆಗೆ ಹಿಡಿದ ಕೈಗನ್ನಡಿ. ಪ್ರತೀ ವರ್ಷವೂ ಉತ್ತಮ ಫಲಿತಾಂಶ ಬರುತ್ತಿರುವುದು ನಮ್ಮ ಗ್ರಾಮೀಣ ವಿದ್ಯಾರ್ಥಿಗಳ ಶೈಕ್ಷಣೀಕ ಶಿಸ್ತನ್ನು ಪ್ರತಿನಿಧಿಸುತ್ತದೆ. ಈ ಎಲ್ಲಾ ಸವಿನೆನಪಿಗಾಗಿ 'ಗಿರಿ ಕುಸುಮ' ಎಂಬ ಸ್ಮರಣ ಸಂಚಿಕೆಯು ಪ್ರಕಟಗೊಂಡು ನಿಮ್ಮ ಕೈಸೇರಿದೆ. ನಮ್ಮ ಕಾಲೇಜಿನಲ್ಲಿ ಅರಳಿ ಕಾಲೇಜಿನ ಕೀರ್ತಿ ಸೌರಭವನ್ನು ನಾಡಿನಾದ್ಯಂತ ಹರಡಲಿರುವ ಪ್ರತಿಭಾ ಕುಸುಮಗಳ ಮತ್ತು ಕಾಲೇಜಿನ ಪ್ರತಿಭಾ ಸಿಬ್ಬಂದಿಗಳ ಲೇಖನಗಳನ್ನೊಳಗಂಡ 'ಗಿರಿ ಕುಸುಮ'ವು ಸರ್ವಾಂಗ ಸುಂದರವಾಗಿ ಹೊರಹೊಮ್ಮಿದೆ.

ನಮ್ಮೆಲ್ಲರಿಗೆ ವಿದ್ಯೆ, ಬುದ್ಧಿ ಮತ್ತು ಬದುಕನ್ನು ನೀಡಿದ ಸಮಾಜದ ಶಿಲ್ಪಿ ಪರಮಪೂಜ್ಯ ಜಗದ್ಗುರು ಶ್ರೀ ಶ್ರೀ ಶ್ರೀ ಪದ್ಮಭೂಷಣ ಡಾ. ಬಾಲಗಂಗಾಧರನಾಥ ಮಹಾಸ್ವಾಮೀಜಿಯವರು ಭೈರವೈಕ್ಯವಾಗಿದ್ದು ಇವರ ಆತ್ಮಕ್ಕೆ ಚಿರಶಾಂತಿಯನ್ನು ಕೋರುತ್ತಾ, 'ಗಿರಿ ಕುಸುಮ'ವು ಅರಳಿ ರಾರಾಜಿಸಲು ತಮ್ಮ ದಿವ್ಯಾನುಗ್ರಹ ನೀಡಿದ

ಪರಮಪೂಜ್ಯ ಜಗದ್ಗುರು ಶ್ರೀ ಶ್ರೀ ಶ್ರೀ ಡಾ. ನಿರ್ಮಲಾನಂದನಾಥ ಮಹಾಸ್ವಾಮೀಜಿಯವರ ಪಾದಪದ್ಮಂಗಳಿಗೆ ಅನಂತ ಪ್ರಣಾಮಗಳನ್ನು ಸಲ್ಲಿಸುತ್ತೇವೆ. ನಮ್ಮ ಕಾಲೇಜಿನ ಅಭಿವೃದ್ಧಿಗಾಗಿ ಸರ್ವರೀತಿಯಲ್ಲಿಯೂ ಸಲಹೆ, ಮಾರ್ಗದರ್ಶನ ನೀಡುತ್ತಾ ಆಶೀರ್ವದಿಸುತ್ತಾ ಬಂದಿರುವ ಶ್ರೀ ಆದಿಚುಂಚನಗಿರಿ ಶಿಕ್ಷಣ ಟ್ರಸ್ಟಿನ ಪ್ರಧಾನ ಕಾರ್ಯದರ್ಶಿಗಳಾದ ಪೂಜ್ಯ ಶ್ರೀ ಶ್ರೀ ಪುರುಷೋತ್ತಮಾನಂದನಾಥ ಸ್ವಾಮಿಗಳಿಗೆ, ಶ್ರೀ ಮಠದ ಕಾರ್ಯದರ್ಶಿಗಳಾದ ಪೂಜ್ಯ ಶ್ರೀ ಶ್ರೀ ಪ್ರಸನ್ನನಾಥ ಸ್ವಾಮೀಜಿಗಳಿಗೆ ಹಾಗೂ ಶ್ರೀ ಆದಿಚುಂಚನಗಿರಿ ಶಾಖಾ ಮಠಗಳ ಸಾಧು ಸಂತರುಗಳಿಗೂ ಹೃತ್ಪೂರ್ವಕ ಪ್ರಣಾಮಗಳು.

ನಮ್ಮ ಕಾಲೇಜು ಆರಂಭವಾದಾಗಿನಿಂದ ಇಲ್ಲಿಯವರೆಗೆ ಸುದೀರ್ಘ ಸೇವೆ ಸಲ್ಲಿಸಿ ನಿವೃತ್ತರಾಗಿರುವ ಅಧ್ಯಾಪಕ ಮತ್ತು ಅಧ್ಯಾಪಕೇತರರ ಸೇವಾದಕ್ಷತೆ, ಶಿಸ್ತು ಮತ್ತು ಸಮರ್ಪಣಾ ಮನೋಭಾವ ನಮ್ಮೆಲ್ಲರಿಗೂ ಆದರ್ಶಪ್ರಾಯವಾಗಿದೆ. ಸೇವೆಯಿಂದ ನಿವೃತ್ತಿಗೊಂಡ ಇವರಿಗೆ ವಿಶ್ರಾಂತ ಜೀವನ ಸಂತೋಷದಾಯಕವಾಗಿರಲೆಂದು, ಆಡಳಿತ ಮಂಡಳಿ, ಅಧ್ಯಾಪಕರು, ಅಧ್ಯಾಪಕೇತರರು, ವಿದ್ಯಾರ್ಥಿಗಳು ಹಾಗೂ ಹಿತೈಷಿಗಳ ಪರವಾಗಿ ಹೃತ್ಪೂರ್ವಕವಾಗಿ ಹಾರೈಸುತ್ತೇವೆ.

ಆಶೀರ್ವದಿಸಿದ ಶ್ರೀ ಮಠದ ಪೀಠಾಧ್ಯಕ್ಷರು, ಎಲ್ಲಾ ಸಾಧುಸಂತರು ಹಾಗೂ ನಮ್ಮ ಕಾಲೇಜಿನ ಎಲ್ಲಾ ಕಾರ್ಯಕ್ರಮಗಳು ಉತ್ತಮವಾಗಿ ನಡೆಯಲು ಸಹಕರಿಸಿದ ಆಡಳಿತ ಮಂಡಳಿ, ಅಧ್ಯಾಪಕರು, ಅಧ್ಯಾಪಕೇತರರು, ವಿದ್ಯಾರ್ಥಿಗಳು, ಪೋಷಕರು, ಕಾಲೇಜು ಶಿಕ್ಷಣ ಇಲಾಖೆ, ಸರ್ಕಾರ ಮತ್ತು ಸಾರ್ವಜನಿಕರಿಗೆ ಅನಂತ ವಂದನೆಗಳು. ಈ ವಾರ್ಷಿಕ ಸಂಚಿಕೆಯನ್ನು ಅಂದವಾಗಿ ಮುದ್ರಿಸಿಕೊಟ್ಟ ಶ್ರೀ ಸ್ಕ್ರೀನ್ ಅಂಡ್ ಆಫ್‌ಸೆಟ್ ಪ್ರಿಂಟರ್ಸ್‌ನ ಮಾಲೀಕರಾದ ಶ್ರೀಯುತ ಶ್ರೀಕಾಂತ್ ಜಿ. ಅವರಿಗೆ ವಂದನೆಗಳು.

**ಡಾ. ಬಿ. ಕೆ. ಲೋಕೇಶ**
ಪ್ರಾಂಶುಪಾಲರು

| | | |
|---|---|---|
| ಕುತೂಹಲಕಾರಿಯಾಗಿರುವ ರಾಷ್ಟ್ರಪತಿ ಭವನ | ಕನ್ಯಾಕುಮಾರಿ ಕೆ. | 38 |
| ಕರ್ನಾಟಕದ / ಕನ್ನಡದ ಮೊದಲುಗಳು | ಅನು ಆರ್. | 39 |
| ನಮ್ಮೀ ಕಾಲೇಜು (ಕವಿತೆ) | ಅನು ಆರ್. | 40 |
| ಕರ್ನಾಟಕ ರಾಜ್ಯದ ಬಗ್ಗೆ ಕೆಲವು ಉಪಯುಕ್ತ ಮಾಹಿತಿ | ಶಫ್ಲಿಯಾ ಬಾನು | 41 |
| ಕಳೆದುಹೋದ ಅವಕಾಶ (ಕಥೆ) | ಪ್ರತಿಭಾ ಈ. | 42 |
| ಅನ್ನದಾನದ ಮಹಿಮೆ (ಕಥೆ) | ಕಾವ್ಯ ಕೆ. ಎನ್. | 43 |
| ಭಾರತದ ಪ್ರಪ್ರಥಮ ಮಹಿಳೆಯರು | ಸಿಮ್ರಾನ್ ಐ. | 45 |
| ಜನಪ್ರಿಯ ಒಗಟುಗಳು | ರಾಜಣ್ಣ ಜಿ. | 46 |
| ಕಂಪ್ಯೂಟರ್ ಗಾದೆಗಳು | ಆಯೇಷಾ ಕೆ. ಎ. | 47 |
| ನಗೆಹನಿಗಳು | ಚಂದ್ರಕಲಾ ಡಿ. | 47 |
| ನಗೆಹನಿಗಳು | ಲಾವಣ್ಯ ಎಲ್. ಬಿ. | 48 |
| A-Zವರೆಗಿನ ಗಂಡ-ಹೆಂಡತಿ ಸಂಭಾಷಣೆ | ಚಂದ್ರಕಲಾ ಡಿ. | 49 |
| ಅಮ್ಮ (ಕವಿತೆ) | ಭವಾನಿ ಬಿ. ಕೆ. | 50 |
| ಸ್ನೇಹವೆಂದರೆ..! (ಕವಿತೆ) | ತ್ರಿವೇಣಿ ಎಚ್. ಆರ್. | 50 |
| ಕನಸು (ಕವಿತೆ) | ನೇತ್ರಾವತಿ ಎಚ್. ಕೆ. | 51 |
| ರಾಷ್ಟ್ರಕವಿ ಕುವೆಂಪು (ಕವಿತೆ) | ಅಜಿತ್‌ಕುಮಾರ್ ಟಿ. ಪಿ. | 51 |
| ನನಸಲ್ಲಿ ಕನಸು ಬಿತ್ತುತ್ತಿರುವಾಗಲೇ ಹೊರಟುಬಿಟ್ಟರು (ಕವಿತೆ) | ಸ್ಫೂರ್ತಿ ಬಿ. ಎ. | 52 |
| ಪ್ರೀತಿಸುವ ಮನಸ್ಸುಗಳಿಗೆ ಒಂದು ಕಿವಿಮಾತು (ಕವಿತೆ) | ಯಶವಂತ್ ಕೆ. ಜೆ. | 53 |
| ಜೀವನವೆಂಬ ಬುಗುರಿ (ಕವಿತೆ) | ನೇತ್ರಾವತಿ ಎಚ್. ಕೆ. | 53 |
| ನಮ್ಮ ದೇಶದ ನಿಜವಾದ ನಾಯಕರು (ಕವಿತೆ) | ದರ್ಶನ್ ಬಿ. ಎಂ. | 54 |
| ಗುರುಕೃಪೆ (ಕವಿತೆ) | ಚಂದ್ರಕಲಾ ಡಿ. | 55 |
| ತಾನೆನ್ನುವುದೇ? (ಕವಿತೆ) | ಅಯೇಷಾ ಕೆ. ಎ. | 55 |
| ಸ್ನೇಹ (ಕವಿತೆ) | ಅನು ಆರ್. | 56 |
| ಹಿತವಚನ (ಕವಿತೆ) | ಮಾನಸ ಎಂ. ಜಿ. | 56 |
| ಚುಟುಕುಗಳು | ವಿಜಯಕುಮಾರ ಎನ್. ಟಿ. | 57 |
| ಚುಟುಕುಗಳು | ಸುಷ್ಮಿತ ಕೆ. | 57 |
| ಚುಟುಕುಗಳು | ರೋಹಿಣಿ ಬಿ. ವಿ. | 58 |
| ಚುಟುಕುಗಳು | ಪ್ರಿಯಾಂಕ ಎ. ಎಸ್. | 58 |
| ಚುಟುಕುಗಳು | ನವ್ಯ ಬಿ. ಆರ್. | 59 |
| ಚುಟುಕುಗಳು | ಭವಾನಿ ಬಿ. ಕೆ. | 59 |

# ಪರಿವಿಡಿ

## ಕನ್ನಡ ವಿಭಾಗ


| | | |
|---|---|---|
| ರಕ್ತದಾನ ಮಹಾದಾನ | ಡಾ. ಬಿ. ಕೆ. ಲೋಕೇಶ್ | 1 |
| ಕಾವ್ಯಗಳು ಕ್ರಾಂತಿ ಮಾಡಬಲ್ಲವು! | ಡಾ. ಎಂ. ಕೆ. ಮಂಜುನಾಥ | 3 |
| ಆದಿಚುಂಚನಗಿರಿ (ಕವಿತೆ) | ದರ್ಶನ್ ಬಿ. ಎಂ. | 7 |
| ನಾಗಮಂಗಲ ತಾಲ್ಲೂಕಿನ ಪ್ರಾಚೀನ ಜೈನ ಕೇಂದ್ರ : ಕಂಬದಹಳ್ಳಿ | ಶ್ರೀನಿವಾಸ್ ಎಚ್. ಎಂ. | 8 |
| ನಾಗಮಂಗಲ ತಾಲ್ಲೂಕಿನ ಪಕ್ಷಿನೋಟ | ದೇವಾನಂದ ಎನ್. ಆರ್. | 10 |
| ನಮ್ಮ ಹೆಮ್ಮೆಯ ಕಾಲೇಜು (ಕವಿತೆ) | ಅಜಿತ್‌ಕುಮಾರ್ ಟಿ. ಪಿ. | 11 |
| ಸಾರ್ಥಕ ಸೇವೆಗೈಯುತ್ತಿರುವ ರೆಡ್ ಕ್ರಾಸ್ ಸಂಸ್ಥೆ | ವಿಜಯಕುಮಾರ ಎನ್. ಟಿ. | 12 |
| ಬ್ಯಾಂಕಿಂಗ್ ವ್ಯವಸ್ಥೆಯನ್ನು ದುರ್ಬಲಗೊಳಿಸುವ ಹಗರಣಗಳು | ಪ್ರತಿಮ ಕೆ. | 14 |
| ಪರೀಕ್ಷೆ ಎದುರಿಸುವುದು ಹೇಗೆ? | ರಾಘವೇಂದ್ರ ಎನ್. ಆರ್. | 15 |
| ಕುವೆಂಪುರವರ ವಿಶ್ವಮಾನವ ಸಂದೇಶ | ಸಿಂಧು ಡಿ. ಎಲ್. | 16 |
| ಜೀವನದ ವಿಕಾಸಕ್ಕೆ ಮಾನವೀಯ ಮೌಲ್ಯಗಳ ಅವಶ್ಯಕತೆ | ರೇಖಾ ಪಿ. | 17 |
| ಕನ್ನಡ ನಾಡಿನಲ್ಲಿ ಕನ್ನಡದ ಸ್ಥಿತಿಗತಿ | ಭವಾನಿ ಬಿ. ಕೆ. | 18 |
| ಗುರುವಿನ ಮಹತ್ವ | ಸಮೀನ ಬಾನು | 20 |
| ಬೆಲೆ ಕಟ್ಟಲಾಗದ ಮಾಣಿಕ್ಯ ಅಮ್ಮ | ಕಾವ್ಯ ಆರ್. | 21 |
| 'ಅಮ್ಮ' ಎಂಬ ಕಾಮಧೇನು | ತಮನ್ನ ಸಹರ್ | 22 |
| ಆತ್ಮಹತ್ಯೆಯೇ ಪರಿಹಾರವೇ? | ಭಾಗ್ಯಶ್ರೀ ವಿ. | 23 |
| ಇಂದಿಗೂ ಬದಲಾಗದ ಸಮಾಜದ ದುಸ್ಥಿತಿ | ಚಂದನ ಎಂ. | 24 |
| ಯುವ ದೇಶಭಕ್ತನ ವೇದನೆ | ಕೌಶಿಕ್ | 25 |
| ಪ್ರಾಚೀನ ಹಳ್ಳಿಗಳಲ್ಲಿದ್ದ ವಿಶಿಷ್ಟ ಲೆಕ್ಕ ವ್ಯವಹಾರ | ಪವಿತ್ರ ಸಿ. ಎಸ್. | 26 |
| ನಿರುದ್ಯೋಗ ಸಮಸ್ಯೆ ನಿಜವಾಗಲೂ ಇದೆಯೇ..? | ರೋಹಿಣಿ ಬಿ. ವಿ. | 28 |
| ಸ್ವಚ್ಛಭಾರತ ಅಭಿಯಾನದಲ್ಲಿ ಗಂಗೆಗೆ ಕಾಯಕಲ್ಪ..! | ಆಯಿಷಾ ಸಿದ್ದೀಖ | 29 |
| ಗ್ರಾಮದ ಸ್ಪರ್ಶವಿಲ್ಲದೆ ಬದುಕಿದವರ ಬದುಕು ಪರಿಪೂರ್ಣವಲ್ಲ | ರಮ್ಯ ಕೆ. ವಿ. | 30 |
| ಕನ್ನಡದ ಜೊತೆಗೆ ಆಂಗ್ಲ ಭಾಷೆಯೂ ಬೇಕು! | ಹೇಮಾವತಿ ಸಿ. | 31 |
| ಮರೀಚಿಕೆಯಾಗುತ್ತಿರುವ ರಾಮರಾಜ್ಯ | ದರ್ಶನ್ ಕೆ. ಆರ್. | 33 |
| ಇವರ ಬದುಕಿನ ಕನಸಿಗೂ ಬೆಲೆ ಸಿಗುವಂತಿರಲಿ..! | ಮಂಜು ಕೆ. ಜಿ. | 34 |
| ನೆಮ್ಮದಿ ಎಲ್ಲಿದೆ...? ಹುಡುಕುವ ಪ್ರಯತ್ನದಲ್ಲಿ...! | ಶುಭ | 34 |
| ನಮ್ಮ ಜೀವನದಲ್ಲಿ ತಂದೆ-ತಾಯಿಯ ಪಾತ್ರ ಎಷ್ಟು ಮುಖ್ಯ? | ಪ್ರತಿಭಾ ಈ. | 35 |
| ಕಾಲದ ಶಕ್ತಿಯ ಮುಂದೆ ಎಲ್ಲರೂ ಕೈಕಟ್ಟಿ ಕೂರಲೇಬೇಕು..! | ರಮ್ಯ ಕೆ. ವಿ. | 37 |

| | | |
|---|---|---|
| ಕುತೂಹಲಕಾರಿಯಾಗಿರುವ ರಾಷ್ಟ್ರಪತಿ ಭವನ | ಕನ್ಯಾಕುಮಾರಿ ಕೆ. | 38 |
| ಕರ್ನಾಟಕದ / ಕನ್ನಡದ ಮೊದಲುಗಳು | ಅನು ಆರ್. | 39 |
| ನಮ್ಮೀ ಕಾಲೇಜು (ಕವಿತೆ) | ಅನು ಆರ್. | 40 |
| ಕರ್ನಾಟಕ ರಾಜ್ಯದ ಬಗ್ಗೆ ಕೆಲವು ಉಪಯುಕ್ತ ಮಾಹಿತಿ | ಶಫ್ಲಿಯಾ ಬಾನು | 41 |
| ಕಳೆದುಹೋದ ಅವಕಾಶ (ಕಥೆ) | ಪ್ರತಿಭಾ ಈ. | 42 |
| ಅನ್ನದಾನದ ಮಹಿಮೆ (ಕಥೆ) | ಕಾವ್ಯ ಕೆ. ಎನ್. | 43 |
| ಭಾರತದ ಪ್ರಪ್ರಥಮ ಮಹಿಳೆಯರು | ಸಿಮ್ರಾನ್ ಐ. | 45 |
| ಜನಪ್ರಿಯ ಒಗಟುಗಳು | ರಾಜಣ್ಣ ಜಿ. | 46 |
| ಕಂಪ್ಯೂಟರ್ ಗಾದೆಗಳು | ಆಯೇಷಾ ಕೆ. ಎ. | 47 |
| ನಗೆಹನಿಗಳು | ಚಂದ್ರಕಲಾ ಡಿ. | 47 |
| ನಗೆಹನಿಗಳು | ಲಾವಣ್ಯ ಎಲ್. ಬಿ. | 48 |
| A-Zವರೆಗಿನ ಗಂಡ-ಹೆಂಡತಿ ಸಂಭಾಷಣೆ | ಚಂದ್ರಕಲಾ ಡಿ. | 49 |
| ಅಮ್ಮ (ಕವಿತೆ) | ಭವಾನಿ ಬಿ. ಕೆ. | 50 |
| ಸ್ನೇಹವೆಂದರೆ..! (ಕವಿತೆ) | ತ್ರಿವೇಣಿ ಎಚ್. ಆರ್. | 50 |
| ಕನಸು (ಕವಿತೆ) | ನೇತ್ರಾವತಿ ಎಚ್. ಕೆ. | 51 |
| ರಾಷ್ಟ್ರಕವಿ ಕುವೆಂಪು (ಕವಿತೆ) | ಅಜಿತ್‌ಕುಮಾರ್ ಟಿ. ಪಿ. | 51 |
| ನನಸಲ್ಲಿ ಕನಸು ಬಿತ್ತುತ್ತಿರುವಾಗಲೇ ಹೊರಟುಬಿಟ್ಟರು (ಕವಿತೆ) | ಸ್ಫೂರ್ತಿ ಬಿ. ಎ. | 52 |
| ಪ್ರೀತಿಸುವ ಮನಸ್ಸುಗಳಿಗೆ ಒಂದು ಕಿವಿಮಾತು (ಕವಿತೆ) | ಯಶವಂತ್ ಕೆ. ಜೆ. | 53 |
| ಜೀವನವೆಂಬ ಬುಗುರಿ (ಕವಿತೆ) | ನೇತ್ರಾವತಿ ಎಚ್. ಕೆ. | 53 |
| ನಮ್ಮ ದೇಶದ ನಿಜವಾದ ನಾಯಕರು (ಕವಿತೆ) | ದರ್ಶನ್ ಬಿ. ಎಂ. | 54 |
| ಗುರುಕೃಪೆ (ಕವಿತೆ) | ಚಂದ್ರಕಲಾ ಡಿ. | 55 |
| ತಾನೆನ್ನುವುದೇ? (ಕವಿತೆ) | ಅಯೇಷಾ ಕೆ. ಎ. | 55 |
| ಸ್ನೇಹ (ಕವಿತೆ) | ಅನು ಆರ್. | 56 |
| ಹಿತವಚನ (ಕವಿತೆ) | ಮಾನಸ ಎಂ. ಜಿ. | 56 |
| ಚುಟುಕುಗಳು | ವಿಜಯಕುಮಾರ ಎನ್. ಟಿ. | 57 |
| ಚುಟುಕುಗಳು | ಸುಷ್ಮಿತ ಕೆ. | 57 |
| ಚುಟುಕುಗಳು | ರೋಹಿಣಿ ಬಿ. ವಿ. | 58 |
| ಚುಟುಕುಗಳು | ಪ್ರಿಯಾಂಕ ಎ. ಎಸ್. | 58 |
| ಚುಟುಕುಗಳು | ನವ್ಯ ಬಿ. ಆರ್. | 59 |
| ಚುಟುಕುಗಳು | ಭವಾನಿ ಬಿ. ಕೆ. | 59 |

## ENGLISH SECTION


| | | |
|---|---|---|
| Stress Management An Overview | Prof. Rajendra | 60 |
| Generation of Electricity Using Cow Urine | Boregowda S. | 61 |
| The Need for Developing Scientific Temper in Students | Sunil Kumar M. P. | 62 |
| Science in Daily Life | Nethravathi M. R. | 64 |
| Study Tips to Achieve Your Goals | Chandrashekar C. T | 65 |
| A Story of a Field Labour who Became C E O of a U S Company | Naveriya Banu | 66 |
| An Overview of Saumyakeshava Temple, Nagamangala | Srikanta B. J. | 68 |
| Positive Effects of Globalization | Anusha K. R. | 69 |
| Five Important Life Lessons Steve Jobs Wanted You to Learn | Swamy Gowda | 71 |
| 2017 - India's year in science | Shwetha S. | 73 |
| Civilization's crisis Tagore's Last Speech | Geetha H. P. | 75 |
| Importance of Travelling in Education | Dhanalakshmi H. | 77 |
| Ten reasons why education is Important | Leena | 78 |
| Five E-commerce Trends Everyone Should Pay Attention to in 2018 | Nagesha G. S | 80 |
| Small Verses | Bhavani B. K | 81 |
| Dr. A.P.J. Abdul Kalam | Ayeesha K. A | 82 |
| Mother | Ayeesha K. A | 82 |
| The Importance of Three | Roja K. | 83 |


## ವರದಿ ವಿಭಾಗ


| | |
|---|---|
| 2017–18ನೇ ಸಾಲಿನ ರಾಷ್ಟ್ರೀಯ ಸೇವಾ ಯೋಜನೆಯ ಕಾರ್ಯ ಚಟುವಟಿಕೆಗಳ ವರದಿ | 84 |
| 2017–18ನೇ ಸಾಲಿನ ಸಾಂಸ್ಕೃತಿಕ ವೇದಿಕೆ ವರದಿ | 86 |
| 2017–18ನೇ ಸಾಲಿನ ಕ್ರೀಡಾ ವರದಿ | 87 |
| 2017–18ನೇ ಸಾಲಿನ ಭಾರತ್ ಸ್ಕೌಟ್ಸ್ & ಗೈಡ್ಸ್ ಕಾರ್ಯ ಚಟುವಟಿಕೆಗಳ ವರದಿ | 88 |
| 2017–18ನೇ ಸಾಲಿನ ವಿಜ್ಞಾನ ವಿಭಾಗದ ವರದಿ | 89 |



# ರಕ್ತದಾನ ಮಹಾದಾನ

– ಡಾ. ಬಿ.ಕೆ.ಲೋಕೇಶ್, ಪ್ರಾಂಶುಪಾಲರು

'ಒಂದು ಬಾರಿ ರಕ್ತದಾನ ಒಬ್ಬರಿಗೆ ಜೀವದಾನ' ಎಂಬ ಉಕ್ತಿ ಅರ್ಥಪೂರ್ಣವಾದುದು ಹಾಗೂ ಔಚಿತ್ಯಪೂರ್ಣವಾದುದು. ದಾನಗಳಲ್ಲೇ ಶ್ರೇಷ್ಠದಾನ ಅನ್ನದಾನ ಮತ್ತು ವಿದ್ಯಾದಾನ ಎಂಬುದನ್ನು ಸಾಧುಸಂತರು, ಮಠಾದೀಶರು ಸಾರಿ, ಆ ನಿಟ್ಟಿನಲ್ಲಿ ಇವುಗಳಿಗೆ ಪ್ರಾಯೋಗಿಕ ಮಹತ್ವ ನೀಡಿದ್ದಾರೆ. ಇವುಗಳ ಜೊತೆಯಲ್ಲಿ ರಕ್ತದಾನ ಒಂದು ಮಹಾದಾನ ಎಂದು ಎಚ್ಚರಿಸುವ ಅನಿವಾರ್ಯತೆಯಿದೆ. ಇಂದಿನ ಸಂಕೀರ್ಣ ವೈದ್ಯಕೀಯ ಸಮಸ್ಯೆಗಳ ಸುಳಿಯಲ್ಲಿರುವ ಸಮಾಜದಲ್ಲಿ ರಕ್ತದಾನವು ಸರ್ವಶ್ರೇಷ್ಠ. ಈ ನಿಟ್ಟಿನಲ್ಲಿಯೇ ಯೋಚಿಸುವುದಾದರೆ ಸಮಾಜದ ಎಲ್ಲಾ ಅರಿತ ಜನತೆ ರಕ್ತದಾನ ಮಾಡಲು ಮುಂದಾಗಬೇಕು. ಈ ದಿಶೆಯಲ್ಲಿ ಕಾಲೇಜಿನ ಯುವಕರು ಸ್ವಪ್ರೇರಣೆಯಿಂದ ರಕ್ತದಾನದಲ್ಲಿ ಬಾಗಿಯಾಗಬೇಕು. ಸ್ವಯಂ ಸೇವಾ ಸಂಸ್ಥೆಗಳು, ರಾಷ್ಟ್ರೀಯ ಸೇವಾ ಯೋಜನೆಗಳು ಪ್ರೇರೇಪಿಸಬೇಕು.

**ರಕ್ತದ ಗುಂಪು ಮತ್ತು ಲಭ್ಯತೆ :** ಸರ್ವೆ ಸಾಮಾನ್ಯವಾಗಿ ಹೆಚ್ಚಿನ ಜನರ ದೇಹದಲ್ಲಿ A+ve, B+ve ಮತ್ತು O+ve ಗುಂಪಿನ ರಕ್ತವು ಲಭ್ಯವಿರುತ್ತದೆ. ಆದರೆ AB+ve, ಮತ್ತು ಎಲ್ಲಾ (-ve) ಗುಂಪಿನ ರಕ್ತ ವಿರಳ. ಈ ರೀತಿಯ ವಿರಳ ಗುಂಪಿನ ರಕ್ತವನ್ನು ಹೊಂದಿರುವವರು ತುರ್ತು ಸನ್ನಿವೇಶದಲ್ಲಿ ರಕ್ತದ ಅಲಭ್ಯತೆಯಿಂದ ತೊಂದರೆಗೊಳಗಾಗುವರು. ವಿರಳ ಗುಂಪಿನ ರಕ್ತ ಹೊಂದುರುವವರು ಆಪತ್ತಿನ ಸಮಯದಲ್ಲಿ ಇತರರ ಜೀವ ಉಳಿಸುವ ಭಾಗ್ಯ ಪಡೆದಿದ್ದೇವೆ ಎಂದು ಹೆಮ್ಮೆಪಡುವರು. ಪಾಪ! ಇವರ ಹೆಮ್ಮೆ ಹಿಂದೆ ಅಪಾಯದ ನೆರಳು ಹಿಂಬಾಲಿಸುತ್ತಿರುತ್ತದೆ. ಇವರು ರಕ್ತದಾನ ಮಾಡುವುದರಿಂದ ಅಮೂಲ್ಯ ಜೀವ ಉಳಿಸುವಂತಹ ಸಾಮರ್ಥ್ಯ ಹೊಂದಿದ್ದರೂ ವಿಷಾದದ ಸಂಗತಿಯೆಂದರೆ ತುರ್ತು ಸನ್ನಿವೇಶದಲ್ಲಿ ಇವರಿಗೆ ರಕ್ತ ದೊರೆಯದೆ ತೊಂದರೆಗೊಳಗಾಗುವರು. ಈ ಕಾರಣಕ್ಕಾಗಿಯೇ ಋಣಾತ್ಮಕ ಗುಂಪಿನ ರಕ್ತವನ್ನೊಂದಿರುವ ಜನರು ಅವಶ್ಯಕವಾದಗಲೆಲ್ಲಾ ನಿಯಮಾನುಸಾರ ರಕ್ತ ನೀಡಲು ಹಿಂಜರಿಯಬಾರದು ಮತ್ತು ಈ ಗುಂಪಿನ ರಕ್ತದಾನಿಗಳ ವಿಳಾಸವಿರಿಸಿಕೊಳ್ಳಬೇಕಾದ್ದು ಕಡ್ಡಾಯ.

**ರಕ್ತವನ್ನು ಯಾರು ಯಾರು ನೀಡಲು ಅರ್ಹರು? :** ರಕ್ತವನ್ನು 18 ರಿಂದ 45 ವರ್ಷದೊಳಗಿನ ಎಲ್ಲಾ ಆರೋಗ್ಯವಂತ ಸ್ತ್ರೀ ಪುರುಷರೆಲ್ಲರೂ ರಕ್ತದಾನ ಮಾಡಲು ಅರ್ಹರು. ರಕ್ತದಾನ ಕೊಡುವ ಈ ವಯಸ್ಸಿನವರು 50 ಕೆ.ಜಿ. ತೂಕವನ್ನೊಂದಿದ್ದು, ಇವರ ರಕ್ತದ ಹೆಮೋಗ್ಲೋಬಿನ್ ಪ್ರಮಾಣ 13.4 ಗ್ರಾಂ ಇರಬೇಕು ಎಂಬುದು ವೈದ್ಯರ ಸಲಹೆ. ಇಷ್ಟು ಅರ್ಹತೆಗಳಿದ್ದು, ಜೀವನದಲ್ಲಿ ಒಂದು ಬಾರಿಯಾದರೂ ರಕ್ತ ನೀಡುವುದು ನಾಗರೀಕನ ಆದ್ಯ ಕರ್ತವ್ಯ.

ಆರೋಗ್ಯವಂತರು ಪ್ರತೀ 3 ತಿಂಗಳಿಗೊಮ್ಮೆ ರಕ್ತ ನೀಡಲು ಯಾವುದೇ ಅಡ್ಡಿ ಇರುವುದಿಲ್ಲ ಎಂಬುದು ವೈದ್ಯರ ಸಲಹೆ. ಒಂದು ಬಾರಿಗೆ ಗರಿಷ್ಠ 300 ಎಂ.ಎಲ್ ನಷ್ಟು ರಕ್ತವನ್ನು ನೀಡಬಹುದು. ಹೀಗೆ ನಾವು ನೀಡಿದ 24 ಗಂಟೆಯೊಳಗೆ ವೃದ್ಧಿಯಾಗುತ್ತದೆ ಎಂಬುದು ತಜ್ಞವೈದ್ಯರ ಅಭಿಪ್ರಾಯ. ಹಣಕ್ಕಾಗಿ ರಕ್ತ ಮಾರಾಟ ಮಾಡುವವರು ರಕ್ತ ನೀಡಬೇಕಾದ ಅರ್ಹತೆಯನ್ನು ದಿಕ್ಕರಿಸಿ, ರಕ್ತ ನೀಡುವುದು ಅಪರಾಧ ಮತ್ತು ಸುರಕ್ಷತೆಯ ದೃಷ್ಟಿಯಿಂದಲೂ ಒಳ್ಳೆಯದಲ್ಲ. ಇದನ್ನು ತಪ್ಪಿಸಲೋಸ್ಕರವಾಗಿಯೇ ಕೆಲವೇ ಸಂಸ್ಥೆಯ ಮತ್ತು ಆಸ್ಪತ್ರೆಯ ರಕ್ತನಿಧಿಗಳಿಗೆ ರಕ್ತ ಸಂಗ್ರಹಿಸಿಸಲು ಮತ್ತು ರಕ್ತದಾನ ಶಿಬಿರ ನಡೆಸಲು ಅನುಮತಿ ಇದೆ.

**ರಕ್ತದಾನದ ಮಹತ್ವ :** ರಕ್ತದಾನದ ಮಹತ್ವವನ್ನು ಯಾವ ಪದಗಳಿಂದ ವರ್ಣಿಸಿದರೂ ಕಡಿಮೆಯೇ. ರಕ್ತದಾನದಿಂದ ದೊರೆಯುವ ಅನುಕೂಲ ಮತ್ತು ರಕ್ತದಾನಿಗೆ ಲಭಿಸುವ ಗೌರವದ ಅಂಶಗಳನ್ನು ಕೆಳಕಂಡಂತೆ ಪಟ್ಟಿ ಮಾಡಬಹುದು.

1. ರಕ್ತದಾನಿಗಳು ರಕ್ತ ನೀಡುವುದರಿಂದ ಒಂದು ಜೀವವನ್ನು ಉಳಿಸಿದ ಗೌರವಕ್ಕೆ ಪಾತ್ರರಾಗುತ್ತಾರೆ. ಜೀವನದಲ್ಲಿ

ಏನನ್ನೂ ಗಳಿಸದಿದ್ದರೂ, ಸಾಧಿಸದಿದ್ದರೂ ರಕ್ತ ನೀಡಿ ಜೀವ ಉಳಿಸಿದ ಕೀರ್ತಿಗೆ ಪಾತ್ರರಾಗುತ್ತಾರೆ.

2. ರಕ್ತ ನೀಡುವುದರಿಂದಾಗಿ ಪಡೆದ ರಕ್ತಕ್ಕೆ ಸಂಬಂಧಿಸಿದ ಎಲ್ಲಾ ತಪಾಸಣೆ ನಡೆಸಲಾಗುತ್ತದೆ. ಆ ರಕ್ತದ ಗುಂಪು, ಹೆಪಟೈಟೀಸ್ 'ಬಿ' (ಜಾಂಡೀಸ್), ಹೆಮೋಗ್ಲೋಬಿನ್, ಹೆಚ್.ಐ.ವಿ (ಏಡ್ಸ್)ಗೆ ಸಂಬಂಧಿಸಿದ ತಪಾಸಣೆಯನ್ನು ಕಡ್ಡಾಯವಾಗಿ ನಡೆಸಿ ಈ ಸಂಬಂಧ ದೋಷಗಳಿದ್ದಲ್ಲಿ ರಕ್ತ ನೀಡಿದಾತನಿಗೆ ಮಾಹಿತಿ ನೀಡಲಾಗುತ್ತದೆ.

3. ಕಾಲೇಜಿನ ವ್ಯಾಸಂಗದ ಅವಧಿಯಲ್ಲಿ ರಾಷ್ಟ್ರೀಯ ಸೇವಾ ಯೋಜನೆಯಲ್ಲಿ ಸೇವೆ ಸಲ್ಲಿಸುವ ವಿದ್ಯಾರ್ಥಿಗಳಿಗೆ ಉನ್ನತ ವ್ಯಾಸಂಗಕ್ಕಾಗಿ ವಿಶ್ವವಿದ್ಯಾನಿಲಯ ಕೃಪಾಂಕ ನಿಗದಿಪಡಿಸಿದೆ. ಪ್ರತಿ ಬಾರಿಗೆ 3 ಪಾಯಿಂಟ್‌ಗಳಂತೆ 3 ಬಾರಿ ರಕ್ತ ನೀಡಿದ್ದಕ್ಕಾಗಿ ಒಟ್ಟು 9 ಪಾಯಿಂಟ್‌ಗಳನ್ನು ವಿಶ್ವವಿದ್ಯಾನಿಲಯ ನಿಗದಿಪಡಿಸಿ ಉನ್ನತ ವ್ಯಾಸಂಗದ ಸೀಟು ಹಂಚಿಕೆಯಲ್ಲಿ ಅವಕಾಶ ಕಲ್ಪಿಸಿದೆ.

4. ಯಾವುದೇ ರಕ್ತದಾನ ಶಿಬಿರದಲ್ಲಿ ಭಾಗವಹಿಸಿ ರಕ್ತ ನೀಡಿದ ದಾನಿ ಅದಕ್ಕೆ ಸಂಬಂಧಿಸಿದ ಪ್ರಮಾಣಪತ್ರ ಪಡೆಯುತ್ತಾನೆ. ಈತನಿಗೆ ತುರ್ತಾಗಿ ರಕ್ತ ಬೇಕಾಗಿದ್ದಲ್ಲಿ ಈ ಪ್ರಮಾಣಪತ್ರದ ಆಧಾರದ ಮೇಲೆ ಯಾವುದೇ ಅಧಿಕೃತ 'ರಕ್ತನಿಧಿ'ಯಲ್ಲಿ ತಾನು ನೀಡಿದ ರಕ್ತದ ಪ್ರಮಾಣದಷ್ಟೇ ರಕ್ತ ಪಡೆಯಬಹುದಾಗಿದೆ.

**ರಕ್ತ ನೀಡುವಿಕೆಯ ಅಪಾಯದ ಬಗ್ಗೆ ಇರುವ ತಪ್ಪು ತಿಳುವಳಿಕೆ :** ರಕ್ತದಾನದ ಶ್ರೇಷ್ಠತೆ ಮಹತ್ವದ ಅರಿವು ಪ್ರತಿಯೊಬ್ಬರಿಗೂ ಇದ್ದಾಗ್ಯೂ ರಕ್ತದಾನದಿಂದಾಗುವ ಪರಿಣಾಮಗಳ ಬಗ್ಗೆ ಸಂಶಯ ಮತ್ತು ಭಯ ದಾನಿಗಳನ್ನು ಧೈರ್ಯಹೀನರನ್ನಾಗಿ ಮಾಡಿದೆ. ರಕ್ತ ನೀಡುವುದರಿಂದ ತೂಕ ಕಡಿಮೆಯಾಗುತ್ತದೆ. ಮತ್ತ್ಯಾವುದೋ ರೋಗಕ್ಕೆ ಬಲಿಯಾಗುತ್ತೇವೆಂಬ ತಪ್ಪು ತಿಳುವಳಿಕೆಯಿಂದ ರಕ್ತ ನೀಡಲು ಹಿಂಜರಿಯುತ್ತಾರೆ. ಇಂದಿನ ಯುವಕ ಯುವತಿಯರು ರಕ್ತ ನೀಡಲು ಮುಂದಾಗಬಹುದಾದರೂ ಬಹುಪಾಲು ತಂದೆತಾಯಿಗಳು ಸಮ್ಮತಿಸಲಾರರು. ಇಂತಹ ಪೋಷಕರಿಗೆ ವೈದ್ಯರ ಸಲಹೆಯ ಆಧಾರದ ಮೇಲೆ ತಿಳಿಸಬಹುದಾದ ಅಂಶವೇನೆಂದರೆ ನಿಗದಿತ ಅವಧಿಯಲ್ಲಿ ನಿಗದಿತ ಅರ್ಹತೆಯುಳ್ಳವರು ರಕ್ತದಾನ ಮಾಡುವುದರಿಂದ ಆರೋಗ್ಯದ ಮೇಲೆ ಯಾವುದೇ ದುಷ್ಪರಿಣಾಮವಾಗಲಾರದು ಮತ್ತು ಜೀವದ ಅಪಾಯವಿಲ್ಲ. ಯಾವ ರಕ್ತದಾನಿಯೂ ರಕ್ತ ನೀಡಿ ಮರಣವನ್ನಪ್ಪಿದ ನಿದರ್ಶನಗಳಿಲ್ಲ.

ರಕ್ತ ನೀಡುವುದು ಮಾನವೀಯ ಕರ್ತವ್ಯ, ನೈತಿಕ ಹೊಣೆಗಾರಿಕೆ. ರಕ್ತ ನೀಡಲಾಗದಿದ್ದರೆ ಬೇಡ, ರಕ್ತದಾನದ ಬಗ್ಗೆ ಗೌರವ ಇರಬೇಕಾದುದು ಪ್ರತಿಯೊಬ್ಬರ ಹೊಣೆಗಾರಿಕೆ. 1999 ರ ಅಕ್ಟೋಬರ್ 1ರ ಅಂತರಾಷ್ಟ್ರೀಯ ಸ್ವಯಂ ಪ್ರೇರಣಾ ರಕ್ತದಾನ ದಿನದ ಪ್ರಯುಕ್ತ ನಮ್ಮ ಕಾಲೇಜಿನಲ್ಲಿ ರಕ್ತದಾನ ದಿನದ ಪ್ರಯುಕ್ತ ನಮ್ಮ ಕಾಲೇಜಿನಲ್ಲಿ ರಕ್ತದಾನ ಶಿಬಿರ ವ್ಯವಸ್ಥೆಗೊಳಿಸಿಸುವ ಸನ್ನಿವೇಶದಲ್ಲಿ ವಿದ್ಯಾರ್ಥಿಗಳನ್ನು ಮನವೊಲಿಸುವ ಒಂದು ಪ್ರಸಂಗದಲ್ಲಿ ಆರೋಗ್ಯವಂತ ಹಾಗೂ ರಕ್ತ ನೀಡಲು ಅರ್ಹತೆಯುಳ್ಳ ವಿದ್ಯಾರ್ಥಿಯೊಬ್ಬ 'ನನಗೆ ರಕ್ತಬೇಕು ಕೊಡಿ ಎಂದು ಕುಚೋದ್ಯದಿಂದ ಉದ್ಧಟತನ ತೋರಿಸಿ ಮಾತನಾಡಿ ರಕ್ತನೀಡಲು ನಿರಾಕರಿಸಿದ್ದುಂಟು. ಆದರೆ ರಕ್ತದಾನ ಶಿಬಿರ ನಡೆದ ಕೇವಲ ಒಂದೇ ತಿಂಗಳಲ್ಲಿ ಆತನ ಮಾತೃಶ್ರೀ ಶಸ್ತ್ರಚಿಕಿತ್ಸೆಗೊಳಗಾಗಿ ರಕ್ತ ಅವಶ್ಯಕವಾದಾಗ ಆತನ ಉದ್ಧಟತನ ಕರಗಿ ನೀರಾಗಿತ್ತು. ಕೊನೆಗೆ ನಮ್ಮ ಕಾಲೇಜಿನ ವಿದ್ಯಾರ್ಥಿನಿಯೊಬ್ಬಳು ಹೃದಯವಂತಿಕೆಯಿಂದ ಆತನ ತಾಯಿಗೆ ರಕ್ತ ನೀಡಿ ಪ್ರಾಣಾಪಾಯದಿಂದ ಪಾರು ಮಾಡಿದಳು. ಅಂದಿನಿಂದ ಆ ವಿದ್ಯಾರ್ಥಿಗೆ ರಕ್ತದಾನ ಬಗ್ಗೆ ವಿಶೇಷ ಗೌರವವಿದೆ. ಈ ಎಲ್ಲಾ ಹಿನ್ನಲೆಯಲ್ಲಿ ರಕ್ತದಾನ ಕಾರ್ಯವನ್ನು, ರಕ್ತದಾನಿಗಳನ್ನು ಗೌರವಿಸೋಣ, ಪ್ರೋತ್ಸಾಹಿಸೋಣ.

* * * * *

ಧರ್ಮವು ಋಷಿಮುನಿಗಳ ಅನುಭವಜನ್ಯ ಜ್ಞಾನ. ಈ ಜ್ಞಾನವೇ ಮನುಕುಲದ ದಾರಿದೀಪ. ಜೀವಜಗತ್ತಿನ ಉಳಿವಿಗೆ ಆಧಾರಸ್ತಂಭವಾಗಿರುವ ಧರ್ಮದ ಪ್ರಕಾರ ಕಾರ್ಯನಿರ್ವಹಣೆ ಮಾಡಬೇಕು.

**– ಜಗದ್ಗುರು ಶ್ರೀ ಶ್ರೀ ಶ್ರೀ ಡಾ. ಬಾಲಗಂಗಾಧರನಾಥ ಮಹಾಸ್ವಾಮೀಜಿಯವರು**

# ಕಾವ್ಯಗಳು ಕ್ರಾಂತಿ ಮಾಡಬಲ್ಲವು!

– ಡಾ. ಎಂ.ಕೆ.ಮಂಜುನಾಥ, ಸಹಾಯಕ ಪ್ರಾಧ್ಯಾಪಕರು

ಜಗತ್ತಿನಲ್ಲಿ ನಡೆದಿರುವ ಕ್ರಾಂತಿಗಳನ್ನು ಅವಲೋಕಿಸಿದಾಗ, ಕ್ರಾಂತಿಗೆ ಕವಿಗಳು ಪ್ರೇರಕ ಶಕ್ತಿಯಾಗಿ ನಿಂತಿರುವುದನ್ನು ಕಾಣಬಹುದು. ಕವಿಗಳು ಜನರ ಮನಸ್ಸಿನಲ್ಲಿ ಕವಿತೆಗಳ ಮೂಲಕ ಕ್ರಾಂತಿಯ ಕಿಡಿಯನ್ನು ಹಚ್ಚಿಸಬಲ್ಲರು. ಕವಿತೆಗಳು ಜನರ ಹೃದಯವನ್ನು ಬಹುಬೇಗನೆ ತಲುಪುತ್ತವೆ. ಕಾವ್ಯಗಳು ಕೊರಡನ್ನು ಚಿಗುರಿಸುವ ಶಕ್ತಿ ಪಡೆದಿವೆ. ಮನುಷ್ಯನ ಅಂತರಂಗದ ದನಿಯ ಮೂರ್ತ ಸ್ವರೂಪವಾಗಿವೆ. ಕಾವ್ಯಗಳು ಮನುಷ್ಯ- ಮನುಷ್ಯರ ಹೃದಯಗಳನ್ನು ಬೆಸೆಯುವ ಕೊಂಡಿಯಾಗಿವೆ. ಕಾವ್ಯಗಳು ಜಡ್ಡುಗಟ್ಟಿದ ಹಳೆವ್ಯವಸ್ಥೆಯ ತೊಳೆದು ನವಸಮಾಜದ ನಿರ್ಮಾಣಕ್ಕೆ ಮುನ್ನುಡಿಯಾಗಿ ಹೊಸ ಕ್ರಾಂತಿಯನ್ನೇ ಮಾಡಿವೆ. ಪ್ರಸ್ತುತ ಈ ಲೇಖನದಲ್ಲಿ ಕಾವ್ಯಗಳ ಮೂಲಕ ಕನ್ನಡ ನಾಡಿನ ಏಕೀಕರಣ ನಡೆದಂಥ ವಿಚಾರವನ್ನು ಕುರಿತು ಚರ್ಚಿಸಿದ್ದೇನೆ.

1956ನೇ ನವೆಂಬರ್ 1 ರಂದು ಕರ್ನಾಟಕ ಏಕೀಕರಣವಾಗುವುದಕ್ಕಿಂತ ಮುಂಚೆ ವಿವಿಧ ಭಾಷೆಗಳ ರಾಜ್ಯಾಡಳಿತಗಳಲ್ಲಿ ಹರಿದು ಹಂಚಿ ಹೋಗಿದ್ದ ಕನ್ನಡದ ನೆಲವನ್ನು ಒಗ್ಗೂಡಿಸುವ ಹೋರಾಟದ ಚಳುವಳಿಗೆ ಸಾಹಿತಿಗಳ ಬರಹ ಮತ್ತು ಕಾವ್ಯಗಳು ಪ್ರೇರಕ ಶಕ್ತಿಗಳಾಗಿ ಕಾರ್ಯ ನಿರ್ವಹಿಸಿರುವುದನ್ನು ಕಾಣಬಹುದು. ಏಕೀಕರಣದ ಚಿಂತನೆಯನ್ನು ಸಾಹಿತಿಗಳು ತಮ್ಮ ಬರವಣಿಗೆಯ ಮೂಲಕ ಹುಟ್ಟುಹಾಕಲು ದೇಶೀಯವಾದ ಅಂದರೆ ಕನ್ನಡ- ಕರ್ನಾಟಕದ ಪ್ರತೀಕ, ಸಂಕೇತಗಳನ್ನು ಬಳಸಿಕೊಂಡ ಬಗೆ ವಿಶಿಷ್ಟವಾದುದು. ದೇಶವನ್ನು ತಾಯಿಯಾಗಿ, ನಾಡನ್ನು ಮಗಳಾಗಿ ನೋಡಿದ ನೋಟ ಹಾಗೂ ಪ್ರೇರೇಪಿಸಿದ ಧಾಟಿಯನ್ನು ಗಮನಿಸುವುದು ಮುಖ್ಯ.

ಕನ್ನಡಿಗರ ಮತ್ತು ಕನ್ನಡ ನಾಡಿನ ಅಸಾಮಾನ್ಯ ಸಾಧನೆಗಳನ್ನು ಕುರಿತು ಆಲೂರು ವೆಂಕಟರಾಯರು 'ಕರ್ನಾಟಕ ಗತ ವೈಭವ' ಎಂಬ ಕೃತಿಯನ್ನು ರಚಿಸಿದರು. ಈ ಮೂಲಕ ಮೊದಲ ಬಾರಿಗೆ ನಾಡಿನ ಕಿರುಪರಿಚಯ ಮಾಡಿಕೊಂಡ ಜನತೆ ಅದರ ಅಸ್ತಿತ್ವಕ್ಕಾಗಿ ಹಾತೊರೆಯಲಾರಂಭಿಸಿತು. ಈ ಕೃತಿಯು ತೂಕಡಿಸುತ್ತಿದ್ದ ಕನ್ನಡಿಗರನ್ನು ಜಾಗೃತಗೊಳಿಸಿತು. ಈ ಕೃತಿಯಲ್ಲಿ ಆಲೂರರು 'ಕನ್ನಡಿಗರೇ ಕರ್ನಾಟಕದಲ್ಲಿ ಕಾರ್ಯ ಮಾಡದಿದ್ದರೆ ಇನ್ನಾರು ಮಾಡುವರು?' ಎಂಬ ದೃಢನಿಷ್ಠೆಯ ಮಾತು ಕನ್ನಡಿಗರಿಗೆ ನೀಡಿದ ಸ್ಪಷ್ಟ ಕರೆಯಾಗಿತ್ತು ಇದು. ಖಂಡ ತುಂಡವಾಗಿರುವ ಕನ್ನಡನಾಡನ್ನು ಒಂದು ಮಾಡಲು ನಿಜವಾದ ಕನ್ನಡಿಗನಿಂದ ಮಾತ್ರ ಸಾಧ್ಯ. ಏಕೀಕರಣಕ್ಕಾಗಿ ಜನಮನವನ್ನು ಜಾಗೃತಗೊಳಿಸುವ ಕೈಂಕರ್ಯಕ್ಕೆ ತಮ್ಮನ್ನು ಸಂಪೂರ್ಣವಾಗಿ ಸಮರ್ಪಿಸಿಕೊಂಡರು. ಕರ್ನಾಟಕ ವಿದ್ಯಾವರ್ಧಕ ಸಂಘ ಹಾಗೂ ಕನ್ನಡ ಸಾಹಿತ್ಯ ಪರಿಷತ್ತುಗಳನ್ನು ಏಕೀಕರಣದತ್ತ ಸೆಳೆದದ್ದು ಕನ್ನಡ ಕುಲಪುರೋಹಿತ ಆಲೂರರ ಅಪೂರ್ವವಾದ ಪ್ರಯತ್ನವೆಂದೇ ಹೇಳಬಹುದು.

'ಕರ್ನಾಟಕತ್ವವೆಂದರೆ ಕೇವಲ ದೇಶಾಭಿಮಾನವಲ್ಲ, ಭಾಷಾಭಿಮಾನವೂ ಅಲ್ಲ. ಇವೆಲ್ಲವುಗಳನ್ನು ಒಳಗೊಂಡ ಪರಿಶುದ್ಧ ಭಾವನೆ. ಕರ್ನಾಟಕವೆಂಬುದೊಂದು ಜನಾಂಗವು, ಅದಕ್ಕೆ ಒಂದೇ ಒಂದು ಶರೀರ, ಮನಸ್ಸು ಮತ್ತು ಆತ್ಮಗಳಿರುತ್ತವೆಂಬ ಭಾವನೆ ಎಲ್ಲಿಯವರೆಗೆ ನಮ್ಮಲ್ಲಿ ಉತ್ಪನ್ನವಾಗುವುದಿಲ್ಲವೊ ಅಲ್ಲಿಯವರೆಗೆ ನಮ್ಮ ಕನ್ನಡ ನುಡಿಯ ಅಭಿವೃದ್ಧಿ ಭರದಿಂದ ಸಾಗಲಾರದು' ಎಂಬ ಆಲೂರರ ನುಡಿಗಳು ಸಾರ್ವಕಾಲಿಕ ಸತ್ಯ ಸಂಗತಿಗಳಾಗಿವೆ. ಕನ್ನಡ ಕಣ್ವ ಬಿ.ಎಂ.ಶ್ರೀಕಂಠಯ್ಯನವರು ಏಕೀಕರಣ ಚಳುವಳಿಯಲ್ಲಿ ಅದ್ವಿತೀಯವಾದ ಪಾತ್ರ ವಹಿಸಿರುವುದನ್ನು ಕಾಣಬಹುದು. 'ಕನ್ನಡ ತಲೆಯೆತ್ತುವ ಬಗೆ'ಯನ್ನು ನಾಡಿನಾದ್ಯಂತ ಪಸರಿಸಿದ ಇವರು ಕನ್ನಡಿಗನಲ್ಲಿ ಆತ್ಮಾಭಿಮಾನವನ್ನು ಜಾಗೃತಗೊಳಿಸಲು ಹಲವಾರು ಮಾರ್ಗಗಳಲ್ಲಿ ಸಾಗಿದರು. ಇವರ 'ಕನ್ನಡ ತಾಯ ನೋಟ' ಕವಿತೆ ಇದಕ್ಕೆ ಸಾಕ್ಷಿಯಾಗಿದೆ.

'ಒಕ್ಕೊರಲಲೆಲ್ಲರೂ ಕೂಗಿ ಈ ಒಕ್ಕೂಗ- ಈ ಹಿರಿಯ ಕೂಗ
ಸಿರಿಗನ್ನಡಂ ಗೆಲ್ಗೆ, ಸಿರಿಗನ್ನಡಂ ಗೆಲ್ಗೆ, ಸಿರಿಗನ್ನಡಂ ಗೆಲ್ಗೆ, ಬಾಳ್ಗೆ
ಕನ್ನಡದ ತಾಯ್ ಗೆಲ್ಗೆ ಬಾಳ್ಗೆ'

ಎಂದು ಎಲ್ಲರೂ ಕನ್ನಡದ ಏಳ್ಗೆಗಾಗಿ ಒಗ್ಗೂಡಬೇಕೆಂದು ಬಯಸಿದವರು. ಈ 'ಕನ್ನಡ ತಾಯ ನೋಟ'ದಲ್ಲಿ ಕನ್ನಡ ತಾಯಿಯೇ ತನ್ನ ದುರ್ವಿಧಿಯನ್ನು ಮಕ್ಕಳ ಮುಂದೆ ತೋಡಿಕೊಳ್ಳುವುದನ್ನು ಕಲ್ಪಿಸಿರುವುದು ನಿಜಕ್ಕೂ ಎಂಥವರ ಮನವನ್ನು ಕಲಕುವಂತಿದೆ.

ಕನ್ನಡ ನಾಡಿನ ಒಕ್ಕೂಟಕ್ಕೆ ಹಂಬಲಿಸಿ ಅದಕ್ಕಾಗಿ ದುಡಿಯುವ ಕನ್ನಡ ಪಡೆಯನ್ನು ಕನ್ನಡಾಭಿಮಾನಿಗಳನ್ನು ರೂಪಿಸಿ, ಬೆಳೆಸಿದ ಕೀರ್ತಿ ಮಹಾನ್ ಗುರು ಟಿ.ಎಸ್.ವೆಂಕಣ್ಣಯ್ಯ ಅವರದು. ಹುಯಿಲಗೋಳ ನಾರಾಯಣರಾಯರು ಬಾಲ್ಯದಿಂದ ಕನ್ನಡದ ಸ್ಥಿತಿಗತಿಯ ಬಗ್ಗೆ ಮನ ಕದಡಿಸಿಕೊಂಡವರು. ಅವರ ಹದಿನಾಲ್ಕನೇ ವಯಸ್ಸಿನಲ್ಲೇ 1908ರಲ್ಲಿ ರಚಿಸಿದ 'ಕನಸು' ಷಟ್ಪದಿಯಲ್ಲಿ ಅಲೆವ ದಾರಿಹೋಕನ ಮಾತಿನಲ್ಲಿ ಕನ್ನಡದ ದುಃಸ್ಥಿತಿಯನ್ನು ಹಿಡಿದಿಡುವ ಪ್ರಯತ್ನ ಮಾಡಿದ್ದರೆಂದರೆ ಕನ್ನಡದ ಬಗೆಗಿನ ಅವರ ತುಡಿತ ಎಂಥದ್ದೆಂಬುದು ತಿಳಿಯುತ್ತದೆ. ಕನಸು ಕವನದ ಸಾಲುಗಳನ್ನು ಈ ಕೆಳಕಂಡಂತೆ ನೋಡಬಹುದು.

'ಅಗರುಗಾಣುವ ಮುರುಕು ಮನೆಯೊಳು
ಪೊಗರುವಿಲ್ಲದೆ ಪೊಗೆಯು ತುಂಬಿದೆ
ಜಿಗಡು ಹರಡಿಹ ಕರಡು ನೆಲದೊಳು ಬರದು ಕಾಲಿಡಲು
ಮಗನೆ ಕರ್ನಾಟಕದ ದೊರೆಯಾಳ್ದ
ಜಗಲಿಯಿದು ಜಗುಳಿದುದು ವೊಳಗಣ
ಬಗೆಯ ಪೇಳಲು ಬಗೆಯ ಕಾಣೆನು ಮಾಡಲಿನ್ನೇನು?

ನಾರಾಯಣರಾಯರು ತಮ್ಮ ಕವಿತೆಗಳ ಮೂಲಕ ತಮ್ಮ ಕನ್ನಡನಾಡು ಉದಯದ ಬಗೆಗಿನ ಭವಿಷ್ಯದ ಕನಸ್ಸನ್ನು ಕಟ್ಟಿಕೊಡುವ ರೀತಿ ವಿಶಿಷ್ಟವಾದುದು.

'ಉದಯವಾಗಲಿ ನಮ್ಮ ಚೆಲುವ ಕನ್ನಡನಾಡು
ಬದುಕು ಬಲಹಿನ ನಿಧಿಯು ಸದಭಿಮಾನದ ಗೂಡು'

ಈ ಸಾಲುಗಳು 1924ರ ಬೆಳಗಾಂ ಕಾಂಗ್ರೆಸ್ ಅಧಿವೇಶನದಲ್ಲಿ ಪ್ರಾರ್ಥನಾ ಗೀತೆಯಾಗಿ, ನಂತರ ಪ್ರತಿಯೊಬ್ಬ ಕನ್ನಡಿಗನ ಏಕೀಕರಣದ ಹಂಬಲ ಹೊತ್ತ ನಾಡಗೀತೆಯಾಗಿ ಮೊಳಗಿತು.

'ಕನ್ನಡ ಕವಿಚರಿತೆ'ಯ ಮೂಲಕ ಕನ್ನಡದ ಕವಿವೈಭವ ಪರಂಪರೆಯನ್ನು ಕಟ್ಟಿಕೊಟ್ಟ ಆರ್.ನರಸಿಂಹಾಚಾರ್ಯರು 'ಪ್ರಸ್ತುತ ಕಾಲಕ್ಕೆ ಅನುಗುಣವಾಗಿ ಕನ್ನಡಿಗರೆಲ್ಲರೂ ಅಸಡ್ಡೆಯನ್ನು ತೊಲಗಿಸಿ, ಭಾಷೆ ಸೇವೆಯಲ್ಲಿ ನಿರತರಾಗಬೇಕು' ಎಂದು ಕರೆಕೊಟ್ಟರೆ, ಬೆಳ್ಳಾವೆ ವೆಂಕಟ ನಾರಾಯಣಪ್ಪನವರು 'ಕನ್ನಡ ಮಾತೆಯ ಸೇವೆಯನ್ನು ಮನವೊಪ್ಪಿದ ರೀತಿಯಲ್ಲಿ ಮಾಡಿ ತೃಪ್ತಿ ಪಡಬೇಕೆಂಬುದೇ ನನ್ನ ಕೋರಿಕೆ' ಎಂದು ತಮ್ಮ ಅಂತರಾಳದ ಕೋರಿಕೆಯನ್ನು ತೆರೆದಿಡುತ್ತಾರೆ. 'ಕನ್ನಡ ದೇಶದಲ್ಲಿ ಕನ್ನಡಕ್ಕೆ ಪ್ರಾಶಸ್ತ್ಯ ಕೊಡದೇ ಹೋದರೆ ಮೆಕ್ಸಿಕೋ ದೇಶದವರೋ, ನ್ಯೂಜಿಲ್ಯಾಂಡ್‌ನವರೋ ಕೊಡುತ್ತಾರೆಯೇ?' ಇದು ಎ.ಆರ್.ಕೃಷ್ಣಶಾಸ್ತ್ರಿಗಳ ಮನಚುಚ್ಚುವ ಪ್ರಶ್ನೆಯಾಗಿದೆ. ಇವರ ಈ ಮಾತು ಏಕೀಕರಣಕ್ಕಿಂತ ಮುಂಚಿನದಾದರೂ ಏಕೀಕರಣವಾದರೂ ಕನ್ನಡ ಭಾಷೆಗೆ ಕರ್ನಾಟಕದಲ್ಲಿ ಸರಿಯಾದ ಪ್ರಾಶಸ್ತ್ಯ ದೊರೆಯದಿರುವುದನ್ನು ಕಾಣಬಹುದು.

ಶಾಂತಕವಿಗಳು ತಮ್ಮನ್ನು 'ಕನ್ನಡದ ದಾಸಯ್ಯ' ಎಂದು ಕರೆದುಕೊಂಡು 'ಬೇಡಲು ಕನ್ನಡ ದಾಸಯ್ಯ ಬಂದಿಹ ನೀಡಿರಮ್ಮ ತಡ ಮಾಡದಲೆ' ಎಂದು ಅನ್ಯ ಭಾಷೆಗಳ ರೀತಿಯಲ್ಲಿ ಕನ್ನಡವನ್ನು ಬೆಳೆಸಬೇಕೆಂಬ ತಮ್ಮ ಆಕಾಂಕ್ಷೆಯನ್ನು ತಿಳಿಸುತ್ತಾ ಅದಕ್ಕಾಗಿ ಕನ್ನಡ ಮಾತಿನ ಜೋಗುಳವನ್ನು ಕೇಳಿ ಕನ್ನಡದ ತೋಳಿನಲ್ಲಾಡಿ, ಕನ್ನಡ ದೇಶದಲ್ಲಿ ದೊಡ್ಡವರಾಗಿ ಕನ್ನಡ ವಿದ್ಯೆಯ ಗಳಿಸಿದವರೆಲ್ಲರೂ ಸಹಾಯ ಮಾಡಬೇಕೆಂದು ಕೋರುತ್ತಾರೆ. 'ಕನ್ನಡಕ್ಕೆ ಕನ್ನಡದ ಮೂಲಕವೇ ಮೋಕ್ಷ' ಎಂದು ಸಾರಿದ ತಿ.ತಾ.ಶರ್ಮರು ಕಾರವಾರ, ಅಂಕೋಲ, ಭಟ್ಕಳ ಮುಂತಾದ ಕರಾವಳಿ ಪ್ರದೇಶಗಳಲ್ಲಿ ಪ್ರವಾಸ ಕೈಗೊಂಡು, ಏಕೀಕರಣಕ್ಕೆ ಸಂಬಂಧಿಸಿದ ತಮ್ಮ ಅಭಿಲಾಷೆಯನ್ನು ಲೇಖನಗಳಲ್ಲಿ ಬರೆಯುವುದರ ಮೂಲಕ ಜನ ಜಾಗೃತಿ ಮೂಡಿಸಿದ್ದಾರೆ.

ಕನ್ನಡದ ಪ್ರಾಚೀನತೆಯನ್ನು ಸಂಶೋಧನೆಯ ಮೂಲಕ ತಿಳಿಸಿಕೊಟ್ಟ ಎಂ.ಗೋವಿಂದ ಪೈಯವರು ಕನ್ನಡ ತಾಯಿಯನ್ನು 'ತಾಯೆ ಬಾರೆ ಮೊಗವ ತೋರೆ ಕನ್ನಡಿಗರ ಮಾತೆಯೇ, ಹರಸು ತಾಯೆ ಸುತರ ಕಾಯೆ ನಮ್ಮ ಜನ್ಮದಾತೆಯೇ' ಎಂದು ಸ್ವಾಗತಿಸಿ,

'ಕನ್ನಡ ಕಸ್ತೂರಿಯ<br>
ಹೊಸತು ಸಿರಿನಿಂ ತೀಡದನ್ನ<br>
ಸುರಭಿ ಎಲ್ಲಿ? ನೀನದನ್ನ<br>
ನವಶಕ್ತಿಯಿನೆಬ್ಬಿಸು'

ಎಂದು 'ಕನ್ನಡಿಗರ ತಾಯಿ' ಎಂಬ ಕವಿತೆಯ ಮೂಲಕ ಕನ್ನಡ ತಾಯಿ ಭುವನೇಶ್ವರಿಯಲ್ಲಿ ಕನ್ನಡ ಕಸ್ತೂರಿಯ ಕಂಪನ್ನು ದೇಶದಾದ್ಯಂತ ಪಸರಿಸಲು ಅನುವಾಗುವ ನವಶಕ್ತಿಯನ್ನು ನಾಡಿಗರಿಗೆ ನೀಡಬೇಕೆಂದು ಗೋವಿಂದಪೈರವರು ಹಂಬಲಿಸುತ್ತಾರೆ.'ಕನ್ನಡ ನುಡಿ ಗಾರುಡಿಗ' ಬೇಂದ್ರೆಯವರ ಘೋಷಣೆಯು ಕನ್ನಡ ದುಃಸ್ಥಿತಿಯನ್ನು ಮನಗಂಡು 'ಒಂದೇ ಕರ್ನಾಟಕ'ದ ಕಲ್ಪನೆಯನ್ನು ತಮ್ಮ ಕಾವ್ಯದ ಮೂಲಕ ಕಟ್ಟಿಕೊಡುತ್ತಾರೆ.

'ಒಂದೇ ಒಂದೇ ಕರ್ನಾಟಕ ಒಂದೇ<br>
ಇಲ್ಲಿಯ ಜನಮನ ಭಾಷೆಯು ಕನ್ನಡವದು ಒಂದೇ<br>
ಕುಲವೊಂದೇ ಸ್ಥಲವೊಂದೇ ನೀತಿಯ ನೆಲೆಯೊಂದೇ<br>
ಹೀಗೆನ್ನದ ಹೆರವರು ಅವರಿದ್ದರೂ ಒಂದೇ ಇರದಿದ್ದರೂ ಒಂದೇ<br>
ಕನ್ನಡವೆಂದಿಗೂ ಒಪ್ಪದು ಕರ್ನಾಟಕ ನಿಂದೇ...'

ಹೀಗೆ ಏಕೀಕರಣದ ವಿಷಯದಲ್ಲಿ ಕಡ್ಡಿ ಎರಡು ತುಂಡು ಮಾಡುವಂಥ ನಿಷ್ಠುರ ಮನೋಭಾವದ ಬೇಂದ್ರೆಯವರು 'ಕನ್ನಡ, ಕರ್ನಾಟಕ, ಕನ್ನಡಿಗ' ಇವು ಭಾವೈಕ್ಯದ ಪರಿಣತ ಫಲಗಳಾಗಬೇಕು, ಭೇದ ಮುಚ್ಚುವ ಮುಸುಕಾಗಬಾರದು' ಎಂದು ನೀಡುವ ಸಕಾಲಿಕ ಎಚ್ಚರಿಕೆ ಕೂಡ ಗಮನಾರ್ಹವಾದುದು.

ರಾಷ್ಟ್ರಕವಿ ಕುವೆಂಪುರವರ ಕನ್ನಡ ನಾಡು, ನುಡಿಯ ಒಗ್ಗಟ್ಟಿನ ಬಗೆಗೆ ತುಂಬು ಅಪೇಕ್ಷೆ, ಆಕಾಂಕ್ಷೆಯನ್ನು ಅವರ ಮಾತಿನಲ್ಲಿ ನೋಡುವುದಾದರೆ 'ನಾನು ಅವಧೂತನಾಗಿ ಹೋಗುವುದಿಲ್ಲ, ಕನ್ನಡವು ತನ್ನ ಸ್ಥಾನವನ್ನು ಅಧಿಕೃತವಾಗಿ ಪಡೆಯುವ ತನಕ ನನ್ನ ಪ್ರಾಣವಿರುವ ತನಕ ಅದಕ್ಕಾಗಿ ಭಗವಂತನಲ್ಲಿ ಮೊರೆಯಿಡುವುದು ಮಾಡುತ್ತೇನೆ. ನನ್ನ ತಪಃಶಕ್ತಿ, ಪ್ರಾರ್ಥನಾಶಕ್ತಿಯನ್ನು ಕನ್ನಡದ ಸೇವೆಗಾಗಿ ಮೀಸಲಿಡುತ್ತೇನೆ' ಎನ್ನುತ್ತಾರೆ.

ಕುವೆಂಪುರವರದ್ದು 'ಅಖಂಡ ಕರ್ನಾಟಕ'ದ ನಿಲುವು. 'ಅಖಂಡ ಕರ್ನಾಟಕ' ಎಂಬುದು ನಾಲ್ಕು ದಿನಗಳ ಕೂಗಾಟದ ರಾಜಕೀಯ ನಾಟಕವಲ್ಲ. ನಾಡನ್ನು ಆಳಲು ಯಾವುದೇ ಸಚಿವ ಮಂಡಲ ಬಂದರೂ ಅದು ಶಾಶ್ವತವಲ್ಲ. ಒಂದಲ್ಲಾ ಒಂದು ಸಮಯಕ್ಕೆ ಅದು ಉರುಳಿ ಹೋಗಲೇಬೇಕು. ಆದರೆ ಕನ್ನಡಮ್ಮನಿಗಾಗಿ, ಅವಳಿಗೆ ರುಚಿಸುವಂತೆ ಖುದ್ದು ಸರಸ್ವತಿಯೇ ಒಂದು ನಿತ್ಯ ಸಚಿವ ಮಂಡಲವನ್ನು ರಚಿಸಿಕೊಟ್ಟಿದ್ದಾಳೆ ಎನ್ನುತ್ತಾರೆ.

'ನೃಪತುಂಗನೇ ಚಕ್ರವರ್ತಿ<br>
ಪಂಪನಲ್ಲಿ ಮುಖ್ಯಮಂತ್ರಿ<br>
ರನ್ನ ಜನ್ನ ನಾಗವರ್ಮ<br>
ರಾಘವಾಂಕ ಹರಿಹರ ಬಸವೇಶ್ವರ<br>
ನಾರಣಪ್ಪ ಸರ್ವಜ್ಞ ಷಡಕ್ಷರ'

ಇಂಥ ಮಂತ್ರಿಮಂಡಲದ ಚಕ್ರವರ್ತಿಯೇ ಆದೇಶ ನೀಡಿದ್ದಾನೆ. ಕಾವೇರಿಯಿಂದ ಗೋದಾವರಿವರೆಗಿನ ನಾಡು ಕನ್ನಡನಾಡು ಎಂದು ಇದನ್ನು ಆಗು ಮಾಡಬೇಕಾದರೆ, ನಿಜವಾದ ಕನ್ನಡಿಗ ಕನ್ನಡನಾಡನ್ನು ಒಂದು ಮಾಡುವೆನೆಂದು ಇಂದೇ ದೀಕ್ಷೆಯ ತೊಡಬೇಕು, ಕಂಕಣ ಕಟ್ಟಬೇಕು. ಅದಕ್ಕಾಗಿ 'ತೊಡು ದೀಕ್ಷೆಯ ಇಡು ರಕ್ಷೆಯ, ಕಂಕಣ ಕಟ್ಟಿಂದೇ ಇನ್ನೆಂದೂ ತಾನೊಂದೇ ಕನ್ನಡ ನಾಡೊಂದೇ...' ಎಂದು ಒತ್ತಿಒತ್ತಿ ಹೇಳುತ್ತಾರೆ.ಕನ್ನಡ ಡಿಂಡಿಮವನ್ನು

ಬಾರಿಸಲು ಸಾಕ್ಷಾತ್ ಕರ್ನಾಟಕ ಹೃದಯ ಶಿವನಿಗೇ ಕರೆ ನೀಡುವ ಕವಿ ಈ ಕೈಂಕರ್ಯವನ್ನು ಕೈಗೊಳ್ಳುವಾಗ,

'ಸತ್ತಂತಿಹರನು ಬಡಿದೆಚ್ಚರಿಸು, ಕಚ್ಚಾಡುವವರನು ಕೂಡಿಸಿ ಒಲಿಸು
ಹೊಟ್ಟೆಯ ಕಿಚ್ಚಿಗೆ ಕಣ್ಣೀರ್ ಸುರಿಸು'

ಎಂದು ಒಟ್ಟಿಗೆ ಬಾಳಲು ಅಡ್ಡಿಯಾಗುವ ಅಂಶಗಳನ್ನು ಅತ್ಯಂತ ನಿಖರವಾಗಿ ಗುರುತಿಸುತ್ತಾ, ಅವು ಅಳಿದಾಗಲೇ ಒಗ್ಗೂಡಲು ಸಾಧ್ಯ ಎಂದು ಘೋಷಿಸಿದ್ದಾರೆ. ಕನ್ನಡದ ಏಳ್ಗೆಗಾಗಿ ಜನತೆಯನ್ನು ಹುರಿದುಂಬಿಸುವಾಗ ಕುವೆಂಪುರವರ ಲೇಖನಿ ಖಡ್ಗವಾಗುವುದನ್ನು ಇಂತಹ ಕವಿತೆಗಳಿಂದ ತಿಳಿಯಬಹುದಾಗಿದೆ.ಗೋಕಾಕರ ಹೆಸರು ನಾಡುನುಡಿಗಾಗಿ ಅವರು ದುಡಿದ ರೀತಿಗಾಗಿ ಚಿರಸ್ಮರಣೀಯ. ಅವರು ಆಗಿನ ಕನ್ನಡದ ಸ್ಥಿತಿಯನ್ನು ವರ್ಣಿಸಿರುವುದನ್ನು ನೋಡಿದರೆ ಈಗಲೂ ಆಕ್ರೋಶ ತುಂಬಿ ಬರುತ್ತದೆ.

'ಸುಲಿದ ಹಣ್ಣಂತೆ ಮೃದು ಮಧುರವಾಗಿಹ ನುಡಿಯು
ಸುಲಿದ ಹಣ್ಣಿಹುದು ನೋಡು
ಸಲಿಗೆಯನು ಬೆಳೆಸುತ್ತಾ ಸುಲಿಗೆಯನು ಮಾಡಿದರು
ಕನ್ನಡಕ್ಕೆ ಬಂತು ಕೇಡು'

ಎಂದು 'ನಾಡಿನ ಹಾಡು' ಪದ್ಯದ ಮೂಲಕ ಕನ್ನಡ ಸ್ಥಿತಿಯನ್ನು ಸುಲಿದ ಹಣ್ಣಿನ ಸ್ಥಿತಿಗೆ ಹೋಲಿಸಿ ಕನ್ನಡಿಗರಲ್ಲಿ ಕೆಚ್ಚು ತುಂಬುವ ಕವಿ, ಒಗ್ಗೂಡುವ ಕನ್ನಡಿಗರನ್ನು ಕುರಿತ ತಳೆದಿರುವ ಭರವಸೆಯೂ ಹಿರಿದಾದುದೇ ಆಗಿದೆ.

ಗೋಪಾಲಕೃಷ್ಣ ಅಡಿಗರು ಕನ್ನಡವನ್ನು ಕಣ್ಣಿಗೆ ಕಾಣದ ದೇವಿಯಾಗಿ ಪರಿಗಣಿಸಲು ಸಿದ್ಧರಿಲ್ಲ. ಹಾಗೆಂದೇ ಅವರ ಕವಿತೆಗಳ ಮೂಲಕ ಧೀರವಾಣಿ ಮೊಳಗುವುದು.

'ಕನ್ನಡವೆಂದರೆ ತಾಯಿಯೇ ದೇವಿಯೇ
ನಾನೂ ನೀನೂ ಅವರು
ಜನಮನದೊಳಗುದಿ ತುಡಿತ ಕಡಿತಗಳ
ಪ್ರತಿಕೃತಿ ಗಡಿ ನೂರಾರು'

ಹೀಗೆ ಅಡಿಗರು ತಮ್ಮ 'ಕನ್ನಡವೆಂದರೆ' ಕವಿತೆಯಲ್ಲಿ ನಾನು ನೀನು ಅವರೆಲ್ಲರೂ ಕನ್ನಡವೇ ಎಂದಾದಾಗ ಕನ್ನಡಿಗರು ನಡೆಸುವ ಹೋರಾಟ ಭಿನ್ನವಾದ ಆಯಾಮವನ್ನು ಪಡೆಯುವುದು ಶತಃಸಿದ್ಧ ಎಂದು ಹೇಳುತ್ತಾರೆ.

'ಮೈಸೂರು ಚಲೋ' ಚಳುವಳಿಯ ಮೂಲಕ ಗೊರೂರು ರಾಮಸ್ವಾಮಿ ಅಯ್ಯಂಗಾರ್‌ರವರು ಏಕೀಕರಣ ಚಳುವಳಿಗೆ ದುಡಿದ ದುಡಿತ ಅವಿಸ್ಮರಣೀಯ. ಅಂತೆಯೇ ಬಿ.ಶಿವಮೂರ್ತಿ ಶಾಸ್ತ್ರಿಗಳು, ಎಸ್.ಕೆ.ಕರೀಂಖಾನ್‌ರವರು ಇಡೀ ಕರ್ನಾಟಕವನ್ನು ಸುತ್ತಿ ಕನ್ನಡಿಗರಲ್ಲಿ ಜಾಗೃತಿಯನ್ನು ಮೂಡಿಸಿದರು. ಬಸವರಾಜ ಕಟ್ಟೀಮನಿ, ಅನಕೃ, ತರಾಸು, ನಿರಂಜನ ಮುಂತಾದವರು ತಮ್ಮ ಭಾಷಣಗಳ ಮೂಲಕ ಜನಮನ ಪರಿವರ್ತನೆ ಮಾಡಿದ್ದು ಇತಿಹಾಸ.

ಹೀಗೆ ಕನ್ನಡದ ಕವಿ, ಸಾಹಿತಿಗಳ ಇಷ್ಟೆಲ್ಲ ಹಂಬಲ ಹಾರೈಕೆಗಳು, ಬೆಂಬಲ ಬಯಕೆಗಳು, ಉದ್ಘೋಷ ಘೋಷಣೆಗಳು ಏಕೀಕರಣದ ಕಾವನ್ನು ತೀವ್ರಗೊಳಿಸಲು ಸಫಲವಾಗಿ ಅಂತಿಮವಾಗಿ ಕನ್ನಡನಾಡು ನವೆಂಬರ್ 1, 1956ರಂದು ಉದಯವಾಯಿತು. ಹರಿದು ಹಂಚಿಹೋಗಿದ್ದ ಕನ್ನಡನಾಡನ್ನು ಹಲವಾರು ಮಹನೀಯರ ಪರಿಶ್ರಮದಿಂದ ಒಂದುಗೂಡಿಸಿದರು. ಆದರೆ ಏಕೀಕರಣದ ಉದ್ದೇಶ ಹಾಗೂ ಅದರ ಸಾರ್ಥಕತೆ ಕನ್ನಡನಾಡು ಉದಯವಾಗಿ ಐವತ್ತಾರು ವರ್ಷಗಳು ಕಳೆದರೂ ಹಾಗೇಯೇ ಉಳಿದಿರುವುದು ಹಾಗೂ ಕನ್ನಡದ ನೆಲ, ಜಲ, ಭಾಷೆ, ಸಂಸ್ಕೃತಿಗೆ ಸಂಬಂಧಿಸಿದಂತೆ ಅನೇಕ ಸಮಸ್ಯೆಗಳು ನಾಡನ್ನು ಇಂದಿಗೂ ಕಾಡುತ್ತಿರುವುದು ನಮ್ಮೆಲ್ಲರ ದೌರ್ಭಾಗ್ಯವೇ ಸರಿ.

ಹರಿದು ಹಂಚಿಹೋಗಿದ್ದ ಕನ್ನಡನಾಡನ್ನು ಒಂದು ಮಾಡಲು ದೊಡ್ಡ ಪ್ರಮಾಣದ ಏಕೀಕರಣ ಚಳುವಳಿಯು ಹಲವು ದಶಕಗಳ ಕಾಲ ನಡೆಯಿತು. ಹಾಗೆಯೇ ಪ್ರಸ್ತುತದಲ್ಲಿ ಕನ್ನಡ ನಾಡಿನಲ್ಲಿ ಕನ್ನಡ ಭಾಷೆಯ ಉಳಿವಿಗಾಗಿ

ಏಕೀಕರಣದಂಥ ಚಳುವಳಿ ನಡೆಯಬೇಕಾಗಿದೆ. ಅನ್ಯ ಭಾಷೆಗಳ ಗುಲಾಮರಾಗಿರುವ ಕನ್ನಡಿಗರಿಂದಲೇ ಕನ್ನಡ ಅವನತಿ ಹೊಂದುತ್ತಿರುವ ಈ ಸಮಯದಲ್ಲಿ ಕನ್ನಡದ ಅಸ್ತಿತ್ವಕ್ಕಾಗಿ ಹೋರಾಟ ಅನಿವಾರ್ಯವಾಗಿದೆ. ಭಾಷಾವಾರು ಪ್ರಾಂತ್ಯ ರಚನೆ ಉದ್ದೇಶವನ್ನು ಈಡೇರಿಸುವಲ್ಲಿ ಏಕೀಕರಣದ ನಂತರ ಕನ್ನಡ ನಾಡನ್ನು ಆಳಿದ ಸರಕಾರಗಳು ತಮ್ಮ ಸ್ವಾರ್ಥಕ್ಕಾಗಿ ಕನ್ನಡ ಭಾಷೆಯನ್ನು ಬಳಸಿಕೊಳ್ಳುತ್ತಿದ್ದಾರೆ. ಸರ್ಕಾರಿ ಕಛೇರಿಗಳಲ್ಲಿ ಕನ್ನಡವು ಆಡಳಿತ ಭಾಷೆಯಾಗಿ ಜಾರಿಯಾಗದೇ ಉಳಿದಿದೆ. ಬೆಳಗಾವಿಯಂಥಹ ಪ್ರದೇಶಗಳಲ್ಲಿ ಅನ್ಯಭಾಷೆಯರ ದಬ್ಬಾಳಿಕೆ ಮಿತಿಮೀರಿದೆ. ಕನ್ನಡ ನಾಡು, ಕನ್ನಡ ಭಾಷೆಯ ಸಮಸ್ಯೆಗಳ ಪಟ್ಟಿ ತಯಾರಿಸುತ್ತಾ ಹೋದರೆ ಅದು ಸರಪಳಿಯಂತೆ ಮುಂದುವರಿಯುತ್ತಿರುತ್ತದೆ. ಇವೆಲ್ಲಾ ಸಮಸ್ಯೆಗಳ ಪರಿಹಾರಕ್ಕಾಗಿ ಪ್ರತಿಯೊಬ್ಬ ಕನ್ನಡಿಗನಿಂದ ಕನ್ನಡದ ಕಹಳೆ ಮೊಳಗಬೇಕಿದೆ. ಕನ್ನಡ ಭಾಷೆಯನ್ನು ಕನ್ನಡ ನಾಡಿನಲ್ಲಿ ಭದ್ರವಾಗಿ ನೆಲೆಯೂರುವಂತೆ ಮಾಡಬೇಕು. ಆಗ ಮಾತ್ರ ಕನ್ನಡ ನಾಡಿನ ಏಕೀಕರಣಕ್ಕಾಗಿ ದುಡಿದ ಮಹನೀಯರಿಗೆ ಗೌರವ ಸೂಚಿಸಿದಂತೆ ಆಗುತ್ತದೆ. 'ಕನ್ನಡ ಬಳಸಿ, ಕನ್ನಡ ಉಳಿಸಿ' ಎಂಬ ಘೋಷಣೆಯು ಪ್ರತಿಯೊಬ್ಬ ಕನ್ನಡಿಗನ ಹೃದಯದಲ್ಲಿ ಮೊಳಗಲಿ ಎಂಬುದು ನನ್ನ ಆಶಯವಾಗಿದೆ.

* * * * *

## ಆದಿಚುಂಚನಗಿರಿ

–ದರ್ಶನ್.ಬಿ.ಎಂ., ಪ್ರಥಮ ಬಿ.ಕಾಂ.,

ಆದಿಚುಂಚನ ಗಿರಿಯಲ್ಲಿ
ಕಾಲಭೈರವ ಇದ್ದಾರೆ ಗುಡಿಯಲ್ಲಿ
ಪ್ರವಾಸಿ ತಾಣವಾಗಿದೆ ನೋಡಲ್ಲಿ
ಅದಕ್ಕೆ ಹೆಚ್ಚು ಭಕ್ತರು ಇರುತ್ತಾರೆ ಗಿರಿಯಲ್ಲಿ

ದೇಶ ವಿದೇಶದಲ್ಲಿ ಪ್ರಸಿದ್ಧವಾಗಿದೆ ಗಿರಿಯ ಹೆಸರು
ಕಾರಣ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿಯವರು
ಆದ್ದರಿಂದ ಗಿರಿಯಲ್ಲಿ ಇದೇ ಇವರ ಉಸಿರು
ಅದಕ್ಕೆ ಯಾವಾಗಲೂ ಚುಂಚನಗಿರಿ ಹಸಿರು

ಈಗ ಇದ್ದಾರೆ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿಯವರು
ಇನ್ನೂ ಬೆಳಗುತ್ತೈತೆ ಚುಂಚನಗಿರಿಯ ಕೀರ್ತಿಯ ಹೆಸರು
ಇದನ್ನು ಮೆಚ್ಚಿ ವಿಶ್ವಕ್ಕೆ ಸಾರೋಣ ನಾವೆಲ್ಲರೂ
ಆಗ ಎಲ್ಲೆಲ್ಲೂ ಚುಂಚನ ಗಿರಿಯದೇ ಹೆಸರು

ಕಾಲಭೈರವ ದೇವರ ಆರ್ಶೀವಾದ
ಬಾಲಗಂಗಾಧರ ಸ್ವಾಮೀಜಿಯವರ ದಿವ್ಯಪಾದ
ನಿರ್ಮಲಾನಂದರು ಇರುತ್ತಾರೆ ನಮ್ಮೊಂದಿಗೆ ಸದಾ
ಆಗಾಗಿ ನಾವೆಲ್ಲರೂ ಇರೋಣ ಆನಂದದಿಂದ.

* * * * *

ಸಂಸ್ಕೃತಿ ಮತ್ತು ಜ್ಞಾನವನ್ನು ಕಳೆದುಕೊಳ್ಳುವ ವ್ಯಕ್ತಿ ಸಮಾಜದಲ್ಲಿ ತನ್ನ ನೆಲೆಯನ್ನು ಕಳೆದುಕೊಳ್ಳುತ್ತಾನೆ.
– ಜಗದ್ಗುರು ಶ್ರೀ ಶ್ರೀ ಶ್ರೀ ಡಾ. ನಿರ್ಮಲಾನಂದನಾಥ ಮಹಾಸ್ವಾಮೀಜಿಯವರು

# ನಾಗಮಂಗಲ ತಾಲ್ಲೂಕಿನ ಪ್ರಾಚೀನ ಜೈನಕೇಂದ್ರ : ಕಂಬದಹಳ್ಳಿ

-ಶ್ರೀನಿವಾಸ್ ಎಚ್.ಎಂ, ಸಹಾಯಕ ಪ್ರಾಧ್ಯಾಪಕರು

ಭಾರತದ ಪ್ರಾಚೀನ ಧರ್ಮಗಳಲ್ಲಿ ಒಂದಾದ ಜೈನ ಧರ್ಮವು ಒಂದು ಕಾಲಕ್ಕೆ ಭಾರತದಾದ್ಯಂತ ಹರಡಿಕೊಂಡಿತ್ತು. ಕ್ರಿ.ಶ.12–13ನೇ ಶತಮಾನದವರೆಗೂ ಕನ್ನಡನಾಡಿನಲ್ಲಿ ವ್ಯಾಪಕವಾಗಿ ಪ್ರಚಾರದಲ್ಲಿತ್ತು. ತದನಂತರದ ಕಾಲಘಟ್ಟದಲ್ಲಿ ಅನ್ಯ ಧರ್ಮಗಳ ಪ್ರಭಾವದಿಂದಾಗಿ ಅವನತಿಯ ಹಾದಿಯನ್ನು ಹಿಡಿಯಿತು ಎಂಬುದನ್ನು ಇತಿಹಾಸದ ದಾಖಲೆಗಳಿಂದ ತಿಳಿಯುತ್ತದೆ. ಪ್ರಾಚೀನ ಕಾಲದಲ್ಲಿ ಜೈನಧರ್ಮ ವ್ಯಾಪಕವಾಗಿ ಹರಡಿತ್ತು ಎಂಬುದಕ್ಕೆ ಸಾಕ್ಷಿಯೆಂಬಂತೆ ಕರ್ನಾಟಕದ ಬಹುತೇಕ ಕಡೆಗಳಲ್ಲಿ ಜೈನ ಧರ್ಮದ ಕುರುಹುಗಳಾಗಿರುವ ಬಸದಿಗಳು, ಸ್ಮಾರಕಗಳು, ಮೂರ್ತಿಶಿಲ್ಪಗಳು ಸಿಗುತ್ತವೆ.

ಕರ್ನಾಟಕದಲ್ಲಿ ಶ್ರವಣಬೆಳಗೊಳ, ಧರ್ಮಸ್ಥಳ, ಮೂಡಬಿದಿರೆ, ಕಾರ್ಕಳ, ವೇಣೂರು ಪ್ರಮುಖ ಜೈನ ಕ್ಷೇತ್ರಗಳಾಗಿದ್ದು, ಈ ಸಾಲಿಗೆ ಮಂಡ್ಯ ಜಿಲ್ಲೆಯ ನಾಗಮಂಗಲ ತಾಲ್ಲೂಕಿನ ಕಂಬದಹಳ್ಳಿಯೂ ಸೇರುತ್ತದೆ. ಕಂಬದಹಳ್ಳಿಯು ಪ್ರಸಿದ್ಧ ಜೈನಕ್ಷೇತ್ರ ಶ್ರವಣಬೆಳಗೊಳದಿಂದ 18 ಕಿ.ಮೀ. ಹಾಗೂ ತಾಲ್ಲೂಕು ಕೇಂದ್ರ ನಾಗಮಂಗಲದಿಂದ 16 ಕಿ.ಮೀ. ದೂರದಲ್ಲಿದೆ. ಮೌರ್ಯ ಸಾಮ್ರಾಟ ಅಶೋಕನ ಮೊಮ್ಮಗ ಸಂಪ್ರತಿ ಚಂದ್ರಗುಪ್ತ ಮೌರ್ಯನು ಶ್ರವಣಬೆಳಗೊಳಕ್ಕೆ ಬಂದು ಸಲ್ಲೇಖನ ವ್ರತ ಸ್ವೀಕರಿಸಿ, ನಿಸಿಧಿ ಹೊಂದಿದ್ದ ಎಂಬ ಶಾಸನ ದಾಖಲೆಯ ಆಧಾರದಿಂದ ಕ್ರಿ.ಪೂ.ಮೂರನೇ ಶತಮಾನದ ವೇಳೆಗಾಗಲೇ ಈ ಪ್ರದೇಶ ಪ್ರಸಿದ್ಧ ಜೈನ ಕ್ಷೇತ್ರವಾಗಿತ್ತು ಎಂದು ತಿಳಿಯುತ್ತದೆ. ಈ ಕ್ಷೇತ್ರದ ಸಮೀಪದಲ್ಲೇ ಇರುವ ಕಂಬದಹಳ್ಳಿ ಗ್ರಾಮವು ಇದರ ಪ್ರಭಾವದಿಂದಾಗಿ ಗಂಗ ಹಾಗೂ ಹೊಯ್ಸಳರ ಆಳ್ವಿಕೆಯ ಕಾಲದಲ್ಲಿ ಪ್ರಸಿದ್ಧ ಜೈನಕೇಂದ್ರವಾಗಿತ್ತು ಎನ್ನಬಹುದು.

ಈ ಗ್ರಾಮದಲ್ಲಿ ಪ್ರಮುಖವಾಗಿ ಪಂಚಕೂಟ ಬಸದಿ ಇರುವ ಕಾರಣಕ್ಕೆ ಗಮನ ಸೆಳೆಯುತ್ತದೆ. ಈ ಬಸದಿಯ ಉತ್ತರದಲ್ಲಿ ಸುಮಾರು ಐವತ್ತು ಅಡಿ ಎತ್ತರದ ಬ್ರಹ್ಮದೇವರ ಕಲ್ಲಿನ ಕಂಬವಿರುವ ಕಾರಣದಿಂದಾಗಿ ಈ ಗ್ರಾಮಕ್ಕೆ ಕಂಬದಹಳ್ಳಿ ಎಂಬ ಹೆಸರು ಬಂದಿದೆ. ಈ ಎತ್ತರವಾದ ಕಲ್ಲಿನ ಕಂಬವಿರುವ ಹಳ್ಳಿ ಎಂಬ ಹೆಸರು ಪ್ರಸ್ತುತ 'ಕಂಬದಹಳ್ಳಿ' ಎಂಬುದಾಗಿ ನಿಷ್ಪನ್ನಗೊಂಡಿದೆ. ಇದೇ ಗ್ರಾಮದಲ್ಲಿ ತ್ರಿಕೂಟದ ಆದಿನಾಥನ ಬಸದಿ, ದ್ವಿಕೂಟ, ಪಂಚಕೂಟ ಬಸದಿ, ಶಾಂತಿನಾಥ ಬಸದಿಗಳಿದ್ದು, ಇನ್ನೂ ಅನೇಕ ಬಸದಿಗಳಿದ್ದ ಕುರುಹುಗಳು ದೊರೆಯುತ್ತವೆ. ಜೈನ ತೀರ್ಥಂಕರರ ಯಕ್ಷನಾದ ಬ್ರಹ್ಮದೇವನ ಬೃಹತ್ ಕಲ್ಲಿನ ಕಂಬದ ಕೆಳಭಾಗದ ಎಂಟು ಮುಖಗಳಲ್ಲಿ ಅಷ್ಟದಿಕ್ಪಾಲಕರರ ಶಿಲ್ಪಗಳಿದ್ದು, ಕಂಬದ ಮೇಲೆ ಪೂರ್ವಾಭಿಮುಖವಾಗಿರುವ ಬ್ರಹ್ಮದೇವರ ಸುಂದರ ಶಿಲ್ಪವಿದೆ. ಇದರ ಸಮೀಪದಲ್ಲಿ ಕ್ರಿ.ಶ. ಸುಮಾರು 9ನೇ ಶತಮಾನದಲ್ಲಿ ಗಂಗ ದೊರೆಗಳ ಕಾಲದಲ್ಲಿ ನಿರ್ಮಿಸಿರುವ ಪಂಚಕೂಟ ಬಸದಿಯಲ್ಲಿ ನಡುವೆ ಇರುವುದೇ ತ್ರಿಕೂಟಾಚಲ ಆದಿನಾಥ ತೀರ್ಥಂಕರನ ಬಸದಿ. ಈ ಬಸದಿಯ ಕೆಳಭಾಗ ಅಷ್ಟಕೋನಾಕಾರವಾಗಿದ್ದು, ಗೋಡೆಯ ಮೇಲುಗಡೆ ಯಕ್ಷ, ಜಿನರ ಲತಾಪಟ್ಟಿಕೆಗಳಿವೆ. ಗೋಡೆಯ ಮಧ್ಯದಲ್ಲಿರುವ ಗೂಡುಗಳನ್ನು ಪುಷ್ಪತೋರಣಗಳಿಂದ ಅಲಂಕರಿಸಲಾಗಿದೆ. ಇವುಗಳಲ್ಲಿ ಗಂಧರ್ವ, ಯಾಳಿ, ಮುಕ್ಕೊಡೆ, ಮಕರಗಳ ಅಲಂಕರಣಗಳನ್ನು ಕಡೆಯಲಾಗಿದೆ.

ಈ ಬಸದಿಯ ಮಧ್ಯಭಾಗದ ಗರ್ಭಗುಡಿಯಲ್ಲಿ ಜೈನರ ಮೊದಲ ತೀರ್ಥಂಕರನಾದ ಆದಿನಾಥನ ಸುಂದರವಾದ ಮೂರ್ತಿಯಿದ್ದು, ಬಲಭಾಗದ ಗರ್ಭಗುಡಿಯಲ್ಲಿ ನೇಮಿನಾಥ ತೀರ್ಥಂಕರ ಹಾಗೂ ಎಡಭಾಗದ ಗರ್ಭಗುಡಿಯಲ್ಲಿ ಶಾಂತಿನಾಥ ತೀರ್ಥಂಕರನ ಸುಂದರವಾದ ವಿಗ್ರಹಗಳನ್ನು ಪ್ರತಿಷ್ಠಾಪಿಸಲಾಗಿದೆ. ಈ ಬಸದಿಯ ಮೂರು ಶಿಖರಗಳು ವಿಭಿನ್ನವಾಗಿ ಕಣಶಿಲೆಯಲ್ಲಿ ನಿರ್ಮಾಣಗೊಂಡಿವೆ. ಪೂರ್ವದ ಶಿಖರ ದುಂಡಾಗಿಯೂ, ಉತ್ತರದ ಶಿಖರ ಚತುರಸ್ರವಾಗಿಯೂ, ಪಶ್ಚಿಮದ ಶಿಖರವು ಅಷ್ಟಾಸ್ರವಾಗಿಯೂ ನಿರ್ಮಾಣಗೊಂಡಿವೆ. ಈ ಬಸದಿಯ ನವರಂಗದಲ್ಲಿರುವ ಭುವನೇಶ್ವರಿಯಲ್ಲಿ(ಛಾವಣಿ) ಅಷ್ಟದಿಕ್ಪಾಲಕರ ಶಿಲ್ಪಗಳಿದ್ದು, ಬಲಗೈಯಲ್ಲಿ ಶಂಖವನ್ನು, ಎಡಗೈಯಲ್ಲಿ ದಂಡವನ್ನೂ ಹಿಡಿದು ಐದು ಹೆಡೆಯ ಹಾವಿನ ಕೆಳಗಿರುವ ಧರಣೇಂದ್ರ ಯಕ್ಷ, ಚಾಮರಧಾರಿಣಿಯರನ್ನು ಆಕರ್ಷಕವಾಗಿ ಕಡೆಯಲಾಗಿದೆ.

ತ್ರಿಕೂಟಚಲ ಬಸದಿಯ ಸಮೀಪದಲ್ಲೇ ಎರಡು ಮಂದಿರಗಳಿದ್ದು, ಒಂದರಲ್ಲಿ ನಿಂತ ಭಂಗಿಯಲ್ಲಿರುವ ತೀರ್ಥಂಕರ ಶಾಂತಿನಾಥನ ಸುಂದರ ವಿಗ್ರಹವಿದೆ. ಈ ವಿಗ್ರಹವು ಸುಮಾರು ಹತ್ತು ಅಡಿ ಎತ್ತರವಿದ್ದು, ಶಿಲ್ಪಿಯ ಅದ್ಭುತ ಕೈಚಳಕದಿಂದ ಕೂಡಿದೆ. ಗರ್ಭಗೃಹದ ಮೇಲ್ಛಾವಣಿಯಲ್ಲಿ ಪದ್ಮಗಳ ರಚನೆಯಿದ್ದು, ಗರ್ಭಗೃಹದಲ್ಲಿ ನಾಲ್ಕು ಅಷ್ಟಕೋನಾಕಾರದ ಸ್ತಂಭಗಳೂ ಇವೆ. ಅಷ್ಟಕೋನದ ಪೀಠದಲ್ಲಿ ದಿಕ್ಪಾಲಕರನ್ನು ಕಡೆಯಲಾಗಿದೆ. ಒಂಭತ್ತು ಅಂಕಣಗಳ ನವರಂಗದಲ್ಲಿ ನಾಲ್ಕು ಹೊಯ್ಸಳ ಶೈಲಿಯ ಬಳಪದ ಕಲ್ಲಿನ ಕಂಬಗಳಿವೆ. ನವರಂಗದ ಆಗ್ನೇಯ ಮೂಲೆಯಲ್ಲಿ ಪದ್ಮ, ಪರಶು, ಅಕ್ಷಮಾಲಾ, ಫಲಗಳನ್ನು ಹಿಡಿದ ಯಕ್ಷನ ವಿಗ್ರಹವಿದೆ. ಮತ್ತೊಂದು ಗುಡಿಯಲ್ಲಿ ಯಾವುದೇ ಮೂರ್ತಿಯಿರುವುದಿಲ್ಲ. ಶಾಂತಿನಾಥನ ಬಸದಿಯಲ್ಲಿರುವ ಶಾಸನವೊಂದರಿಂದ ಈ ಮಂದಿರವನ್ನು ಕ್ರಿ.ಶ.12ನೇ ಶತಮಾನದಲ್ಲಿ ಹೊಯ್ಸಳ ದೊರೆ ವಿಷ್ಣುವರ್ಧನನ ದಂಡನಾಯಕನಾದ ಗಂಗರಾಜನು ದ್ರೋಹಘರಟ್ಟಾಚಾರಿ ಎಂಬ ಶಿಲ್ಪಿಯ ಸಹಾಯದಿಂದ ಕಟ್ಟಿಸಿದನೆಂದು ತಿಳಿದುಬರುತ್ತದೆ.

ಈ ಮಂದಿರದ ಹೊರವಲಯದ ಗೋಡೆಗಳ ಮೇಲಿರುವ ಆನೆ, ಕುದುರೆ, ಸಿಂಹ ಮತ್ತು ಯಾಳಿಗಳ ಚಿತ್ರಪಟ್ಟಿಗೆಗಳು ಅಮೋಘ ಕೆತ್ತನೆಗಳಾಗಿದ್ದು, ಅದ್ಭುತ ಹೊಯ್ಸಳ ಶೈಲಿಯಿಂದ ಕೂಡಿವೆ. ಸುಂದರವಾಗಿ ಕಡೆಯಲಾಗಿರುವ ಶಾಂತಿನಾಥನ ವಿಗ್ರಹವು ಹಸನ್ಮುಖಿಯಿಂದ ಕೂಡಿದ್ದು, ಕಲಾಚತುರತೆಯಿಂದ ಕೂಡಿದೆ. ಧ್ಯಾನಮಗ್ನ ನೇಮಿನಾಥ ಮತ್ತು ಜಿನಮೂರ್ತಿಗಳೂ ನವರಂಗದಲ್ಲಿರುವ ಯಕ್ಷಿಣಿ ಶಿಲ್ಪವು ಉತ್ತಮ ರಚನೆಗಳಾಗಿವೆ. ಉಬ್ಬಿ ಎದೆ, ತೆಳುವಾದ ಉದರ, ನೀಳವಾಗಿ ಇಳಿಬಿಟ್ಟಿರುವ ಕೂದಲು ಮತ್ತು ಅನೇಕ ಆಭರಣಯುಕ್ತವಾದ ಯಕ್ಷ-ಯಕ್ಷಿಣಿಯರ ಶಿಲ್ಪಗಳು ಚೋಳಶೈಲಿಯನ್ನು ಹೋಲುತ್ತವೆ. ಈ ಬಸದಿಯ ಗರ್ಭಗುಡಿಯ ತೊಲೆಯ ಮೇಲೆ ಚೋಳ ದೊರೆ ವೀರರಾಜೇಂದ್ರನ ಶಾಸನವಿದೆ. ಆಗ್ನೇಯ ಸ್ತಂಭದ ಮೇಲೆ 14ನೇ ಶತಮಾನದ ಶಾಸನವೊಂದನ್ನು ಕಡೆದಿರುವುದನ್ನು ಕಾಣಬಹುದು. ಮೊದಲಿನ ಸುಖನಾಸಿಯ ದ್ವಾರದ ಹತ್ತಿರ ಅಷ್ಟಕೋನ ಪೀಠ, ದ್ವಾರಪಾಲಕರ ವಿಗ್ರಹಗಳೂ ಇವೆ.

ಶಾಂತಿನಾಥ ಬಸದಿಯ ಪೂರ್ವದಲ್ಲಿ ಮತ್ತೊಂದು ಬಸದಿಯಿದೆ. ಇದರ ನವರಂಗದಲ್ಲಿ ಗಂಗರ ಕಾಲದ ಸ್ತಂಭಗಳಿವೆ. ಇದರ ಹಿಂಭಾಗದ ಗೋಡೆಯನ್ನು ತೆಗೆದು, ಪೂರ್ವದ್ವಾರವನ್ನು ನಿಲ್ಲಿಸಲಾಗಿದೆ. ನವರಂಗದ ಮಧ್ಯದಲ್ಲಿರುವ ಭುವನೇಶ್ವರಿ ಆಕರ್ಷಣೀಯವಾಗಿದೆ. ಅಷ್ಟದಿಕ್ಪಾಲಕರು ಮತ್ತು ತೊಲೆಗಳು ಸಂಧಿಸುವ ಜಾಗದಲ್ಲಿ ಪುಷ್ಪಮಾಲಿಕೆಗಳನ್ನು ಹಿಡಿದಿರುವ ನಾಲ್ವರು ಗಂಧರ್ವರ ವಿಗ್ರಹಗಳಿವೆ. ಮಧ್ಯಫಲಕದಲ್ಲಿ ಯಕ್ಷ-ಯಕ್ಷಿ ಗಂಧರ್ವರ ನಡುವೆ ಸಿಂಹಪೀಠವಿದ್ದು, ಅದರ ಹಿಂದೆ ಆನೆಗಳಿವೆ. ಸಿಂಹಪೀಠದ ಮೇಲೆ ಪ್ರಭಾವಳಿ, ಮುಕ್ಕೊಡೆಗಳಿಂದ ಅಲಂಕೃತವಾದ ಜಿನವಿಗ್ರಹವಿದೆ. ಸುಂದರವಾದ ಈ ವಿಗ್ರಹಕ್ಕೆ ಗುಂಗುರುಕೂದಲಿನ ಶಿರದ ಚಿತ್ರಣ ಕಲಾನೈಪುಣ್ಯತೆಯಿಂದ ಕೂಡಿದೆ.

ಇವಲ್ಲದೇ ಈ ಗ್ರಾಮದಲ್ಲಿ ಗಂಗ ಮತ್ತು ಹೊಯ್ಸಳರ ಕಾಲದ ಜೈನ ಅವಶೇಷಗಳು ದೊರೆಯುತ್ತವೆ. ಮತ್ತಷ್ಟು ಉತ್ಖನನ ಕಾರ್ಯದಿಂದ ಪತ್ತೆಹಚ್ಚಬೇಕಾದ ಅಗತ್ಯತೆಯಿದೆ. ಇದರಿಂದ ಗಂಗ-ಹೊಯ್ಸಳ ದೊರೆಗಳ ಕಾಲದಲ್ಲಿ ಕಂಬದಹಳ್ಳಿಯು ಪ್ರಸಿದ್ಧ ಜೈನ ಕೇಂದ್ರವಾಗಿತ್ತು ಎನ್ನಬಹುದು. ಸಾವಿರಾರು ವರ್ಷಗಳ ಇತಿಹಾಸವಿರುವ ಈ ಗ್ರಾಮದ ಪಂಚಕೂಟ ಬಸದಿ ಮೊದಲಾದ ಜೈನ ಅವಶೇಷಗಳು ಸ್ಥಳೀಯರ ಹಾಗೂ ಸರ್ಕಾರದ ನಿರ್ಲಕ್ಷ್ಯಕ್ಕೆ ಒಳಗಾಗಿರುವುದು ಶೋಚನೀಯ ಸಂಗತಿಯಾಗಿದೆ. ಇಲ್ಲಿನ ಬಸದಿಗಳನ್ನು, ಜೈನ ಮೂರ್ತಿಶಿಲ್ಪಗಳನ್ನು ಒಳಗೊಂಡಂತೆ ಎಲ್ಲಾ ಸ್ಮಾರಕಗಳನ್ನು ಸಂರಕ್ಷಿಸುವ ಅಗತ್ಯತೆಯಿದೆ.

* * * * *

ಧರ್ಮವೇ ನಮ್ಮ ಉಸಿರಾಗಬೇಕು. ನಮ್ಮ ನಡೆ ನುಡಿಯಲ್ಲಿ ಧರ್ಮದ ಸಾರವನ್ನು ಮೈಗೂಡಿಸಿಕೊಳ್ಳಬೇಕು. ಧರ್ಮಮಾರ್ಗದಲ್ಲಿ ನಡೆದಾಗ ಸುಂದರವಾದ ಬದುಕನ್ನು ಕಟ್ಟಿಕೊಳ್ಳಲು ಸಾಧ್ಯ.

**– ಜಗದ್ಗುರು ಶ್ರೀ ಶ್ರೀ ಶ್ರೀ ಡಾ. ನಿರ್ಮಲಾನಂದನಾಥ ಮಹಾಸ್ವಾಮೀಜಿಯವರು**

# ನಾಗಮಂಗಲ ತಾಲ್ಲೂಕಿನ ಪಕ್ಷಿನೋಟ

–ದೇವಾನಂದ ಎನ್. ಆರ್., ಸಹಾಯಕ ಪ್ರಾಧ್ಯಾಪಕರು

ಪೌರಾಣಿಕ ಹಿನ್ನೆಲೆ ಮತ್ತು ಐತಿಹ್ಯಗಳ ಪ್ರಕಾರ ನಾಗಮಂಗಲಕ್ಕೆ ಮಣಿಪುರ, ನಾಗಪುರ, ನಾಗಮಂಡಲ ಎಂಬ ಹೆಸರುಗಳು ಇದ್ದವು ಎಂದು ತಿಳಿಯುತ್ತದೆ. ನಂತರ ಕಾಲದಲ್ಲಿ ನಾಗಮಂಗಲ ಎಂಬ ಹೆಸರನ್ನು ಪಡೆದುಕೊಂಡಿದೆ. ಪಟ್ಟಣದ ಹೃದಯ ಭಾಗದಲ್ಲಿರುವ ಭುವನೇಶ್ವರಸ್ವಾಮಿ ದೇವಾಲಯದಲ್ಲಿ ಇರುವ ಹೊಯ್ಸಳರ ದೊರೆ ವಿಷ್ಣುವರ್ಧನನ ಹೆಂಡತಿ ಬೊಮ್ಮಲಾದೇವಿಯ ಶಾಸನದಲ್ಲಿ "ಶ್ರೀ ವೀರಬಲ್ಲಾಳ ಚತುರ್ವೇದಿ ಭಟ್ಟರತ್ನಾಕರ ಅಗ್ರಹಾರ" ಹಾಗೂ "ನಾಗಮಂಗಲ" ಎಂಬ ಹೆಸರುಗಳಿಂದ ಕರೆದಿರುವುದನ್ನು ಕಾಣಬಹುದು.

ಈ ಮೊದಲು ನಾಗಮಂಗಲ ತಾಲ್ಲೂಕು ಹಾಸನ ಜಿಲ್ಲೆಗೆ ಸೇರಿತ್ತು, ತದನಂತರ ಕ್ರಿ.ಶ.1882 ರಲ್ಲಿ ಮೈಸೂರು ಜಿಲ್ಲೆಗೆ ವರ್ಗಾಯಿಸಲ್ಪಟ್ಟಿತೆಂದು ಹೇಳಲಾಗುತ್ತದೆ. ಆನಂತರ ಮಂಡ್ಯ ಜಿಲ್ಲೆ ರಚನೆಯಾದ ಮೇಲೆ ಈ ಜಿಲ್ಲೆಗೆ ಸೇರಿಕೊಂಡಿದೆ ಎನ್ನಬಹುದು.

**ಭೌಗೋಳಿಕತೆ :** ತಾಲ್ಲೂಕು 1,045 ಚ.ಕಿ.ಮೀ ವಿಸ್ತೀರ್ಣ ಹೊಂದಿದ್ದು, ಜಿಲ್ಲೆಯ ಅತಿದೊಡ್ಡ ತಾಲ್ಲೂಕಾಗಿದೆ. ತಾಲ್ಲೂಕಿನಲ್ಲಿ ವೀರವೈಷ್ಣವಿ, ಲೋಕಪಾವನಿ ಹಾಗೂ ಶಿಂಷಾ ನದಿಗಳು ಹರಿಯುತ್ತವೆ.

**ಕೃಷಿ :** ತೆಂಗು, ರಾಗಿ, ಭತ್ತ, ವಿವಿಧ ಬಗೆಯ ತರಕಾರಿಗಳು ತಾಲ್ಲೂಕಿನ ಪ್ರಮುಖ ಬೆಳೆಗಳಾಗಿವೆ. ಮೂರು ನದಿಗಳಿದ್ದರೂ ಕೃಷಿ ಹೆಚ್ಚಿನ ಪ್ರಮಾಣದಲ್ಲಿ ಮಳೆಯನ್ನೇ ಅವಲಂಬಿಸಿದೆ. ಅಂತರ್ಜಲ 500 ಅಡಿಗಿಂತಲೂ ಹೆಚ್ಚಿಗೆ ಕುಸಿದಿದೆ. ಇಲ್ಲಿನ ಕೃಷಿಕರು ಉಪಕಸುಬಾಗಿ ಕೋಳಿ, ಕುರಿ, ಹಂದಿ, ಮೇಕೆ ಸಾಕಣೆ ಮಾಡುತ್ತಾರೆ.

**ಶಿಕ್ಷಣ :** ಸ್ವಾತಂತ್ರ್ಯಪೂರ್ವದಲ್ಲಿ ಶೇ.40ಕ್ಕಿಂತಲೂ ಕಡಿಮೆ ಸಾಕ್ಷರರಿದ್ದರು. 2011ರ ಜನಗಣತಿಯಂತೆ ತಾಲ್ಲೂಕಿನಲ್ಲಿ 1,87,578 ರಷ್ಟು ಜನಸಂಖ್ಯೆ ಇದೆ. ಇದರಲ್ಲಿ ಶೇ.80ರಷ್ಟು ಸಾಕ್ಷರರಿದ್ದಾರೆ. ಶ್ರೀ ಕ್ಷೇತ್ರ ಆದಿಚುಂಚನಗಿರಿ ಮಠದ ಶಿಕ್ಷಣ ಸಂಸ್ಥೆ ಜಿಲ್ಲೆಯ ದೊಡ್ಡ ಶಿಕ್ಷಣ ಸಂಸ್ಥೆಯಾಗಿದೆ. ಈ ಸಂಸ್ಥೆಯು ಎಲ್‌ಕೆಜಿ ಯಿಂದ ವೈದ್ಯಕೀಯ ಶಿಕ್ಷಣದವರೆಗೆ ಗ್ರಾಮೀಣ ಪ್ರದೇಶದಲ್ಲಿ ಕಲಿಯಲು ಅವಕಾಶ ಕಲ್ಪಿಸಿದೆ.

**ಸಾಹಿತ್ಯ :** 12ನೇ ಶತಮಾನದ ಆಸುಪಾಸಿನಲ್ಲಿ ಸತ್ಕವಿ, ಸಾಂತ ಮಹಂತ ಹಾಗೂ ಶಾಂತಿನಾಥ ಎಂಬ ಕವಿಗಳು ಇದ್ದರೆಂದು ಲಾಳನಕೆರೆಯ ಶಾಸನ ತಿಳಿಸುತ್ತದೆ. 15ನೇ ಶತಮಾನದ ದೊಡ್ಡಜಟಕ ಮತ್ತು ಹೊನ್ನೇನಹಳ್ಳಿಯ ತಾಮ್ರಶಾಸನಗಳಲ್ಲಿ "ಸಭಾಪತಿ ಸ್ವಯಂಭು" ಎಂಬ ಕವಿಯ ಉಲ್ಲೇಖವಿದೆ. "ಬಂಡಯ್ಯನೆಂಬ ಶಾಸನಕವಿ" ಇದ್ದ ಬಗ್ಗೆ ಎಲೆಕೊಪ್ಪ ಶಾಸನದಿಂದ ತಿಳಿದು ಬರುತ್ತದೆ. ತದನಂತರ ಗುರುಪರಂಪರೆಯ ಸಾಹಿತಿಗಳಲ್ಲಿ ಚಿಕ್ಕಲಿಂಗಣ್ಣ ಸ್ವಾಮಿ, ಚಂದ್ರಶೇಖರನಾಥ ಸ್ವಾಮಿ ಸಾಹಿತ್ಯ ಕ್ಷೇತ್ರದಲ್ಲಿ ಸಾಧನೆ ಮೆರೆದಿದ್ದಾರೆ. ಹೊಸಗನ್ನಡ ನವೋದಯದ ಪ್ರವರ್ತಕ ಎನಿಸಿಕೊಂಡಿದ್ದ ಬಿ.ಎಂ.ಶ್ರೀಕಂಠಯ್ಯ, ನವ್ಯಕವಿ ಡಾ.ಬಿ.ಸಿ.ರಾಮಚಂದ್ರಶರ್ಮ, ನಾಡೋಜ ಎಚ್.ಎಲ್.ನಾಗೇಗೌಡ, ಕ.ರಾ.ಕೃಷ್ಣಸ್ವಾಮಿ, ಜಾನಪದಯೋಗಿ ಡಾ.ಜೀ.ಶಂ.ಪರಮಶಿವಯ್ಯ, ಪತ್ರಕರ್ತರಾದ ಪಿ.ರಾಮಯ್ಯ, ನಾಗತಿಹಳ್ಳಿ ಚಂದ್ರಶೇಖರ್, ಪ್ರೊ.ಎಚ್.ಎಲ್.ಕೇಶವಮೂರ್ತಿ, ಸಂಶೋಧಕ ಹ.ಕ.ರಾಜೇಗೌಡ, ವಿಜ್ಞಾನಿ ಡಾ.ರಾಜಾರಾಮಣ್ಣ ಅವರಂತಹ ಅನೇಕ ದಿಗ್ಗಜರು ಈ ನೆಲದ ಅನರ್ಘ್ಯ ರತ್ನಗಳಾಗಿದ್ದು ತಾಲ್ಲೂಕಿನ ಹಿರಿಮೆ ಹೆಚ್ಚಿಸಿದ್ದಾರೆ.

**ಕೈಗಾರಿಕೆ :** ತಾಲ್ಲೂಕಿನಲ್ಲಿ ಬೃಹತ್ ಕೈಗಾರಿಕೆಗಳು ಇಲ್ಲವಾದರೂ ಕರಕುಶಲ ಕೈಗಾರಿಕೆಗೆ ತುಂಬಾ ಪ್ರಸಿದ್ಧಿ ಪಡೆದಿದೆ. ಶಿಲ್ಪಕೆತ್ತನೆಗೆ ಹೆಸರುವಾಸಿಯಾಗಿದ್ದು, ಇಲ್ಲಿ ಕೆತ್ತಲ್ಪಡುವ ವಿಗ್ರಹಗಳು ಅನೇಕ ರಾಷ್ಟ್ರಗಳಿಗೆ ರಫ್ತಾಗಿವೆ. ಈ ನೆಲದ ಖ್ಯಾತಶಿಲ್ಪಿಗಳಾದ ವೆಂಕಟಾಚಾರ್, ಶ್ರೀನಿವಾಸಚಾರ್, ಶಿಲ್ಪಾಚಾರ್, ಚಿಕ್ಕಾಚಾರ್, ಚಿನ್ನಾಚಾರ್, ವರದಾಚಾರ್, ಕೆ.ಎಸ್.ವೆಂಕಟಾಚಾರ್, ಪುಟ್ಟಾಚಾರ್ ಮುಂತಾದ ಸಾಧಕರು ಅಂತರಾಷ್ಟ್ರೀಯಮಟ್ಟದಲ್ಲಿ ಹೆಸರು ಮಾಡಿದ್ದಾರೆ.

**ದೇಗುಲಗಳ ಬೀಡು :** ತಾಲ್ಲೂಕನ್ನು 'ದೇಗುಲಗಳ ಬೀಡು' ಎಂದೂ ಕರೆಯಲಾಗುತ್ತದೆ. ನಾಗಮಂಗಲ ಪಟ್ಟಣದಲ್ಲಿ ತ್ರಿಕೂಟಾಕೃತಿಯ ಏಳಂತಸ್ತಿನ ಗೋಪುರದ ಶ್ರೀ ಸೌಮ್ಯಕೇಶವಸ್ವಾಮಿ ದೇವಾಲಯ, ಇತಿಹಾಸ - ಪುರಾಣ ಪ್ರತಿಬಿಂಬಿಸುವ ಯೋಗಾನರಸಿಂಹಸ್ವಾಮಿ ದೇವಾಲಯ, ಹೊಯ್ಸಳರ ದೊರೆ ವಿಷ್ಣುವರ್ಧನನ ಕಾಲದಲ್ಲಿ ನಿರ್ಮಿಸಲಾದ ಬಳಪದ ಕಲ್ಲಿನ ಭುವನೇಶ್ವರ ದೇವಾಲಯ, 1284ರಲ್ಲಿ ನಿರ್ಮಿತವಾದ ಬೆಳ್ಳೂರಿನ ಪ್ರಸಿದ್ಧ ಮಾಧವರಾಯಸ್ವಾಮಿ ದೇವಾಲಯ, ಕಂಬದಹಳ್ಳಿಯಲ್ಲಿ 12ನೇ ಶತಮಾನದಲ್ಲಿ ನಿರ್ಮಾಣಗೊಂಡ ಆದಿನಾಥ ಬಸದಿ, ಚೋಳಸಂದ್ರದಲ್ಲಿ 1145ರಲ್ಲಿ ನಿರ್ಮಿತವಾದ ಜೈನಬಸದಿ ಇದೆ. ಶ್ರೀ ಕ್ಷೇತ್ರ ಆದಿಚುಂಚನಗಿರಿಯು ತಾಲ್ಲೂಕಿನ ಪ್ರಸಿದ್ಧ ಪ್ರವಾಸಿ ಹಾಗೂ ಧಾರ್ಮಿಕ ಕೇಂದ್ರವಾಗಿದೆ. ಇವಲ್ಲದೆ ಬಸವನಕಲ್ಲು, ಹದ್ದಿನಕಲ್ಲು ಹನುಮಂತರಾಯ, ಹಾಲ್ತಿ ಮತ್ತು ಕೋಟೆಬೆಟ್ಟ ಮೊದಲಾದವುಗಳು ತಾಲ್ಲೂಕಿನಲ್ಲಿರುವ ಪ್ರಮುಖ ಧಾರ್ಮಿಕ ಸ್ಥಳಗಳಾಗಿವೆ.

ತಾಲ್ಲೂಕು ಜನಪದ, ಸಾಹಿತ್ಯ, ಚಲನಚಿತ್ರ, ಶೈಕ್ಷಣಿಕ ರಂಗಗಳಲ್ಲಿ ಉತ್ತಮ ಸಾಧನೆ ಮಾಡಿದೆ. ಬಹುಜನರ ಮೂಲ ಕಸುಬಾದ ಕೃಷಿ ಹಾಗೂ ಕೈಗಾರಿಕೆಗಳ ಅಭಿವೃದ್ಧಿಗೆ ಹೆಚ್ಚಿನ ಗಮನಹರಿಸಬೇಕಿದೆ. ಇದರಿಂದ ತಾಲ್ಲೂಕಿನ ಜನ ಕೆಲಸ ಹುಡುಕಿಕೊಂಡು ಬೇರೆಡೆ ಹೋಗುವುದನ್ನು ತಡೆಯಬಹುದು.

* * * * *

## ನಮ್ಮ ಹೆಮ್ಮೆಯ ಕಾಲೇಜು (ಕವಿತೆ)

**–ಅಜಿತ್ ಕುಮಾರ್. ಟಿ. ಪಿ., ದ್ವಿತೀಯ ಬಿ.ಎ.,**

ಪಟ್ಟಣದ ಮಧ್ಯದಲ್ಲಿ
ಸಕ್ಕರೆಯ ತವರಿನಲ್ಲಿ
ವಿದ್ಯಾರ್ಥಿಗಳ ಬಾಳ ದೀವಿಗೆಯಾಗಿ
ಬೆಳಗುತಿದೆ ಜ್ಞಾನಜ್ಯೋತಿಯಾಗಿ
ನಮ್ಮ ಆದಿಚುಂಚನಗಿರಿ ಪದವಿ ಕಾಲೇಜು

ವಿದ್ಯೆ ಎಂಬ ಸಾಗರದಲ್ಲಿ
ಜ್ಞಾನವೆಂಬ ದೇಗುಲವಾಗಿ
ಕೀರ್ತಿ ಎಂಬ ಅಲೆ ಎಬ್ಬಿಸಿ
ಬೆಳೆಯುತಿದೆ ಮೇರು ಶಿಖರದಂತೆ
ನಮ್ಮ ಆದಿಚುಂಚನಗಿರಿ ಪದವಿ ಕಾಲೇಜು

ಮನಸ್ಸೆಂಬ ಜ್ಞಾನದ ಮಂದಿರದಲ್ಲಿ
ಕಾಲಭೈರವೇಶ್ವರ ಸ್ವಾಮಿಯ ಆಶೀರ್ವಾದದಲ್ಲಿ
ಶ್ರೀ ಬಾಲಗಂಗಾಧರನಾಥ ಸ್ವಾಮೀಜಿಯವರ ಕನಸಿನಂತೆ
ಶ್ರೀ ನಿರ್ಮಲಾನಂದನಾಥ ಸ್ವಾಮೀಜಿಯವರ ಮಾರ್ಗದರ್ಶನದಲ್ಲಿ
ಬೆಳೆಯುತಿದೆ ನಮ್ಮ ಆದಿಚುಂಚನಗಿರಿ ಪದವಿ ಕಾಲೇಜು

* * * * *

# ಸಾರ್ಥಕ ಸೇವೆಗೈಯುತ್ತಿರುವ ರೆಡ್‌ಕ್ರಾಸ್ ಸಂಸ್ಥೆ

– ವಿಜಯಕುಮಾರ ಎನ್. ಟಿ., ಗ್ರಂಥಾಲಯ ವಿಭಾಗ

ಸ್ವಿಡ್ಜರ್‌ಲ್ಯಾಂಡಿನ ಜಿನಿವಾ ನಗರದಲ್ಲಿ ಒಬ್ಬ ಧನಿಕ ವ್ಯಾಪಾರಿಯಿದ್ದ. ಆತನ ಮಗ ಹೆನ್ರಿಡ್ಯುನಾಂಟ್. ಈತ ಒಮ್ಮೆ ವ್ಯಾಪಾರದ ನಿಮಿತ್ತವಾಗಿ ಇಟಲಿಯ ಲೊಂಬಾರ್ಡ್ ಪ್ರದೇಶಕ್ಕೆ ಹೋದ. ಆಗ ಅಲ್ಲಿ ಫ್ರಾನ್ಸಿನ ಅರಸ 3ನೇ ನೆಪೋಲಿಯಿನ್ ಹಾಗೂ ಆಸ್ಟ್ರಿಯ ದೇಶದ ಮಧ್ಯದಲ್ಲಿರುವ ಸೊಲ್‌ಫೆರಿನೋ ಎಂಬ ಪುಟ್ಟ ಗ್ರಾಮದಲ್ಲಿ ಯುದ್ಧ ನಡೆಯುತ್ತಿತ್ತು. ಕೇವಲ 15 ಗಂಟೆಗಳ ಯುದ್ದದಲ್ಲಿ ಮೃತಪಟ್ಟವರ ಹಾಗೂ ಗಾಯಾಳುಗಳಿಂದ ಯುದ್ಧಭೂಮಿ ತುಂಬಿಹೋಯಿತು. ಅದನ್ನು ಕಂಡು ಹೆನ್ರಿಡ್ಯುನಾಂಟ್‌ಗೆ ಆಘಾತವುಂಟಾಯಿತು. ಗಾಯಗೊಂಡವರನ್ನು ನೋಡಿಕೊಳ್ಳಲು ಅಲ್ಲಿ ಯಾರು ಇರಲಿಲ್ಲ. ಹೀಗಾಗಿ ಗಾಯಳುಗಳಲ್ಲಿಯೂ ಅನೇಕರು ಮರಣ ಹೊಂದುತ್ತಿದ್ದರು. ಅವನು ತಾನು ವ್ಯಾಪಾರಕ್ಕಾಗಿ ಬಂದಿದ್ದೇನೆಂಬುದನ್ನು ಮರೆತು ಗಾಯಾಳುಗಳ ಶುಶ್ರೂಷೆಯಲ್ಲಿ ತೊಡಗಿದನು.

ಇಟಲಿಯಿಂದ ಸ್ವದೇಶಕ್ಕೆ ಮರಳಿದ ನಂತರ ಹೆನ್ರಿಡ್ಯುನಾಂಟ್ ಸಂಪೂರ್ಣ ಬದಲಾಗಿದ್ದ. ವ್ಯಾಪಾರದ ಬಗ್ಗೆ ಅವನ ಆಸಕ್ತಿ ಹೊರಟುಹೋಗಿತು. ಯುದ್ಧದಲ್ಲಿ ಗಾಯಗೊಂಡವರಿಗಾಗಿ ತಾನು ಏನನ್ನಾದರೂ ಮಾಡಬೇಕೆಂಬ ತುಡಿತ ಅವನಲ್ಲಿ ಆರಂಭವಾಗಿತ್ತು. ಒಂದು ವೇಳೆ ತನ್ನ ಬಳಿ ನಿಸ್ವಾರ್ಥ ಸೇವೆಗೈಯುವ ಒಂದು ನೂರು ವರ್ಷಗಳಿದ್ದರೆ, ಯುದ್ಧಭೂಮಿಯಲ್ಲಿ ಗಾಯಗೊಂಡವರ ಸೇವೆಯನ್ನು ತಾನು ಮಾಡಬಹುದಾಗಿತ್ತು ಎಂಬ ವಿಚಾರ ಅವನ ತಲೆಯಲ್ಲಿ ಕೊರೆಯತೊಡಗಿತು. ಆ ನಿಟ್ಟಿನಲ್ಲಿ ಅವನು 'ಎ ಮೆಮೊರಿ ಆಫ್ ಸೊಲ್‌ಫೆರಿನೋ' ಎಂಬ ಒಂದು ಪುಸ್ತಕವನ್ನು ಬರೆದು ಪ್ರಕಟಿಸಿ, ಅದರ ಪ್ರತಿಗಳನ್ನು ಯುರೋಪಿನ ಎಲ್ಲಾ ರಾಷ್ಟ್ರಗಳಲ್ಲಿ ಹಂಚಿದ. ಸೊಲ್‌ಫೆರಿನೋದಲ್ಲಿ ನಡೆದ 15 ಗಂಟೆಗಳ ಯುದ್ಧದಲ್ಲೇ ಸುಮಾರು 50 ಸಾವಿರ ಜನ ಮೃತಪಟ್ಟ ವರದಿ ಆ ಪುಸ್ತಕದಲ್ಲಿತ್ತು. ನೆಪೋಲಿಯನ್ನನು ಹತ್ತು ವರ್ಷದಿಂದ ನಡೆಸುತ್ತಿದ್ದ ಯುದ್ಧ ಮತ್ತು ಕ್ರಿಮಿಯಾ ಪ್ರಾಂತ್ಯದಲ್ಲಿ ನಡೆದ 3 ವರ್ಷಗಳ ಯುದ್ಧದಿಂದ ಪೀಡಿತರಾಗಿದ್ದವರು, ಯುದ್ದದ ಅನಾಹುತದಿಂದ ಚಿಂತಿತರಾಗಿದ್ದರು. ಯುದ್ದದಲ್ಲಿ ಮಡಿದ ಕುಟುಂಬದವರಿಗೆ ಮತ್ತು ಯುದ್ಧದಲ್ಲಿ ಗಾಯಗೊಂಡವರಿಗೆ ಸಹಾಯ ಮಾಡಬೇಕೆನ್ನುವ ಹೆನ್ರಿಡ್ಯುನಾಂಟ್‌ನ ವಿಚಾರ ಎಲ್ಲಾ ರಾಷ್ಟ್ರದವರಿಗೆ ಹಿಡಿಸಿತು.

ರೆಡ್‌ಕ್ರಾಸ್ ಸ್ಥಾಪನೆಗಾಗಿ ಹೆನ್ರಿಡ್ಯುನಾಂಟ್ ತನ್ನಲ್ಲಿದ ಅಷ್ಟು ಹಣವನ್ನು ತೊಡಗಿಸಿದ. ಇದರಿಂದ ಅವನ ವ್ಯಾಪಾರ ವಹಿವಾಟು ನಿಂತು ಹೋಯಿತು. 1868ರಲ್ಲಿ ಅವನು ಸಂಪೂರ್ಣ ದಿವಾಳಿಯಾಗಿಬಿಟ್ಟ. ತನ್ನ ದುಸ್ಥಿತಿಯ ನೆರಳು ತಾನು ಸ್ಥಾಪಿಸಿದ ಹೊಸ ಸಂಸ್ಥೆಯ ಮೇಲೆ ಬೀಳಬಾರದೆಂದು, ಆತ ರೆಡ್‌ಕ್ರಾಸ್ ಸಮಿತಿಗೆ ರಾಜೀನಾಮೆ ಸಲ್ಲಿಸಿದ. ಹೊಸ ಸದಸ್ಯರು ಸೇರ್ಪಡೆಯಾಗಿ ಅದರ ಕಾರ್ಯ ನಿರ್ವಹಿಸತೊಡಗಿದರು. ಸಂಸ್ಥೆಯಲ್ಲಿ ಕೆಲಸ ಮಾಡುವವರೇ ಹೆನ್ರಿಡ್ಯುನಾಂಟ್‌ನನ್ನು ಮರೆತುಬಿಟ್ಟರು. 30 ವರ್ಷಗಳ ಕಾಲ ಹೆನ್ರಿಡ್ಯುನಾಂಟ್ ಅಜ್ಞಾತವಾಸದಲ್ಲಿ ಉಳಿದ. ಜನರು ಆತ ಮರಣ ಹೊಂದಿದ್ದಾನೆಂದೇ ಭಾವಿಸಿದ್ದರು. ವಿಹಾರಾರ್ಥವಾಗಿ ಹಿಡೆನ್ ಎಂಬ ನಗರಕ್ಕೆ ಬಂದಿದ್ದ ಒಬ್ಬ ಪತ್ರಕರ್ತ ಹೆನ್ರಿಡ್ಯುನಾಂಟ್ ಅಲ್ಲಿರುವುದನ್ನು ಪತ್ತೆ ಮಾಡಿದ. ಹೆನ್ರಿಡ್ಯುನಾಂಟ್ ಬದುಕಿದ್ದಾನೆ ಎಂದು ತಿಳಿದ ಕೂಡಲೇ ಅವನಿಗೆ ಸಹಾಯ ಮಾಡಲು ಹಣದ ಸುರಿಮಳೆಯೇ ಆಗತೊಡಗಿತು. ಆದರೆ ಡುನಂಟ್ ಆ ಎಲ್ಲಾ ಸಹಾಯವನ್ನು ನಿರಾಕರಿಸಿದ. ಏಕೆಂದರೆ ಆ ಸಮಯದಲ್ಲಿ ರೆಡ್‌ಕ್ರಾಸ್ ಸಂಸ್ಥೆ ದೊಡ್ಡ ಪ್ರಮಾಣದಲ್ಲಿ ಬೆಳೆದಿತ್ತು. 1901ರಲ್ಲಿ ಹೆನ್ರಿಡ್ಯುನಾಂಟ್‌ಗೆ ನೊಬೆಲ್ ಪ್ರಶಸ್ತಿ ದೊರೆಯಿತು. ಅಂತರ್‌ರಾಷ್ಟ್ರೀಯ ಸಂಬಂಧಗಳನ್ನು ಉತ್ತಮಪಡಿಸುವ ಮತ್ತು ಯುದ್ಧ ಕೈದಿಗಳಿಗೆ ನೀಡಲಾಗುತ್ತಿದ್ದ ಚಿತ್ರ ಹಿಂಸೆಯನ್ನು ತಪ್ಪಿಸಿ, ಯುದ್ದದ ಭೀಕರತೆಯನ್ನು ಕಡಿಮೆಗೊಳಿಸಿದ್ದಕ್ಕಾಗಿ ನೋಬೆಲ್ ಶಾಂತಿ ಪುರಸ್ಕಾರವನ್ನು ನೀಡಲಾಯಿತು. ಆದರೆ ಹೆನ್ರಿಡ್ಯುನಾಂಟ್ ಆ ಹಣವನ್ನು ಕೂಡ ರೆಡ್‌ಕ್ರಾಸ್ ಸಂಸ್ಥೆಗೆ ದಾನ ಮಾಡಿದ.

1863ರಲ್ಲಿ ಸ್ವಿಡ್ಜರ್‌ಲ್ಯಾಂಡಿನ ಜಿನಿವಾದಲ್ಲಿ 5 ಜನರು ಸೇರಿ ಹೆನ್ರಿಡ್ಯುನಾಂಟ್ ಬರೆದ ಪುಸ್ತಕದಲ್ಲಿನ ವಿಚಾರಗಳನ್ನು ಕಾರ್ಯರೂಪಕ್ಕೆ ತರಲು ಪ್ರಯತ್ನಿಸಿದರು. ಅವರ ಪ್ರಯತ್ನದ ಫಲವಾಗಿ 'ಅಂತರ್‌ರಾಷ್ಟ್ರೀಯ

ರೆಡ್‌ಕ್ರಾಸ್ ಸಂಸ್ಥೆ' ಜನ್ಮತಾಳಿತು. ಯುದ್ಧದಲ್ಲಿ ಗಾಯಗೊಂಡ ಸೈನಿಕರಿಗೆ ಯುದ್ಧ ಕೈದಿಗಳಿಗೆ, ಯುದ್ಧದಿಂದ ನೊಂದ ಸಾರ್ವಜನಿಕರಿಗೆ ನಿಷ್ಪಕ್ಷಪಾತವಾಗಿ ಉತ್ತಮ ಸೇವೆ ದೊರೆಯಬೇಕೆಂಬುದೇ ಇವರ ಮೂಲ ಉದ್ದೇಶವಾಗಿತು. ಹೀಗಾಗಿ 26 ದೇಶಗಳ ಪ್ರತಿನಿಧಿಗಳು ಸಭೆ ಸೇರಿ 1864ರಲ್ಲಿ ಮೊದಲನೆಯ ಜಿನಿವಾ ಕನ್ವೆನ್ಷನ್ ಜಾರಿಗೆ ಬರುವಂತೆ ಮಾಡಿದರು.

ಅಂತರ್‌ರಾಷ್ಟ್ರಿಯ ರೆಡ್‌ಕ್ರಾಸ್ ಸಂಸ್ಥೆ 1863ರಲ್ಲಿಯೇ ಜನ್ಮತಾಳಿದರೂ, 1864ರ ಜಿನಿವಾ ಕನ್ವೆಷನ್‌ನಿಂದಾಗಿ ಇದಕ್ಕೊಂದು ವ್ಯವಸ್ಥಿತವಾದ ರೂಪ ದೊರೆಯಿತು. 1880ರಲ್ಲಿ ಬಿಳಿಯ ಧ್ವಜದ ಮೇಲೆ ಕೆಂಪು ಧನಾತ್ಮಕ ಚಿಹ್ನೆ ಹೊಂದಿರುವ ರೆಡ್‌ಕ್ರಾಸ್ ಚಿಹ್ನೆಯನ್ನು ಅಂಗೀಕರಿಸಲಾಯಿತು. ಪ್ರಸ್ತುತ ರೆಡ್‌ಕ್ರಾಸ್ ಸೊಸೈಟಿಯ ನಿಯಮಗಳು 1949ರ ಜಿನಿವಾ ಕನ್‌ವೆನ್‌ಷನ್‌ಗೆ ಒಳಪಡುತ್ತವೆ. ವಿಶ್ವದ ಸುಮಾರು 188 ರಾಷ್ಟ್ರಗಳಲ್ಲಿ ಸುಮಾರು 12 ಸಾವಿರ ಜನರು ರೆಡ್‌ಕ್ರಾಸ್ ಸೊಸೈಟಿಗಾಗಿ ಕೆಲಸ ಮಾಡುತ್ತಿದ್ದಾರೆ.

ಇಡೀ ವಿಶ್ವದಲ್ಲಿ 9 ಕೋಟಿ 70 ಲಕ್ಷ ಜನರು ಇದರ ಸದಸ್ಯರು ಹಾಗೂ ಇದಕ್ಕಾಗಿ ಕೆಲಸ ಮಾಡುವ ಸ್ವಯಂ ಸೇವಕರಿದ್ದಾರೆ. ರೆಡ್‌ಕ್ರಾಸ್ ಸಂಸ್ಥೆಗೆ ಗಾಯಗೊಂಡ ಸೈನಿಕನು ಯಾವ ದೇಶದವನು, ಅವನ ಜಾತಿ ಯಾವುದು ಎಂಬುದು ಮುಖ್ಯವಲ್ಲ. ಅದರ ಮುಖ್ಯ ಉದ್ದೇಶ ರೋಗಿಗಳ ಯುದ್ಧಕೈದಿಗಳ ಮತ್ತು ಶತ್ರುಗಳ ಸೀಮೆಯಲ್ಲಿ ನರಳುತ್ತ ಬಿದ್ದಿರುವ, ಗಾಯಗೊಂಡ ಸಿಪಾಯಿಗಳ ಸೇವೆ ಮಾಡುವುದೇ ಆಗಿದೆ.

ಅಂತರ್‌ರಾಷ್ಟ್ರೀಯ ರೆಡ್‌ಕ್ರಾಸ್ ಸಂಸ್ಥೆ ತನ್ನ ಎಲ್ಲಾ ಸದಸ್ಯ ರಾಷ್ಟ್ರಗಳಲ್ಲಿ ಬ್ಲಡ್‌ಬ್ಯಾಂಕ್‌ಗಳನ್ನು ನಡೆಸುತ್ತಿದೆ. ದೇಶದ ವಿವಿಧ ಭಾಗಗಳಲ್ಲಿ ರಕ್ತದಾನ ಶಿಬಿರಗಳನ್ನು ಏರ್ಪಡಿಸುವುದು ಮತ್ತು ರಕ್ತದಾನಕ್ಕಾಗಿ ಜನರನ್ನು ಪ್ರೇರೇಪಿಸುವುದು ರೆಡ್‌ಕ್ರಾಸ್ ಸಂಸ್ಥೆಯ ಇನ್ನೊಂದು ಉದ್ದೇಶವಾಗಿದೆ. ರೆಡ್‌ಕ್ರಾಸ್ ಸಂಸ್ಥೆ ಆಯೋಜಿಸುವ ರಕ್ತದಾನ ಶಿಬಿರಗಳಿಂದಾಗಿ ಪ್ರತಿವರ್ಷ ಎನಿಮಿಯಾ, ಥೈಲಿಸಿಮಿಯಾ, ಕ್ಯಾನ್ಸರ್, ಟಿ.ಬಿ. ಮುಂತಾದ ರೋಗಗಳಿಂದ ಸಾವಿನ ಅಂಚಿನಲ್ಲಿರುವ ಸಾವಿರಾರು ರೋಗಿಗಳು ಬದುಕುಳಿಯುತ್ತಿದ್ದಾರೆ. ಭಾರತದ ಕೇಂದ್ರೀಯ ಸ್ವಾಸ್ಥ ಮತ್ತು ಕುಟುಂಬ ಕಲ್ಯಾಣಮಂತ್ರಿಗಳು ಇತ್ತೀಚಿಗೆ ನೀಡಿರುವ ಹೇಳಿಕೆಯಂತೆ ರೆಡ್‌ಕ್ರಾಸ್ ಸಂಸ್ಥೆ, ಭಾರತದಲ್ಲಿ ಸುಮಾರು 166 ಬ್ಲಡ್‌ಬ್ಯಾಂಕ್‌ಗಳ ಮೂಲಕ ರಕ್ತ ಸಂಗ್ರಹ ಕಾರ್ಯವನ್ನು ಕೈಗೊಳ್ಳುತ್ತಿದೆ. ಇದು ಒಟ್ಟು ರಕ್ತ ಸಂಗ್ರಹದ ಶೇಕಡ ಹತ್ತರಷ್ಟಾಗಿದೆ.

'ಭಾರತೀಯ ರೆಡ್‌ಕ್ರಾಸ್ ಸಂಸ್ಥೆ'ಯ ಕೇಂದ್ರೀಯ ಕಾಯ್ದೆಯಡಿಯಲ್ಲಿ 'ಇಂಡಿಯನ್ ರೆಡ್‌ಕ್ರಾಸ್ ಸೊಸೈಟಿ ಆ್ಯಕ್ಟ್ 1920'ರ ಅಡಿಯಲ್ಲಿ ಸ್ಥಾಪನೆಗೊಂಡಿದ್ದು, ಕರ್ನಾಟಕದಲ್ಲೂ ಕೂಡ 1921ರಿಂದಲೇ ಅಸ್ತಿತ್ವದಲ್ಲಿದೆ. ಈ ಸಂಸ್ಥೆಯ ಅಧ್ಯಕ್ಷರು ಗೌರವಾನ್ವಿತ ರಾಷ್ಟ್ರಪತಿಗಳಾಗಿದ್ದು, ರಾಜ್ಯಶಾಖೆಗೆ ಘನತೆವೆತ್ತ ರಾಜ್ಯಪಾಲರು ಅಧ್ಯಕ್ಷರಾಗಿರುತ್ತಾರೆ. ಈ ಸಂಸ್ಥೆಯು ಯುದ್ಧ ಸಮಯದಲ್ಲಿ ಗಾಯಗೊಂಡ ಸೈನಿಕರಿಗೆ, ನೈಸರ್ಗಿಕ ವಿಕೋಪಗಳು ಸಂಭವಿಸಿದಾಗ ಪರಿಹಾರ ಕಾರ್ಯದಲ್ಲಿ ಹಾಗೂ ಸಾರ್ವಜನಿಕರಿಗೆ ಶುಶ್ರೂಷೆ ಮಾಡುವ ಸೇವಾಸಂಸ್ಥೆಯಾಗಿದೆ. ಮಾನವೀಯತೆ, ನಿಷ್ಪಕ್ಷಪಾತಧೋರಣೆ, ತಟಸ್ಥತೆ, ಸ್ವಯಂಪ್ರೇರಿತ ಸೇವೆ, ಏಕತೆ ಮತ್ತು ಸಾರ್ವಭೌಮತ್ವ ಸಾರುವಲ್ಲಿ ತನ್ನ ಸೇವೆಯನ್ನು ಮುಂದುವರಿಸುತ್ತಿರುವ ಅಂತರ್‌ರಾಷ್ಟ್ರೀಯ ರೆಡ್‌ಕ್ರಾಸ್ ಸಂಸ್ಥೆ 3 ಬಾರಿ ನೋಬಲ್ ಪ್ರಶಸ್ತಿ ಪಡೆದಿರುವುದು ಶ್ಲಾಘನೀಯವಾದುದು. ಈ ಸಂಸ್ಥೆಯ ಸಾರ್ಥಕಮಯವಾದ ನಿಸ್ವಾರ್ಥ ಸೇವೆ ಚಿರಕಾಲ ಮುಂದುವರಿಯಲಿ.

* * * * *

ಧರ್ಮವೇ ಭಾರತದ ಉಸಿರು. ಧರ್ಮಕ್ಕೆ ಚ್ಯುತಿ ಬಂದರೆ ಜನಜೀವನದಲ್ಲಿ ಅಶಾಂತಿ ಬೆಳೆಯುತ್ತದೆ.

– ಜಗದ್ಗುರು ಶ್ರೀ ಶ್ರೀ ಶ್ರೀ ಡಾ. ಬಾಲಗಂಗಾಧರನಾಥ ಮಹಾಸ್ವಾಮೀಜಿಯವರು

ವಿಜ್ಞಾನ ಮತ್ತು ತಂತ್ರಜ್ಞಾನದೊಡನೆ ಪಾರಮಾರ್ಥಿಕ ಜ್ಞಾನವನ್ನು ಸಮ್ಮಿಲನಗೊಳಿಸಿಕೊಂಡಾಗ ಬದುಕು ಸುಂದರವಾಗುತ್ತದೆ.

– ಜಗದ್ಗುರು ಶ್ರೀ ಶ್ರೀ ಶ್ರೀ ಡಾ. ನಿರ್ಮಲಾನಂದನಾಥ ಮಹಾಸ್ವಾಮೀಜಿಯವರು

# ಬ್ಯಾಂಕಿಂಗ್ ವ್ಯವಸ್ಥೆಯನ್ನು ದುರ್ಬಲಗೊಳಿಸುವ ಹಗರಣಗಳು

– ಪ್ರತಿಮ, ಕೆ, ಸಹಾಯಕ ಪ್ರಾಧ್ಯಾಪಕರು

ಬ್ಯಾಂಕುಗಳಿಂದ ಪಡೆದುಕೊಂಡ ಸಾಲವನ್ನು ಹಿಂತಿರುಗಿಸದೆ ಮೋಸ ಮಾಡಿ ದೇಶವನ್ನೇ ಬಿಟ್ಟು ವಿದೇಶಗಳಿಗೆ ಹೋಗುವ ಪ್ರವೃತ್ತಿ ಉದ್ಯಮ ರಂಗದಲ್ಲಿ ಸಾಮಾನ್ಯವಾಗುತ್ತಿದೆ. ಈಗಾಗಲೇ ಸಾರ್ವಜನಿಕ ರಂಗದ ಬ್ಯಾಂಕುಗಳು ಹೆಚ್ಚುತ್ತಿರುವ ಅನುತ್ಪಾದಕ ಆಸ್ತಿಯ ಹೊರೆಯಿಂದ ನಲುಗಿವೆ. ಈ ಸಂದರ್ಭದಲ್ಲಿ ಉದ್ಯಮಿಗಳು ಬ್ಯಾಂಕುಗಳಿಗೆ ಮೋಸ ಮಾಡುವ ಮೂಲಕ ಬ್ಯಾಂಕುಗಳ ಆರ್ಥಿಕ ಸ್ಥಿತಿಯನ್ನು ಇನ್ನಷ್ಟು ಹದಗೆಡುಸುತ್ತಿದ್ದಾರೆ. ಸಾಲ ಕೊಡುವುದು ಸುಲಭ, ಕೊಟ್ಟದ್ದನ್ನು ಹಿಂಪಡೆಯುವುದು ಬಹಳ ಕಷ್ಟ.

1992ರಲ್ಲಿ ಹರ್ಷದ್ ಮೆಹ್ತಾ ಎಂಬ ಶೇರು ದಲ್ಲಾಳಿ ಬ್ಯಾಂಕಿಂಗ್ ವ್ಯವಸ್ಥೆಯನ್ನು ಬಳಸಿಕೊಂಡು ದಿವಾಳಿಯಾಗಿದ್ದು, ಈ ಹಗರಣದಲ್ಲಿ ಬ್ಯಾಂಕುಗಳಿಗೆ ಸುಮಾರು 4000 ಕೋಟಿ ರೂಪಾಯಿ ನಷ್ಟವಾಗಿತ್ತು. ಇದರಂತೆ ಕೇತನ್ ಪಾರಿಖ್ 1998–2001ರ ಸಮಯದಲ್ಲಿ ಷೇರು ಮಾರುಕಟ್ಟೆಗೆ ಬ್ಯಾಂಕಿನ ಹಣವನ್ನು ಹೂಡಿ ನಷ್ಟ ಅನುಭವಿಸಿದ್ದು, ಹಾಗೆಯೇ ಸತ್ಯಂ ಕಂಪ್ಯೂಟರ್ ಹಗರಣ ಹಾಗೂ 9000 ಕೋಟಿ ರೂಪಾಯಿಯನ್ನು ಬ್ಯಾಂಕುಗಳಿಗೆ ವಂಚಿಸಿ ವಿದೇಶಕ್ಕೆ ಓಡಿಹೋದ ವಿಜಯ್‌ಮಲ್ಯರ ಹಗರಣ ಹಾಗೂ ಇತ್ತೀಚೆಗೆ 11,400 ಕೋಟಿ ರೂಪಾಯಿ ನೀರವ್ ಮೋದಿ ಹಗರಣವಾಗಲಿ, ಈ ಎಲ್ಲಾ ಹಗರಣಗಳು ಸಂಭವಿಸಿರುವುದು ಬ್ಯಾಂಕಿಂಗ್ ವ್ಯವಸ್ಥೆಯಲ್ಲಿರುವ ಲೋಪಗಳಿಂದ ಹಾಗೂ ಈ ಹಗರಣಕೋರರಿಗೆ ಬ್ಯಾಂಕ್ ಅಧಿಕಾರಿಗಳೇ ನೆರವಾಗಿರುವುದು ದುಃಖಕರ ಸಂಗತಿಯಾಗಿದೆ.

ಹೀಗೆ ಕೋಟಿಗಟ್ಟಲೆ ಹಣವನ್ನು ಬ್ಯಾಂಕುಗಳಿಗೆ ಮೋಸ ಮಾಡುವ ದೊಡ್ಡ ಉದ್ಯಮಿಗಳ ಮಧ್ಯೆ ಬಡವರು, ರೈತರು ಸರ್ಕಾರದಿಂದ ವಿನಾಯಿತಿ, ಬಡ್ಡಿ ಮನ್ನಾ, ಸಾಲ ಮನ್ನಾ ಮುಂತಾದವುದನ್ನು ನಿರೀಕ್ಷಿಸುವುದರಲ್ಲಿ ತಪ್ಪಿಲ್ಲ. ಜನಸಾಮಾನ್ಯರು ಸಾಲ ಕೋರಿ ಬ್ಯಾಂಕಿಗೆ ಹೋದರೆ ನೂರಾರು ಪ್ರಶ್ನೆಗಳನ್ನು ಕೇಳಿ ಸಾಲ ನೀಡಿ ಒಂದೆರಡು ಕಂತು ಬಾಕಿಯಾದರೆ, ಬ್ಯಾಂಕಿನಿಂದ ನೋಟಿಸ್‌ಗಳ ಸುರಿಮಳೆಯಾಗಿ, ನಂತರ ಕಾನೂನುಕ್ರಮ ಕೈಗೊಳ್ಳಲು ಮುಂದಾಗುತ್ತವೆ. ಆದರೆ ಶ್ರೀಮಂತ ಉದ್ಯಮಿಗಳು ಕೋಟಿಗಟ್ಟಲೆ ಬ್ಯಾಂಕುಗಳಿಗೆ ಮೋಸ ಮಾಡಿ ವಿದೇಶಗಳಿಗೆ ಹೋಗಿ, ಅಲ್ಲಿ ಐಷರಾಮಿ ಜೀವನವನ್ನು ನಡೆಸುತ್ತಿದ್ದರೂ ಸಹ ಅದನ್ನು ನೋಡಿ ಏನು ಮಾಡಲಾಗದ ಅಸಹಾಯಕ ಸ್ಥಿತಿಯಲ್ಲಿವೆ ನಮ್ಮ ಭಾರತ ದೇಶದ ಬ್ಯಾಂಕುಗಳು.

ಇಂತಹ ಹಗರಣಗಳು ಮತ್ತೆ ಮರುಕಳಿಸಬಾರದೆಂದರೆ ಮೊದಲು ಬ್ಯಾಂಕಿಗ್ ವ್ಯವಸ್ಥೆಯಲ್ಲಿರುವ ಲೋಪದೋಷಗಳು ನಿವಾರಣೆಯಾಗಬೇಕು. ಕಟ್ಟುನಿಟ್ಟಿನ ಕಾನೂನಿನ ಕ್ರಮಗಳನ್ನು ಕೈಗೂಳ್ಳಬೇಕು. ಹಾಗೆಯೇ ತಪ್ಪಿಸ್ಥರಿಗೆ ಕಠಿಣ ಶಿಕ್ಷೆ ಶೀಘ್ರಗತಿಯಲ್ಲಿ ಆಗಬೇಕು. ವಿದೇಶಗಳಿಗೆ ಓಡಿ ಹೋದವರನ್ನು ಕೋಟಿ ಖರ್ಚು ಮಾಡಿ ಕರೆತರುವ ಬದಲು, ಓಡಿ ಹೋಗದಂತೆ ಕಟ್ಟುನಿಟ್ಟಿನ ಕಾನೂನು ಕ್ರಮ ಕೈಗೂಳ್ಳಬೇಕಾಗಿದೆ. ಆದರೆ ಕೇಂದ್ರ ಸರ್ಕಾರ ಸಾರ್ವಜನಿಕ ವಲಯದ ಬ್ಯಾಂಕುಗಳಿಗೆ ಶಕ್ತಿ ತುಂಬಲು ಹಣಕಾಸಿನ ಸಹಾಯ ಹಸ್ತ ನೀಡಿದೆ. ಹೀಗೆ ಪದೆಪದೇ ಬ್ಯಾಂಕುಗಳಿಗೆ ಬಂಡವಾಳ ಒದಗಿಸುವುದು ಒಳ್ಳೆಯ ಕ್ರಮವಲ್ಲ. ಅದರ ಬದಲಾಗಿ ಅವುಗಳ ಅನುತ್ಪಾದಕ ಆಸ್ತಿಗಳನ್ನು ಮರುವಸೂಲಿ ಮಾಡಲು ಒಳ್ಳೆಯ ಯೋಜನೆಗಳನ್ನು ರೂಪಿಸಿಕೊಡಬೇಕಾಗಿದೆ.

2015–2017 ನಡುವೆ ಸುಮಾರು 5243 ಬ್ಯಾಂಕ್ ಅಧಿಕಾರಿಗಳಿಗೆ ವಂಚನೆ ಪ್ರಕರಣಗಳಿಗಾಗಿ ಶಿಕ್ಷೆ ಆಗಿದೆ. ಗ್ರಾಹಕರ ಹಣಕಾಸಿನ ವ್ಯವಹಾರಗಳನ್ನು ಹಲವು ಬಾರಿ ಪರೀಕ್ಷಿಸುವ, ಅವುಗಳ ಕುರಿತಾಗಿ ಮಾಹಿತಿ ಸಂಗ್ರಹಿಸುವ ಬ್ಯಾಂಕುಗಳು ತಮ್ಮ ಸಿಬ್ಬಂದಿಗಳ ಹಣಕಾಸಿನ ವ್ಯವಹಾರಗಳನ್ನು, ಅವರ ಚಟುವಟಿಕೆಗಳನ್ನು ಸಹ ಪರೀಕ್ಷಿಸಿ, ಮಾಹಿತಿ ಸಂಗ್ರಹಿಸುವುದು ಈ ಸಂದರ್ಭದಲ್ಲಿ ಅನಿವಾರ್ಯವಾಗಿದೆ. ಬ್ಯಾಂಕಿಂಗ್ ವ್ಯವಸ್ಥೆಯಲ್ಲಿ ಪ್ರಾಮಾಣಿಕತೆ, ಪಾರದರ್ಶಕತೆಯನ್ನು ಪರಿಣಾಮಕಾರಿಯಾಗಿ ರೂಪಿಸಬೇಕಾಗಿದೆ. ಇಲ್ಲವಾದರೆ ಬೇರೆ ದೇಶಗಳು ಅಭಿವೃದಿಯನ್ನು ಸಾಧಿಸಲು ಬ್ಯಾಂಕಿಂಗ್ ವ್ಯವಸ್ಥೆಯನ್ನು ಬಲಿಷ್ಠಗೊಳಿಸುವ ಪ್ರಯತ್ನ ಮುಂದುವರಿಸುತ್ತಿದ್ದರೆ, ನಮ್ಮ ದೇಶದಲ್ಲಿ ಇಂತಹ ಹಗರಣಗಳು ಬ್ಯಾಂಕಿಂಗ್ ವ್ಯವಸ್ಥೆಯನ್ನು ಹದಗೆಡಿಸುತ್ತಿವೆ.

* * * * *

# ಪರೀಕ್ಷೆ ಎದುರಿಸುವುದು ಹೇಗೆ ?

– ರಾಘವೇಂದ್ರ ಎನ್. ಆರ್., ತೃತೀಯ ಬಿ.ಕಾಂ.

ಪ್ರತಿಯೊಬ್ಬರೂ ಅವರವರ ಜೀವನದಲ್ಲಿ ಅನೇಕ ಪರೀಕ್ಷೆಗಳನ್ನು ಎದುರಿಸಬೇಕಾಗುತ್ತದೆ. ಅದೇ ರೀತಿ ವಿದ್ಯಾರ್ಥಿಗಳು ತಮ್ಮ ವಿದ್ಯಾರ್ಥಿ ಜೀವನದಲ್ಲಿ ಅನೇಕ ಪರೀಕ್ಷೆಗಳನ್ನು ಎದುರಿಸುತ್ತಾರೆ. ಅಂತಹ ಪರೀಕ್ಷೆಗಳನ್ನು ಎದುರಿಸುವಾಗ ವಿದ್ಯಾರ್ಥಿಗಳು ಆತಂಕಕ್ಕೆ ಈಡಾಗುತ್ತಾರೆ. "ಅಯ್ಯೋ ಈ ಪರೀಕ್ಷೆ ಬಂತಲ್ಲ, ನಾನೇನು ಓದಿಲ್ಲ ಏನು ಮಾಡುವುದು" ಎಂದು ಭಯದಿಂದ ತಮ್ಮ ಮನಸ್ಸನ್ನು ದುಗುಡಗೊಳಿಸುತ್ತಾರೆ. ಇದಕ್ಕೆ ಪರಿಹಾರದಂತೆ ಪರೀಕ್ಷೆಯನ್ನು ಸುಲಭವಾಗಿ ಎದುರಿಸಲು ನಾನು ಕೆಲವು ಮಾರ್ಗ ಮತ್ತು ಉಪಾಯಗಳನ್ನು ತಿಳಿಸುತ್ತೇನೆ. ಈ ಕೆಳಕಂಡ ಮಾರ್ಗೋಪಾಯಗಳನ್ನು ಅನುಸರಿಸಿದರೆ ಸುಲಭವಾಗಿ ಪರೀಕ್ಷೆಯಲ್ಲಿ ಅತ್ಯುನ್ನತ ಶ್ರೇಣಿ ಪಡೆದು ಪಾಸಾಗುವುದರಲ್ಲಿ ಸಂಶಯವೇ ಬೇಡ.

❖ **ಮನಸ್ಸನ್ನು ಹಿಡಿತದಲ್ಲಿಟ್ಟುಕೊಳ್ಳುವುದು ಅಥವಾ ಏಕಾಗ್ರತೆ ಬೆಳೆಸಿಕೊಳ್ಳುವುದು :** ವಿದ್ಯಾರ್ಥಿಗಳ ಮನಸ್ಸು ಹುಚ್ಚು ಕುದುರೆಯ ರೀತಿಯಲ್ಲಿ ಅನಗತ್ಯ ವಿಷಯಗಳನ್ನು ಆಲಿಸುತ್ತಾ ಹೋಗುವುದು ಸಹಜ. ಆದರೆ ಆ ಮನಸ್ಸನ್ನು ತನ್ನ ಹತೋಟಿಯಲ್ಲಿಟ್ಟುಕೊಳ್ಳುವುದು ತುಂಬಾ ಅವಶ್ಯಕವಾಗಿರುತ್ತದೆ. ಇದಕ್ಕೆ ಹಿರಿಯರ ವಾಕ್ಯ ಒಂದಿದೆ. "ಮನಸ್ಸಿದ್ದರೆ ಮಾರ್ಗ" ಇದು ಬರೀ ನುಡಿಯಲ್ಲ ಅನುಭವದ ಮಾತಾಗಿರುತ್ತದೆ. ಇದನ್ನೇ ಏಕಾಗ್ರತೆ ಎನ್ನುವರು. ಅಂದರೆ ತಮ್ಮ ಆಲೋಚನಾಶಕ್ತಿ, ಭಾವನಾ ಶಕ್ತಿ, ಇಚ್ಛಾಶಕ್ತಿಗಳನ್ನು ಒಂದೆಡೆ ಕೇಂದ್ರೀಕರಿಸಿ ಪಠ್ಯವಿಷಯವನ್ನು ನಿರಂತರವಾಗಿ ಅಭ್ಯಾಸ ಮಾಡುವುದರಿಂದ ಪರೀಕ್ಷೆಯನ್ನು ಸುಲಭವಾಗಿ ಎದುರಿಸಬಹುದು.

❖ **ಓದುವ ವಾತಾವರಣ ಸೃಷ್ಟಿಸಿಕೊಳ್ಳಿ :** ಪಠ್ಯ ವಿಷಯಗಳನ್ನು ಅಭ್ಯಾಸ ಮಾಡಲು ಉತ್ತಮ ವಾತಾವರಣವಿದ್ದರೆ ತುಂಬಾ ಒಳ್ಳೆಯದು. ಇದಕ್ಕೆ ಒಂದು ಪ್ರತ್ಯೇಕ ಕೋಣೆ ಇದ್ದರೆ ಉತ್ತಮ. ಇಲ್ಲದಿದ್ದರೆ, ನೀವು ಅಭ್ಯಾಸ ಮಾಡುವ ಸ್ಥಳದಲ್ಲೇ ಶಬ್ಧ ಇಲ್ಲದಂತಹ ವಾತಾವರಣ ಸೃಷ್ಟಿಸಲು ಪ್ರಯತ್ನಿಸಿ. ಟಿ.ವಿ, ರೇಡಿಯೋ, ಮೊಬೈಲ್, ಇಂಟರ್‌ನೆಟ್ ಇವುಗಳಿಂದ ದೂರವಿರಿ. ನೀವು ಓದುವ ಕೋಣೆಯಲ್ಲಿ ಒಂದು ಸುಂದರವಾದ ಹೂವು ಅಥವಾ ನಿಸರ್ಗದ ಭಾವಚಿತ್ರವಿದ್ದರೆ ಉತ್ತಮ. ಇದರಿಂದ ನಮ್ಮ ಏಕಾಗ್ರತೆಗೆ ಸಹಾಯಕವಾಗುತ್ತದೆ.

❖ **ಓದುವ ಸಮಯ ನಿಗದಿ ಪಡಿಸಿಕೊಳ್ಳಿ :** ನಾವು ಓದುವಾಗ ನಮಗೆ ಸಮಯ ಎಂಬ ಬಂಡಿ ಇರಲೇ ಬೇಕಾಗುತ್ತದೆ. ಪರೀಕ್ಷೆಯು ಸಮಯಕ್ಕೆ ಸೀಮಿತವಾಗಿರುತ್ತದೆ. ಆದ್ದರಿಂದ ನಾವು ದಿನಕ್ಕೆ 6 ರಿಂದ 7 ಗಂಟೆಗಳ ಕಾಲ(ತರಗತಿಯ ಅವಧಿ ಹೊರತುಪಡಿಸಿ) ಅಭ್ಯಾಸ ಮಾಡುವುದು ಉತ್ತಮ. ಅಂದರೆ, ನಿಮಗೆ ಅನುಕೂಲಕರವಾಗುವಂತೆ ಒಂದು ವೇಳಾಪಟ್ಟಿ ತಯಾರಿಸಿಕೊಂಡು ಅಭ್ಯಸಿಸುವುದು ಉತ್ತಮ.

❖ **ನಿದ್ರೆಗೆಡಬೇಡಿ :** ಪ್ರತಿಯೊಬ್ಬ ಮನುಷ್ಯನು ಪ್ರತಿದಿನ ಸುಮಾರು 7 ಗಂಟೆಗಳ ಕಾಲ ನಿದ್ರೆ ಮಾಡುವುದು ಸೂಕ್ತ. ಕೆಲವರು ಬೆಳ್ಳಿಗೆ ಬೇಗ ಏಳಲಾಗುವುದಿಲ್ಲವೆಂದು ರಾತ್ರಿ ಪೂರ ಅಭ್ಯಸಿಸುತ್ತಾರೆ, ಇದು ತಪ್ಪು. ನಿದ್ರೆಗೆಡುವುದರಿಂದ ನೀವು ಅಭ್ಯಾಸ ಮಾಡಿರುವ ಅಷ್ಟೂ ವಿಷಯಗಳು ಮರೆತು ಹೋಗುವ ಸಂಭವವಿದೆ. ಆದ್ದರಿಂದ ರಾತ್ರಿ 11 ಗಂಟೆಯವರೆಗೆ ಮತ್ತು ಬೆಳಗ್ಗೆ 5.30 ರಿಂದ ಓದಲು ಪಾರಂಭಿಸುವುದು ಸೂಕ್ತ.

❖ **ಅನಾವಶ್ಯಕ ಚರ್ಚೆ ಬೇಡ :** ಈಗಿನ ಸಮಾಜದಲ್ಲಿ ವಿದ್ಯಾರ್ಥಿಗಳಿಗೆ ಓದುವ ವಿಷಯಕ್ಕಿಂತ ಬೇರೆ ವಿಷಯಗಳಲ್ಲಿ ಆಸಕ್ತಿ ಹೆಚ್ಚು. ಉದಾಹರಣೆಗೆ ಕ್ರಿಕೇಟ್, ಚಲನಚಿತ್ರ, ಪ್ರೀತಿ, ಮೊಬೈಲ್ ಇತ್ಯಾದಿ. ವಿದ್ಯಾರ್ಥಿಗಳು ಈ ಮೇಲಿನ ಎಲ್ಲಾ ವಿಷಯಗಳ ಬಗ್ಗೆ ಅನವಶ್ಯಕವಾಗಿ ಚರ್ಚಿಸುವುದನ್ನು ನಿಲ್ಲಿಸಿ. ಏಕೆಂದರೆ, ಇದನ್ನು ಚರ್ಚಿಸುವುದರಿಂದ ನಿಮ್ಮ ಜ್ಞಾಪನಾ ಶಕ್ತಿ ಕುಗ್ಗುತ್ತದೆ. ಈ ಚರ್ಚೆಗಿಂತ ನೀವು ಓದಿರುವ ವಿಷಯಗಳ ಬಗ್ಗೆ ಚರ್ಚಿಸುವುದರಿಂದ ಜ್ಞಾನ ವೃದ್ಧಿಸುತ್ತದೆ.

❖ **ಓದಿದ್ದನ್ನು ಮನನ ಮಾಡಿಕೊಳ್ಳಿ :** ತಾವು ಓದಿರುವ ವಿಷಯಗಳನ್ನು ತಮಗೆ ಸಮಯ ಸಿಕ್ಕಾಗಲೆಲ್ಲ ಮನನ ಮಾಡಿಕೊಳ್ಳುವುದರಿಂದ ಅದು ಅಚ್ಚಳಿಯದಂತೆ ಉಳಿದಿರುತ್ತದೆ.

❖ **ಗುರಿಯ ಕಡೆ ಗಮನ :** ವಿದ್ಯಾರ್ಥಿಗಳು ತಮ್ಮಲ್ಲಿ ಯಾವುದಾದರೊಂದು ಗುರಿ ಸಾಧನೆ ಮಾಡಬೇಕೆಂದು ಛಲ

ತೊಟ್ಟು ಓದುವುದರಿಂದ ಪರೀಕ್ಷೆಯನ್ನು ಎದುರಿಸಲು ಭಯಪಡುವ ಅವಶ್ಯಕತೆ ಇರುವುದಿಲ್ಲ ಮತ್ತು ನಿಮ್ಮ ಗುರಿಗೆ ಬೇಕಾಗಿರುವ ಎಲ್ಲಾ ರೀತಿಯ ಸಿದ್ಧತೆ ಮಾಡಿಕೊಂಡು ಅಭ್ಯಾಸ ಮಾಡಿ, ಇದರಿಂದ ಬೇಗನೆ ಗುರಿ ತಲುಪಬಹುದಾಗಿದೆ.

**"ವಿದ್ಯೆ ಸಾಧಕನ ಸ್ವತ್ತೇ ಹೊರತು ಸೋಮಾರಿಗಳ ಸ್ವತ್ತಲ್ಲ"**

* * * * *

## ಕುವೆಂಪುರವರ ವಿಶ್ವಮಾನವ ಸಂದೇಶ

– ಸಿಂಧು .ಡಿ. ಎಲ್, ತೃತೀಯ ಬಿ.ಕಾಂ.

ಪ್ರತಿಯೊಂದು ಮಗುವೂ ಹುಟ್ಟುತ್ತಲೇ ವಿಶ್ವಮಾನವ, ಬೆಳೆಯುತ್ತಾ ನಾವು ಅದನ್ನು ಅಲ್ಪ ಮಾನವನನ್ನಾಗಿ ಮಾಡುತ್ತೇವೆ. ಮತ್ತೆ ಅದನ್ನು 'ವಿಶ್ವಮಾನವ'ನನ್ನಾಗಿ ಮಾಡುವುದೇ ವಿದ್ಯೆಯ ಕರ್ತವ್ಯವಾಗಬೇಕು.ಹುಟ್ಟುವಾಗ ವಿಶ್ವಮಾನವನಾಗಿಯೇ ಹುಟ್ಟಿದ ಮಗುವನ್ನು ನಾವು ದೇಶ, ಭಾಷೆ, ಮತ, ಜಾತಿ, ಜನಾಂಗ, ವರ್ಣ ಇತ್ಯಾದಿ ಉಪಾಧಿಗಳಿಂದ ಬದ್ಧನನ್ನಾಗಿ ಮಾಡುತ್ತೇವೆ. ಅವೆಲ್ಲವುಗಳಿಂದ ಪಾರಾಗಿ ಅವನನ್ನು 'ಬುದ್ಧ'ನನ್ನಾಗಿ ಅಂದರೆ ವಿಶ್ವಮಾನವನನ್ನಾಗಿ ಪರಿವರ್ತಿಸುವುದೇ ನಮ್ಮ ವಿದ್ಯೆ, ಸಂಸ್ಕೃತಿ, ನಾಗರೀಕತೆ ಎಲ್ಲದರ ಆದ್ಯ ಕರ್ತವ್ಯವಾಗಬೇಕು.

ಪ್ರಪಂಚದ ಮಕ್ಕಳೆಲ್ಲ 'ಅನಿಕೇತನ'ರಾಗಬೇಕು. ಲೋಕ ಉಳಿದು ಬಾಳಿ ಬದುಕಬೇಕಾದರೆ! ಮಾನವ ವಿಕಾಸದ ಹಾದಿಯಲ್ಲಿ ಆಯಾ ಕಾಲದ ಅಗತ್ಯವನ್ನು ಪೂರೈಸಲು ಮಹಾಪುರುಷರು ಸಂಭವಿಸಿ ಹೋಗಿದ್ದಾರೆ. ಅವರಲ್ಲಿ ಕೆಲವರ ವಾಣಿ ವಿಶಿಷ್ಟ ಧರ್ಮವಾಗಿ ರೂಪುಗೊಂಡು ಕಡೆಗೆ ಮತವಾಗಿ ಪರಿಮಿತವಾಯಿತು. ಮಾನವರನ್ನು ಕೂಡಿಸಿ ಬಾಳಿಸಬೇಕೆಂಬ ಉದ್ದೇಶದಿಂದ ಹುಟ್ಟಿಕೊಂಡ ಮಹಾತ್ಮರ ವಾಣಿ ಮತವಾಗಿ ಮಾದಕವಾಯಿತು. ಒಂದು ಯುಗಕ್ಕೆ ಅಗತ್ಯವೆನಿಸಿದ ಧರ್ಮ ಕಾಲಾನುಕಾಲಕ್ಕೆ ಮತವಾಗಿ ನಿರುಪಯುಕ್ತವೆನಿಸಿ ಮತ್ತೊಂದು ಹೊಸ ಧರ್ಮಕ್ಕೆ ಎಡೆಗೊಟ್ಟುದು ಉಂಟು. ಹೀಗಾಗಿ ಅನೇಕ ಧರ್ಮಗಳು ಮತಗಳಾಗಿ ಜನತೆಯನ್ನು ಗುಂಪುಗುಂಪಾಗಿ ಒಡೆದಿವೆ. ಯುದ್ಧಗಳನ್ನು ಹೊತ್ತಿಸಿವೆ. ಜಗತ್ತಿನ ಕ್ಷೋಭೆಗಳಿಗೆಲ್ಲ ಮೂಲ ಕಾರಣವೆಂಬತೆ! ವಿಜ್ಞಾನಯುಗದ ಪ್ರಾಯೋಗಿಕ ದೃಷ್ಟಿಗೆ ಇನ್ನೂ ಮೇಲೆ ಮತ ಮೌಢ್ಯ ಒಪ್ಪಿಗೆಯಾಗದು. ವಿನೋಭಾಭಾವೆಯವರು ಹಿಂದೆ ಹೇಳಿದಂತೆ 'ಮತ ಮತ್ತು ರಾಜಕೀಯ ಕಾಲ ಆಗಿಹೋಯಿತು. ಇನ್ನೇನಿದ್ದರೂ, ಆಧ್ಯಾತ್ಮ ಮತ್ತು ವಿಜ್ಞಾನದ ಕಾಲ ಬರಬೇಕಾಗಿದೆ' ಎಂದಿದ್ದಾರೆ.

ಮನುಜಮತ, ವಿಶ್ವಪಥ, ಸರ್ವೋದಯ, ಸಮನ್ವಯ, ಪೂರ್ಣದೃಷ್ಟಿ – ಈ ಪಂಚಮಂತ್ರ, ಇನ್ನು ಮುಂದಿನ ದೃಷ್ಟಿಯಾಗಬೇಕಾಗಿದೆ. ಅಂದರೆ ನಮಗೆ ಇನ್ನು ಬೇಕಾದುದು, ಆ ಮತ ಈ ಮತ ಅಲ್ಲ, ಮನುಜ ಮತ. ಆ ಪಥ ಈ ಪಥ ಅಲ್ಲ, ವಿಶ್ವಪಥ. ಆ ಒಬ್ಬರ ಈ ಒಬ್ಬರ ಉದಯ ಮಾತ್ರವಲ್ಲ, ಸರ್ವರ ಸರ್ವಸ್ತರದ ಉದಯ. ಪರಸ್ಪರ ವಿಮುಖವಾಗಿ ಸಿಡಿದು ಹೋಗುವುದಿಲ್ಲ; ಸಮನ್ವಯಗೊಳ್ಳುವುದು. ಮಿತಮತದ ಆಂಶಿಕ ದೃಷ್ಟಿಯಿಂದ ಕಾಣುವ ಪೂರ್ಣದೃಷ್ಟಿ. ಯಾವ ಭಾವನೆಗಳು ಜಗತ್ತಿನಲ್ಲಿ ಎಲ್ಲಾ ಮಾನವರಿಗೂ ಅನ್ವಯವಾಗಬಹುದೋ ಅಂತಹ ಭಾವನೆ, ಅಂತಹ ದೃಷ್ಟಿ, ಬರಿಯ ಯಾವುದೋ ಒಂದು ಜಾತಿಗೆ, ಮತಕ್ಕೆ ಗುಂಪಿಗೆ ಒಂದು ದೇಶಕ್ಕೆ ಮಾತ್ರ ಅನ್ವಯವಾಗುವುದಿಲ್ಲ. ಸರ್ವಕಾಲಕ್ಕೂ ಅನ್ವಯವಾಗುವ ಇವು ಮೂಲ ಮೌಲ್ಯಗಳು. ಈ ಮೌಲ್ಯಗಳು ಮಾನವರನ್ನು ಕೂಡಿಸಿ ಬಾಳಿಸುವತ್ತ ನಡೆದಾವು. ಗುಂಪುಗಾರಿಕೆಗೆಂದೂ ಇವು ತೊಡಗುವುದಿಲ್ಲ. ಅದೇನಿದ್ದರೂ ರಾಜಕೀಯದ ಕರ್ಮ. ವ್ಯಕ್ತಿ ಸ್ವಾತಂತ್ರ್ಯವನ್ನು ನೀಡಿಯೂ ಸಮಷ್ಟಿಯ ಉದ್ಧಾರದ ದೃಷ್ಟಿ ಇದರದು. ಈ ದೃಷ್ಟಿಗೆ ವ್ಯಕ್ತಿಗಳೆಷ್ಟೋ ಅಷ್ಟೇ ಸಂಖ್ಯೆಯ ಮತಗಳಿರುವುದು ಸಾಧ್ಯ; ಅಷ್ಟು ವ್ಯಕ್ತಿಗಳು ಸಮಷ್ಟಿಯ ವಿಕಾಸಕ್ಕೆ ಸಾಧಕವಾಗುವುದೂ ಸಾಧ್ಯ. ಈ 'ದರ್ಶನ'ವನ್ನೆ ವಿಶ್ವಮಾನವಗೀತೆ ಸಾರುತ್ತದೆ.

ನಾವೆಲ್ಲರೂ ಒಂದೇ ಭಾರತಾಂಬೆಯ ಮಕ್ಕಳು. ಇಡೀ ಭಾರತದಲ್ಲಿ ಕಂಡು ಬರುವ ವಿವಿಧ ಜನಾಂಗಗಳನ್ನು ಕರ್ನಾಟಕ ರಾಜ್ಯದಲ್ಲೇ ಇಂದು ನೋಡಬಹುದಿದೆ. ಭಾರತೀಯರು ಎಲ್ಲರೂ ಒಂದೇ ಎಂಬುದೇ ಕುವೆಂಪು ಅವರ ವಿಶ್ವಮಾನವ ಸಂದೇಶವಾಗಿದೆ.

* * * * *

# ಜೀವನದ ವಿಕಾಸಕ್ಕೆ ಮಾನವೀಯ ಮೌಲ್ಯಗಳ ಅವಶ್ಯಕತೆ

-ರೇಖಾ. ಪಿ, ಸಹಾಯಕ ಪ್ರಾಧ್ಯಾಪಕರು

ನಮ್ಮ ಜೀವನದಲ್ಲಿ ನಂಬಿಕೆಗಳು ಮತ್ತು ಸಿದ್ಧಾಂತಗಳು ಮಹತ್ವಪೂರ್ಣ ಸ್ಥಾನವನ್ನು ಪಡೆದಿವೆ. ಈ ಮೌಲ್ಯಗಳು ನಮ್ಮ ವ್ಯಕ್ತಿತ್ವ ಮತ್ತು ಧೋರಣೆಯನ್ನು ರೂಪಿಸುತ್ತವೆ ಮತ್ತು ಸಮಾಜದಲ್ಲಿರುವ ನಮ್ಮ ದೃಷ್ಟಿಕೋನ ಹಾಗೂ ವ್ಯವಹಾರ ಕೌಶಲಗಳನ್ನು ಪ್ರಭಾವಗೊಳಿಸುತ್ತವೆ. ನಾವು ನಮ್ಮ ಪರಿಸರದಲ್ಲಿ ಸುಖವಾಗಿದ್ದೇವೋ, ಇಲ್ಲವೋ ಎಂಬುದನ್ನು ನಿರ್ಧರಿಸುವುದು ನಮ್ಮ ವೈಯಕ್ತಿಕ ಮೌಲ್ಯಗಳೆ. ಹಾಗಾದರೆ "ಮೌಲ್ಯ" ಎಂಬ ಪದದ ಅರ್ಥವನ್ನು ನೋಡುವುದಾದರೆ 'ಒಬ್ಬ ವ್ಯಕ್ತಿಯಲ್ಲಿನ ಅಪೇಕ್ಷಿತ ಮತ್ತು ನಿರ್ದಿಷ್ಟವಾದ ವರ್ತನೆಯಾಗಿದ್ದು, ಅದನ್ನು ಅನುಸರಣೆ ಮಾಡುವುದರಿಂದ ವ್ಯಕ್ತಿಗೆ ಮತ್ತು ಸಮಾಜಕ್ಕೆ ಒಳಿತಾಗುವುದು.

ಒಂದು ಸಂಸ್ಕೃತ ಸುಭಾಷಿತದಲ್ಲಿ ಹೇಳಿರುವಂತೆ "ಮನಸ್ಯೇಕಂ ವಚಸ್ಯೇಕಂ ವಪುಷ್ಯೇಕಂ ಮಹಾತ್ಮನಾಂ" ಅಂದರೆ ಸಜ್ಜನರ ನುಡಿ, ನಡೆ ಹಾಗೂ ಭಾವನೆಗಳಲ್ಲಿ ವ್ಯತಿರಿಕ್ತ/ ವ್ಯತಿರೇಕವಾದ ವೈರುಧ್ಯಗಳು ಬರುವುದಿಲ್ಲ ಎಂದು. "ನಾವು ಏನು ಹೇಳುತ್ತಿದ್ದೇವೋ ಜನರು ಅದನ್ನು ಮಾಡುವುದಿಲ್ಲ. ಬದಲಾಗಿ ನಾವು ಏನನ್ನು ಮಾಡುತ್ತೇವೋ, ಅದನ್ನು ಮಾಡುತ್ತಾರೆ. ಅಂದರೆ ಮೌಲ್ಯಗಳ ಅನುಸರಣೆ ನಮ್ಮಿಂದಲೆ ನಡೆಯಬೇಕು. ಮೌಲ್ಯಗಳು ವ್ಯಕ್ತಿಗತ ವಿಶೇಷತೆಗಳು ಇದರಿಂದಲೆ ತಿಳಿಯುತ್ತದೆ.

ನಮ್ಮ ಸ್ನೇಹಿತನೊಬ್ಬ ತುಂಬಾ ಆಕರ್ಷಕವಾದ ಉಡುಗೆಯನ್ನು ಹಾಕಿಕೊಂಡಿದ್ದನ್ನು ನೋಡಿದಾಗ ನಾವು ಸಹಜವಾಗಿ ಅವನ ಬಳಿ ಹೋಗಿ ತುಂಬಾ ಚೆನ್ನಾಗಿದೆ ಎಂದಾಗ ಅವನು ಪ್ರತ್ಯುತ್ತರ ನೀಡುತ್ತಾ, ಧನ್ಯವಾದಗಳನ್ನು ಹೇಳುತ್ತಾ "ನಾನು ಇದಕ್ಕೆ 1000 ರೂ ಕೊಟ್ಟಿದ್ದೇನೆ ಎನ್ನುತ್ತಾನೆ". ನಾವು ನಮ್ಮ ಮನೆಯಲ್ಲಿ ಸಾಕಿದ ನಾಯಿಮರಿಯೊಂದಿಗೆ ಪಾರ್ಕಿನಲ್ಲಿ ಅಡ್ಡಾಡುವಾಗ ಜೊತೆಗೆ ಬಂದವರಿಗೆ "ಒಳ್ಳೆಯ ನಾಯಿ" ಇದು ಮರಿಯಾಗಿದ್ದಾಗ ನಾನು ಇದಕ್ಕೆ 3000 ರೂ ಕೊಟ್ಟಿದ್ದೆ ಎನ್ನುತ್ತೇವೆ. ಅಂದರೆ ನಮ್ಮ ಸುತ್ತಮುತ್ತ ಇರುವ ಪ್ರಪಂಚದ ಪ್ರತಿಯೊಂದು ವಸ್ತುವಿನ ಮೌಲ್ಯವನ್ನು ನಾವು ದುಡ್ಡಿನಲ್ಲಿಯೇ ಅಳೆಯುತ್ತೇವೆ.

ಅದೇ ಒಂದು ದಿನ ನಮ್ಮ ಸ್ನೇಹಿತ ಅವರ ಮಗ ಮಗಳೊಂದಿಗೆ ನಮ್ಮ ಮನೆಗೆ ಬಂದಾಗ "ನಿಮ್ಮ ಮಗನಿಗೆ/ ಮಗಳಿಗೆ ಎಷ್ಟು ಹಣ ಕೊಟ್ಟಿದ್ದಿರಿ?" ಎಂದು ಕೇಳುವುದಿಲ್ಲ. ಇದರ ಅರ್ಥ ಇಷ್ಟೇ ಸ್ನೇಹಿತರೆ, ಪ್ರಪಂಚದ ಪ್ರತಿಯೊಂದು ವಸ್ತುವಿನ ಮೌಲ್ಯವನ್ನು/ ಬೆಲೆಯನ್ನು ಹಣದಲ್ಲಿ ಅಳೆಯುವ ನಾವು ಮನುಷ್ಯರ ಬೆಲೆಯನ್ನ ಮಾತ್ರ ಹಣದಲ್ಲಿ ಅಳೆಯಲಾರೆವು, ಅದಕ್ಕೆ ಅದನ್ನು ನಾವು ಮಾನವೀಯ ಮೌಲ್ಯಗಳು ಎಂದು ಕರೆಯುವುದು. "ಅದು ಹಣವನ್ನು ಮೀರಿದ್ದು".

"ನಾವು ಇಂದು ಮಾಡುವ ಚಿಂತನೆಗಳಿಂದಲೇ ನಾಳಿನ ಭವಿಷ್ಯವನ್ನು ಕಟ್ಟುತ್ತೇವೆ". ನಾವು ಚಿಕ್ಕಂದಿನಿಂದ ಬೆಳೆಸಿಕೊಳ್ಳುವ ಧೋರಣೆಗಳು ಮತ್ತು ಹವ್ಯಾಸಗಳೆ ನಮ್ಮ ಭವಿಷ್ಯದ ಚಾರಿತ್ರ್ಯವನ್ನು ನಿರ್ಮಿಸುತ್ತವೆ. ಇಂತಹ ಮೌಲ್ಯಗಳು ನಮ್ಮ ಜೀವನದಲ್ಲಿ ಸಕಾರಾತ್ಮಕ ಶಕ್ತಿಯನ್ನು ಬೆಳೆಸಲು ಮತ್ತು ದುರಾಭ್ಯಾಸದಿಂದ ದೂರವಿರಲು ಸಹಾಯ ಮಾಡುತ್ತವೆ.

ಒಂದು ಉದಾಹರಣೆಯನ್ನು ನೋಡುವುದಾದರೆ, ಸ್ಕಾಂಡಿನೇವಿಯಾದ ಬೆಟ್ಟಗಳಲ್ಲಿ 'ಲೇಮಿಂಗ್ಸ್' ಎಂಬ ಜಾತಿಯ ಹೆಗ್ಗಣಗಳು ವಾಸಿಸುತ್ತವೆ. ಆಗಾಗ ಅವುಗಳ ಸಂಖ್ಯೆ ತುಂಬಾ ಹೆಚ್ಚಿ ಆಹಾರ ಮತ್ತು ವಸತಿ ಕೊರತೆಯುಂಟಾಗುತ್ತದೆ. ಇಂತಹ ಪರಿಸ್ಥಿತಿ ಬಂದಾಗೆಲ್ಲ ಕಿರಿಯ ಹೆಗ್ಗಣಗಳು ಬದುಕಲಿ ಎಂದು ಹಿರಿಯ ಹೆಗ್ಗಣಗಳು ಸ್ವಯಂ ಪ್ರೇರಣೆಯಿಂದ ಸಾವಿರಾರು ಸಂಖ್ಯೆಯಲ್ಲಿ ಒಟ್ಟೊಟ್ಟಿಗೆ ಬೆಟ್ಟದಿಂದ ಜಿಗಿದು ಆತ್ಮಹತ್ಯೆ ಮಾಡಿಕೊಳ್ಳತ್ತವೆ. ಎಂತಹಾ ಉದಾತ್ತ ಬಲಿದಾನ.....!

ಒಂದು ಪುಟ್ಟಪ್ರಾಣಿ ಸಮೂಹ ಅಷ್ಟರಮಟ್ಟಿಗೆ ನಿಸ್ವಾರ್ಥ ತ್ಯಾಗದ ರೂಪವನ್ನು ನಮ್ಮ ಕಣ್ಣ ಮುಂದೆ ಮಾದರಿಯಾಗಿ ಇಟ್ಟಿರುವಾಗ ನಾವು ಮನುಷ್ಯರು ಇನ್ನೆಷ್ಟು ಮಾಡಬಹುದು? ಯೋಚಿಸಿ. ಸ್ನೇಹಿತರೆ ಪ್ರತಿಯೊಂದು ಸಮಸ್ಯೆಗೂ

ಪರಿಹಾರವಿರುತ್ತೆ, ಆದರೆ ನಿಜವಾಗಿ ಸಾಧ್ಯವಾಗುವುದು, ಅದು ಮೌಲ್ಯಾಧಾರಿತವಾದಾಗ ಮಾತ್ರ. ದುರ್ಮಾರ್ಗದಲ್ಲಿ ನಡೆದರೆ ಸಮಸ್ಯೆ ಇದ್ದೇ ಇರುತ್ತದೆ.

"ಸಜ್ಜನರನ್ನು ಗೆದ್ದು ದುರ್ಜನರನ್ನು ದೂರ ಮಾಡುವುದೆರನೋ ಒಳ್ಳೆಯದೇ. ಆದರೆ ಜನರಲ್ಲಿನ ಒಳಿತನ್ನು ಗುರುತಿಸಿ, ದುಷ್ಟತನವನ್ನು ಮಾತ್ರ ದೂರವಿಡುವುದು ಇನ್ನೂ ಒಳ್ಳೆಯದು. ನಾವು ಮೊದಲು ಮಾನವೀಯ ಮೌಲ್ಯಗಳನ್ನು ಆಚರಣೆಗೆ ತರಬೇಕು. ಆಗ ಮಾತ್ರ ಜನರು ನಮ್ಮನ್ನು ಅನುಸರಿಸುವುದಕ್ಕೆ ಸಾಧ್ಯ".

* * * * *

# ಕನ್ನಡ ನಾಡಿನಲ್ಲಿ ಕನ್ನಡದ ಸ್ಥಿತಿಗತಿ

– ಭವಾನಿ .ಬಿ. ಕೆ, ತೃತೀಯ ಬಿ.ಕಾಂ.

'ಕನ್ನಡಕ್ಕಾಗಿ ಕೈ ಎತ್ತು, ನಿನ್ನ ಕೈ ಕಲ್ಪವೃಕ್ಷವಾಗುತ್ತದೆ. ಕನ್ನಡಕ್ಕಾಗಿ ಕೊರಳೆತ್ತು, ಅಲ್ಲಿ ಪಾಂಚಜನ್ಯ ಮೂಡುತ್ತದೆ. ಕನ್ನಡಕ್ಕಾಗಿ ಕಿರುಬೆರಳೆತ್ತಿದ್ದರೂ ಸಾಕು, ಅದೇ ಗೋವರ್ಧನ ಗಿರಿಯಾಗುತ್ತದೆ' ಎಂಬುದು ರಾಷ್ಟ್ರಕವಿ ಕುವೆಂಪುರವರ ವಾಣಿ. ಕನ್ನಡ ನಾಡಿನಲ್ಲಿ ಕನ್ನಡಿಗನ ಏಳಿಗೆ ಸಾಧ್ಯವಿಲ್ಲ ಎಂಬಂತಾಗಿದೆ. ಕನ್ನಡ ಒಂದನ್ನು ಹೊರತುಪಡಿಸಿ ಬೇರ್‍ಯಾವ ಭಾಷೆಯನ್ನು ಆಡುವವರೂ ಇಲ್ಲಿ ಗೆಲ್ಲಬಹುದು ಎಂಬ ದುಸ್ಥಿತಿ ಇದೆ. ನುಡಿಯಾಗಲಿ, ನದಿಯಾಗಲಿ ಗಡಿಯಾಗಲಿ, ವೃತ್ತಿಯಾಗಲಿ, ರಾಜಕಾರಣವಿರಲಿ, ಎಲ್ಲೆಡೆ ಕನ್ನಡಿಗರಿಗೆ ಘೋರ ಅನ್ಯಾಯವೇ ನಡೆಯುತ್ತಿದೆ, ಆ ಅನ್ಯಾಯ ನಿಲ್ಲಬೇಕಾದರೆ ನಾವೆಲ್ಲ ಒಂದಾಗಬೇಕು. ಕನ್ನಡಿಗನಾದವನಿಗೆ ಕನ್ನಡವೇ ಧರ್ಮ, ಕನ್ನಡವೇ ಕುಲ, ಕನ್ನಡವೇ ಜಾತಿ ಎಂದಾಗಬೇಕು ಎಂಬುದು ನನ್ನ ಅಭಿಪ್ರಾಯ.

ಪರ ರಾಜ್ಯದವರು ಕನ್ನಡದ ನೆಲದ ಮೇಲೆ ವಲಸೆ ಬರುತ್ತಲೇ ಇದ್ದಾರೆ. ಆದರೆ ಈ ಎಲ್ಲೆಲ್ಲಿಂದಲೋ ಬಂದವರು ಕನ್ನಡ ನೆಲದಲ್ಲಿ ತಮ್ಮ ಮನವನ್ನು ಕನ್ನಡಕ್ಕಾಗಿ ಇರಿಸಲೇ ಇಲ್ಲ. ತಮ್ಮದೇ ಪ್ರತ್ಯೇಕ ಒಕ್ಕೂಟ ಸ್ಥಾಪಿಸಿದರೇ ವಿನಃ ಕನ್ನಡದ ಮುಖ್ಯವಾಹಿನಿಯಲ್ಲಿ ಸೇರಲೇ ಇಲ್ಲ. ಆದರೆ ನಾವು ಅವರ ಸಂಸ್ಕೃತಿಯನ್ನು ಕಲಿಯಲು ಪ್ರಯತ್ನಿಸಿದೆವೆಯೇ ಹೊರತು ನಮ್ಮ ಸಂಸ್ಕೃತಿಯನ್ನು ಅವರಿಗೆ ಕಲಿಸುವ ಗೋಜಿಗೆ ಹೋಗಲಿಲ್ಲ. ಹಾಗಾಗಿ ನಮ್ಮ ಕನ್ನಡಕ್ಕೆ ಕನ್ನಡಿಗನೇ ಶತ್ರುವಾಗಿದ್ದಾನೆ. ಇಂದು ಕನ್ನಡಿಗನಿಗೆ ಕರ್ನಾಟಕದಲ್ಲಿ ಭದ್ರವಾದ ನೆಲೆಯೇ ಇಲ್ಲ, ಕನ್ನಡಿಗ ನಿರುದ್ಯೋಗಿಯಾಗಿದ್ದಾನೆ ನಿರುತ್ಸಾಹಿಯಾಗಿದ್ದಾನೆ. ಆದರೆ ಇಂದು ಕರ್ನಾಟಕದ ಒಳಗೆ ಮತ್ತು ಹೊರಗೆ ಪರಭಾಷಿಕರೇ ವಿಜೃಂಭಿಸುತ್ತಿದ್ದಾರೆ. ಇದರಿಂದ ಇಂದು ಕನ್ನಡಿಗ ಎಲ್ಲಡೆ ಎರಡನೇ ಪ್ರಜೆಯಾಗಿದ್ದಾನೆ.

'ಕನ್ನಡವೇ ಸತ್ಯ, ಕನ್ನಡವೇ ನಿತ್ಯ' ಎಂಬ ದೀಕ್ಷೆಯು ಕೂಡ ಕನ್ನಡದಲ್ಲಿ ಇದೆ. 'ಕನ್ನಡ ಕನ್ನಡ ಎನ್ನ ಸಂಗಡ' ಎಂಬ ವಾಕ್ಯವು ಕೂಡ ಕನ್ನಡದೇ. ಇಂದು ನಮ್ಮ ಕನ್ನಡನಾಡಿಗೆ ವಲಸೆ ಬಂದವರಿಗೆ ಕನ್ನಡದ ಗಾಳಿ, ನೀರು, ಅನ್ನ, ಉದ್ಯೋಗ, ಸಂಪತ್ತು ಬೇಕು. ಆದರೆ ಕನ್ನಡ ಭಾಷೆ ಮಾತ್ರ ಯಾರಿಗೂ ಬೇಡದಂತಾಗಿದೆ. ನಮ್ಮ ಕನ್ನಡಿಗರ ನೋವು ಇಷ್ಟೆ. ಅನ್ಯ ಸಂಸ್ಕೃತಿಯ ಆರ್ಭಟದಲ್ಲಿ ಕನ್ನಡ ತಾಯಿಯ ಮುಖ ಬಾಡಿಹುದು. ನಮ್ಮ ಕನ್ನಡನಾಡಿನಲ್ಲಿ ನವೆಂಬರ್ ತಿಂಗಳಂತು ಎಲ್ಲೆಲ್ಲೂ ಕನ್ನಡದ ಬಾವುಟ ಹಾರುತ್ತಿರುತ್ತದೆ ಮತ್ತು ಭುವನೇಶ್ವರಿಯ ಪೂಜೆ ನಡೆಯುತ್ತಿರುತ್ತದೆ. ಆ ನವೆಂಬರ್ ತಿಂಗಳು ಮುಗಿದ ಮೇಲೆ ಕನ್ನಡಿಗರ ಗತಿಯು ಒಂದು ನಿಗೂಢ ಸ್ಥಿತಿಗೆ ಬಂದು ಬಿಡುತ್ತದೆ.

ಕನ್ನಡವೆಂದರೆ ಬರೀ ಭಾಷೆಯಲ್ಲ ಸಂಸ್ಕೃತಿ ಮತ್ತು ಕನ್ನಡವೇ ಸತ್ಯ, ಕನ್ನಡವೇ ನಿತ್ಯ ಎಂಬ ದೀಕ್ಷೆಯನ್ನು ತೊಟ್ಟಿದ್ದಾರೆ. ಕನ್ನಡ ಮತ್ತು ಕರ್ನಾಟಕ ನನ್ನೆರಡು ಕಣ್ಣುಗಳು ಎಂಬ ಭಾವಿಸಿ ಬಾಳೋಣ ಕನ್ನಡದ ಕವಿಗಳಿಗೆ, ಕಲಾವಿದರಿಗೆ ಕನ್ನಡ ತಂತ್ರಜ್ಞರಿಗೆ ಮಣ್ಣಿನ ಮಕ್ಕಳಿಗೆ ಮೊದಲು ಆದ್ಯತೆ ನೀಡಬೇಕು ಎಂಬ ಹೇಳುತ್ತಾ ರಾಜರತ್ನಂರವರು ಹೇಳಿದ 'ನರಕದಲ್ಲಿ ನಾಲ್ಗೆ ಸೀಳಿ ಬಾಯ್ ಹೊಲಿಸಾಕಿದ್ರೂನೂ ಮೂಗಲ್ ಪದವಾಡ್ತೀನಿ' ಎಂಬ ಈ ಮಾತನ್ನ ನಮ್ಮ ಕರ್ನಾಟಕದಲ್ಲಿ ಬದುಕುವ ಜನರಿಗೆ ಹೇಳಿದ್ದಾರೆ. ಕನ್ನಡಿಗರೆಂದರೇ ಬರೀ ಕರ್ನಾಟಕದವರು ಅಲ್ಲ, ಕನ್ನಡವನ್ನು ಮಾತಾನಾಡುವ, ಕನ್ನಡವನ್ನು ಪ್ರೀತಿಸುವ, ಕನ್ನಡ ನಾಡನ್ನು ಕಟ್ಟುವ ಸಮಸ್ತರೂ ಕನ್ನಡಿಗರೇ ಎಂದು ಹೇಳುತ್ತಾ ತನ್ನದೇ ನುಡಿಯಲ್ಲಿ ..

"ನನ್ನ ತಾಯಿ ಕನ್ನಡ
ನನ್ನ ರಕ್ತ ಕನ್ನಡ
ನನ್ನ ಪ್ರಾಣ ಕನ್ನಡ
ನನ್ನ ನುಡಿ ಕನ್ನಡ
ನನ್ನ ನಾಡು ಕನ್ನಡ"

ಎಂದು ಹೇಳುತ್ತಾ ಡಾ॥ ಮಹಿಷಿ ವರದಿ, ಮಹಾಜನ ವರದಿ, ಗಡಿನಾಡ ವರದಿ, ಡಾ॥ ಡಿ.ಎಂ.ನಂಜುಂಡಪ್ಪ ವರದಿ ಮುಂತಾದವರ ಜೊತೆಗೆ 18ರಿಂದ 21ರ ಡಿಸೆಂಬರ್ 2003 ರಲ್ಲಿ ಬಹಳ ವಿಜೃಂಭಣೆಯಿಂದ ಕವಿ ಮುದ್ದಣನವರ ಜನ್ಮಸ್ಥಳ ಮೂಡಬಿದಿರೆ ಮತ್ತು ನಮ್ಮ ಪ್ರೀತಿಯ ಪ್ರೇಮ ಕವಿ ರತ್ನಾಕರವರ್ಣಿಯವರ ಹುಟ್ಟೂರಿನಲ್ಲಿ ನಡೆದ 71ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದ ಕಮಲಾ ಹಂಪನಾರವರು ನಮ್ಮ ಕನ್ನಡ ನಾಡು, ನುಡಿಯ ಬಗ್ಗೆ ತುಂಬಾ ಚೆನ್ನಾಗಿ ತಿಳಿಸಿ ಹಿಂದೆ ಮಾಡಿದ ವರದಿಯು ಇನ್ನೂ ಜಾರಿಗೆ ಬರಲೇ ಇಲ್ಲ ಮತ್ತು ಕನ್ನಡದಲ್ಲಿ ನಾಮಫಲಕವಿರಬೇಕೆಂಬ ಸರ್ಕಾರದ 11-01-1980ರ ಆದೇಶ ಇನ್ನೂ ಕಾರ್ಯಗತವಾಗಿಲ್ಲ ಎಂದಿದ್ದಾರೆ.

ಕರ್ನಾಟಕದಲ್ಲಿ ಕನ್ನಡವನ್ನು ಉಳಿಸಲು ಕನ್ನಡಿಗರನ್ನು ಸಂರಕ್ಷಿಸಲು ನಿರಂತರ ಹೋರಾಟ ಮಾಡಬೇಕಾದ ದುರಂತ ಪರಿಸ್ಥಿತಿಯಲ್ಲಿ ನಾವಿದ್ದೇವೆ. ಇದು ಸಕಾಲ ಇಂದಿಲ್ಲದಿದ್ದರೆ ಎಂದೂ ಇಲ್ಲ ಎಂಬ ಪ್ರತಿಜ್ಞೆಯನ್ನು ಕೈಗೊಳ್ಳೋಣ. ಮೊದಲು ನಮ್ಮ ಮನ ನಂತರ ಮನೆ ನಂತರ ಬೀದಿ, ಪೇಟೆ, ತಾಲ್ಲೂಕು, ಜಿಲ್ಲೆ, ರಾಜ್ಯ. ಹೀಗೆ ಕರ್ನಾಟಕ ನೆಲವೆಲ್ಲವನ್ನು ಕನ್ನಡಮಯವನ್ನಾಗಿಸೋಣ. ಇಲ್ಲಿ ಇರುವವರು ಇಲ್ಲಿಯವರೇ ಆಗಿರಲಿ ಹೊರಗಿನಿಂದ ಬಂದವರೇ ಆಗಿರಲಿ.ಅವರನ್ನು ಮೊದಲು ಕನ್ನಡಿಗರನ್ನಾಗಿಸೋಣ. ನಾವು ಕಲಿಯೋಣ ಇತರರಿಗೂ ಕಲಿಸೋಣ ಎಲ್ಲರೂ ಒಟ್ಟಾಗಿ ಕಲಿಯೋಣ. ನನ್ನ ನಾಡು, ನನ್ನ ಭಾಷೆ, ನನ್ನ ನೆಲ, ನನ್ನ ಜಲ ಎನ್ನುವ ಆತ್ಮಾಭಿಮಾನದ ಭಾಷೆ ನೆಲ ನಮ್ಮ ಕನ್ನಡಿಗರ ಧ್ಯೇಯವಾಗಿರಬೇಕು ಎಂಬ ಅಚಲ ನಿಲುವು ನಮ್ಮದಾಗಿರಬೇಕು.

ಕನ್ನಡ ನಾಡಿನಲ್ಲಿ ಮತ್ತು ಕನ್ನಡ ಭಾಷೆಯಲ್ಲಿ ಕಥೆ, ಕಾದಂಬರಿ, ನಾಟಕ, ಸಾಹಿತ್ಯ ಮುಂತಾದವುಗಳನ್ನು ಕನ್ನಡ ಭಾಷೆಯಲ್ಲಿ ರಚಿಸಿದ ಕವಿಗಳಿಗೆ ನಮ್ಮ ಕನ್ನಡ ಕ್ಷೇತ್ರದಲ್ಲಿ 8 ಜನ ಕವಿಗಳಿಗೆ ಜ್ಞಾನಪೀಠ ಪ್ರಶಸ್ತಿ ಲಭಿಸಿದೆ. ಇದು ತುಂಬಾ ಸಂತೋಷ ಕೊಡುವಂತಹ ವಿಷಯವಾಗಿದೆ.ಈ ಕವಿಗಳೆಲ್ಲ ಕನ್ನಡ ಕ್ಷೇತ್ರದಲ್ಲೇ ತುಂಬಾ ಹೆಸರು ಮಾಡಿದ್ದಾರೆ. ಇದರಿಂದ ಕನ್ನಡ ತುಂಬಾ ಅಭಿವೃದ್ಧಿ ಹೊಂದಿದ್ದು, ಈ ಕವಿಗಳೆಲ್ಲಾ ಕನ್ನಡದಲ್ಲಿ ಕಥೆ, ಕಾದಂಬರಿ, ನಾಟಕ ಇವನೆಲ್ಲಾ ಕನ್ನಡದಲ್ಲಿಯೇ ರಚಿಸಿ ತುಂಬಾ ಹೆಸರು ಮಾಡಲು ಸಾಧ್ಯವಾದದು. ನಮ್ಮ ಕನ್ನಡ ಭಾಷೆ ಮತ್ತು ನಮ್ಮ ಮಾತೃಭಾಷೆಯಾದಂತಹ ಈ ನಮ್ಮ ಕನ್ನಡ ಕನ್ನಡ ಕನ್ನಡ.

* * * * *

- ಪ್ರತಿಯೊಬ್ಬರೂ ತಮ್ಮ ತಪ್ಪುಗಳ ವಿರುದ್ಧ ತಾವೇ ಹೋರಾಡುವಂತಾದರೆ ಅಲ್ಲಿ ಯುದ್ಧಕ್ಕೆ ಅವಕಾಶವೇ ಇರದು – **ಲಿಯೊ ಟಾಲ್‌ಸ್ಟಾಯ್**
- ಒಂದು ಕೆಲಸದಲ್ಲಿ ತಲ್ಲೀನವಾಗಿರುವ ಸಮಯದಲ್ಲಿ ಮತ್ತೊಂದರತ್ತ ಮನಸ್ಸನ್ನು ಹರಿಯಬಿಡದಿರುವವನೇ ಸ್ಥಿತಿಪ್ರಜ್ಞ – **ಸ್ವಾಮಿ ವಿವೇಕಾನಂದ**
- ಸೌಂದರ್ಯ ಮತ್ತು ಯೌವ್ವನವನ್ನು ಸೋಲಿಸುವ ತಾಕತ್ತು ಇರುವುದು ಜ್ಞಾನಕ್ಕೆ ಮಾತ್ರ – **ಚಾಣಕ್ಯ**
- ಹಗಲು ಉತ್ತಮವಾಗಿದ್ದರೆ, ರಾತ್ರಿಯ ನಿದ್ದೆ ಚೆನ್ನಾಗಿರುತ್ತದೆ. ಜೀವನ ನಡೆಸಿದ ಬಗೆ ಚೆನ್ನಾಗಿದ್ದರೆ, ಸಾವೂ ಉತ್ತಮವಾಗಿರುತ್ತದೆ. – **ಲಿಯೋನಾರ್ಡೊ ಡಾವಿಂಚಿ.**
- ಅತ್ಯುನ್ನತ ಶಿಕ್ಷಣವೆಂದರೆ ಬರೀ ಮಾಹಿತಿ ನೀಡುವುದಿಲ್ಲ; ಬದಲಿಗೆ, ನಮ್ಮ ಸಮಸ್ತ ಅಸ್ತಿತ್ವ, ಸಾಮರಸ್ಯದಿಂದ ಒಡಗೂಡುವಂತೆ ಬದುಕು ರೂಪಿಸಿಕೊಡುವುದು– **ರವೀಂದ್ರನಾಥ ಟ್ಯಾಗೋರ್**

# ಗುರುವಿನ ಮಹತ್ವ

– ಸಮೀನ ಬಾನು, ಪ್ರಥಮ ಬಿ.ಎ.,

ಶಿಕ್ಷಕ ಅಥವಾ ಗುರುವನ್ನು ಬ್ರಹ್ಮ ವಿಷ್ಣು ಮಹೇಶ್ವರರಿಗೆ ಹೋಲಿಸಲಾಗಿದೆ. ವಿದ್ಯಾರ್ಥಿಗಳ ಜೀವನದ ಗುರಿ ಉದ್ದೇಶಗಳನ್ನು ಅವುಗಳನ್ನು ಸಾಧಿಸುವ ಮಾರ್ಗಗಳನ್ನ ತೋರಿಸುವ, ದಾರಿ ತಪ್ಪುವ ವಿದ್ಯಾರ್ಥಿಗಳ ನಡೆನುಡಿಗಳನ್ನ ತಿದ್ದುವ, ವಿದ್ಯಾರ್ಥಿಗಳಲ್ಲಿನ ಕೆಟ್ಟ ಯೋಜನೆಗಳನ್ನು ನಾಶ ಮಾಡಿ ಸರಿಯಾದ ದಾರಿಯನ್ನು ತೋರುವವನು ಗುರುವೇ ಆಗಿದ್ದಾನೆ. ಹುಲಿಯನ್ನ ಅದರ ಗುಂಪಿನಿಂದ ಬೇರ್ಪಡಿಸಿದರೂ ಅದು ಬೇಟೆಯಾಡಲು ಕಲಿಯುತ್ತದೆ. ಜಿಂಕೆಯನ್ನು ಎಲ್ಲೇ ಬಿಟ್ಟರೂ ಅದು ಹುಲ್ಲು ತಿಂದೇ ಜೀವಿಸುತ್ತದೆ. ಕೋತಿಯು ಮರದಿಂದ ಮರಕ್ಕೆ ಜಿಗಿಯುವುದನ್ನು ತಾನಾಗಿಯೇ ಕಲಿಯುತ್ತದೆ. ಅಂದರೆ ಎಲ್ಲಾ ಪ್ರಾಣಿಗಳೂ ವಂಶಪಾರಂಪರ್ಯವಾಗಿ ಕೆಲವು ಗುಣಗಳನ್ನು ಕಲಿಯುತ್ತಿರುತ್ತವೆ. ಆದರೆ ಮನುಷ್ಯನಿಗೆ ಎಲ್ಲಾ ಗುಣಗಳು ಹೇಳಿಕೊಟ್ಟರೆ ಮಾತ್ರ ಕಲಿಯಲು ಸಾಧ್ಯ. ಹುಟ್ಟುತ್ತಲೇ ಏನೇನೂ ತಿಳಿಯದ ಮಗು ಕ್ರಮೇಣ ತನ್ನ ಸುತ್ತಮುತ್ತಲಿನ ಭಾಷೆಯನ್ನು ಗಮನಿಸುತ್ತಾ ಕೆಲವು ಶಬ್ದಗಳನ್ನು ಕಲಿಯುತ್ತದೆ. ನಿಧಾನವಾಗಿ ಮನೆಯ ಸುತ್ತಮುತ್ತಲಿನ ಪರಿಸರದಲ್ಲಿ ಕಂಡು ಬರುವ ವಿವಿಧ ಜನರು, ವಸ್ತುಗಳಿಂದ ಅನೇಕ ವಿಷಯಗಳನ್ನು ಕಲಿಯುತ್ತದೆ. ಆದರೆ ಮಗು ಬಾಲ್ಯಕ್ಕೆ ಕಾಲಿಟ್ಟಾಗ ಸಾಮಾಜಿಕ ಜೀವನ ಪರಿಚಯ ಆಗುತ್ತಾ ಹೋಗುತ್ತದೆ. ಈ ಹಂತದಿಂದ ಮಗುವಿನ ಕಲಿಕೆಯ ರೀತಿ ಮತ್ತು ಅದರ ವೇಗ ಎರಡೂ ಬದಲಾಗುತ್ತಾ ಹೋಗುತ್ತದೆ. ಇದು ಬಹಳ ಮನುಷ್ಯನ ಜೀವನದ ಗುರಿಯನ್ನ ರೂಪಿಸುವ ಪ್ರಮುಖ ಹಂತವಾಗಿದ್ದು ಇಲ್ಲಿಂದ ಮಕ್ಕಳಿಗೆ ಉತ್ತಮ ಗುರುವಿನ ಮಾರ್ಗದರ್ಶನ ಅತ್ಯಗತ್ಯವಾಗಿ ಬೇಕಾಗುತ್ತದೆ. ಪ್ರಪಂಚದ ಮಹಾನ್ ವ್ಯಕ್ತಿಗಳು, ದಾರ್ಶನಿಕರ ಜೀವನದ ವಿವಿಧ ಹಂತಗಳನ್ನು ಗಮನಿಸಿದಾಗ ಅವರ ಜೀವನದ ಪ್ರತಿ ಹಂತದಲ್ಲಿ ಮಾರ್ಗದರ್ಶಕರಾಗಿ ಒಬ್ಬ ಗುರು ಜೊತೆಗಿದ್ದನೆಂದು ತಿಳಿಯುತ್ತದೆ.

ಮನಸ್ಸು ಎಲ್ಲ ಕಡೆಗೂ ಓಡುತ್ತಿರುತ್ತದೆ. ಆದರೆ ಅಂತಹ ಮನಸ್ಸಿಗೆ ಒಳಿತು ಮಾಡುವ, ಮಾರ್ಗದರ್ಶನ ತೋರಿಸುವ ಶಕ್ತಿಯಿರುವುದು ಕೇವಲ ಗುರುಗಳಿಗೆ ಮಾತ್ರ. ಪುರಾಣದ ಕತೆಗಳನ್ನು ನೋಡಿದರೆ ನಮ್ಮ ಪ್ರಾಚೀನರು ಗುರುಗಳಿಗೆ ಎಂತಹ ಮಹತ್ವವನ್ನು ನೀಡಿದ್ದರು ಎಂದು ತಿಳಿಯುತ್ತದೆ. ಮಹಾಭಾರತದಲ್ಲಿ ಅರ್ಜುನ ಒಬ್ಬ ಉತ್ತಮ ಬಿಲ್ಲುವಿದ್ಯಾ ಪ್ರವೀಣನಾಗಲು ದ್ರೋಣಾಚಾರ್ಯರಂತಹ ಗುರುಗಳೇ ಕಾರಣ. ಅಂಬೇಡ್ಕರ್ ಬರೆದ ಸಂವಿಧಾನ ಇಂದು ದೇಶದ ಹಣೆಬರಹವನ್ನು ನಿರ್ಧರಿಸುವ ಒಂದು ಸಂಹಿತೆಯಾಗಿದೆ. ಆದರೆ ಅವರಿಗೆ ಸಿಕ್ಕಂತಹ ಗುರುಗಳು ಸರಿಯಾದ ರೀತಿಯಲ್ಲಿ ಮಾರ್ಗದರ್ಶನ ನೀಡದಿದ್ದರೆ ಅಂಬೇಡ್ಕರ್ ಓದು ಮುಂದುವರೆಸಲು ಸಾಧ್ಯವಾಗುತ್ತಿರಲಿಲ್ಲ. ನಮ್ಮ ಸುತ್ತಮುತ್ತಲಿನ ಯಾವುದೇ ನಾಯಕರನ್ನು ಕೇಳಿದರೆ ಅವರ ಜೀವನದ ಗುರಿ, ಅವರ ಗುರು ಹಾಕಿಕೊಟ್ಟ ಮಾರ್ಗದ ಮೇಲೆಯೇ ನಡೆಯುತ್ತಿದೆ ಎಂಬ ಸತ್ಯ ತಿಳಿಯುತ್ತದೆ. ಆದರೆ ಇಂದು ಸಮಾಜ ವಿಚಿತ್ರ ರೀತಿಯಲ್ಲಿ ಬದಲಾಗುತ್ತಿದೆ, ಶಿಕ್ಷಕರ ಸ್ಥಾನಮಾನಗಳು ಪಲ್ಲಟವಾಗುತ್ತಿದೆ. ಗುರುಗಳ ಮೇಲಿನ ಗೌರವ ಮೊದಲಿನಂತಿಲ್ಲ. ಹಿಂದೆ ಇದ್ದಂತಹ ಗುರುಗಳ ಮೇಲಿನ ಭಕ್ತಿ, ಶ್ರದ್ಧೆ, ವಿಶ್ವಾಸಗಳು ಈಗ ನಶಿಸಿಹೋಗುತ್ತಿವೆ. ಇದಕ್ಕೆ ಕಾರಣ ಕಾಲದ ಬದಲಾವಣೆಯೋ, ವಿದ್ಯಾವಂತಿಕೆಯೋ, ವೈಜ್ಞಾನಿಕ ಪ್ರಗತಿಯೋ ಒಂದೂ ತಿಳಿಯುತ್ತಿಲ್ಲ. ಗುರು ಎಂಬ ಪದಕ್ಕೆ ವಿಶೇಷ ಭಕ್ತಿ ಇತ್ತು. ಒಬ್ಬ ವ್ಯಕ್ತಿ ವಿದ್ಯೆ ಕಲಿಯಬೇಕು ಎಂದರೆ ಆತ ಗುರುವನ್ನು ಹುಡುಕಿಕೊಂಡು ಹೋಗಿ ವಿದ್ಯೆ ಕಲಿಯಬೇಕಿತ್ತು. ಆದರೆ ಈಗ ಹುಡುಕುವ ಅವಶ್ಯಕತೆಯೇ ಇಲ್ಲದಂತಾಗಿದೆ. ಗುರುಗಳು ಮೊದಲು ದಂಡಿಸಿ ವಿದ್ಯೆ ಕಲಿಸುತ್ತಿದ್ದರು, ಆದರೆ ಇಂದು ವ್ಯವಸ್ಥೆಯೇ ಬದಲಾಗಿದೆ.

ಗುರುಗಳನ್ನು ಗೌರವಿಸುವುದು ವಿದ್ಯಾರ್ಥಿಗಳಾದ ನಮ್ಮೆಲ್ಲರ ಕರ್ತವ್ಯ. ಯಾವ ವ್ಯಕ್ತಿ ತನ್ನ ಗುರುವನ್ನು ಗೌರವಿಸುತ್ತಾನೊ, ಆತ ಎಂದೂ ಕಷ್ಟದಲ್ಲಿ ಸಿಲುಕುವುದಿಲ್ಲ. ಅಂಬೇಡ್ಕರ್, ಎ.ಪಿ.ಜೆ ಅಬ್ದುಲ್ ಕಲಾಂರಂತಹ ಅನೇಕ ವ್ಯಕ್ತಿಗಳು ತಮ್ಮ ಜೀವನದಲ್ಲಿ ಗುರುಗಳಿಗೆ ವಿಶೇಷ ಸ್ಥಾನ ನೀಡಿದ್ದಾರೆ. ಅವರು ಈ ಕಾರಣದಿಂದಲೇ ಮಹಾನ್ ವ್ಯಕ್ತಿಗಳಾಗಿದ್ದಾರೆ. ಆದ್ದರಿಂದ ಪ್ರತಿಯೊಬ್ಬರು ಗುರುಗಳನ್ನು ಗೌರವಿಸಬೇಕು.

ಕುವೆಂಪು ಅವರು ತಮ್ಮ ಒಂದು ಕಾವ್ಯದಲ್ಲಿ 'ಹಿಂದೆ ಗುರು ಇದ್ದರೆ ಮುಂದೆ ಗುರಿ ಇದ್ದರೆ ವೀರರ ದಂಡು, ಆದರೆ ಹಿಂದೆ ಗುರು ಇರದಿದ್ದರೆ ಮುಂದೆ ಗುರಿಯೂ ಇಲ್ಲದಿದ್ದರೆ ಅದು ರಣಹೇಡಿಗಳು ದಂಡು' ಎಂದರು.

ಇದರಿಂದ ಗುರುವಿನ ಮಹತ್ವವೇನು ಎಂಬುದು ತಿಳಿಯುತ್ತದೆ. ಆದ್ದರಿಂದ ಗುರುಗಳನ್ನು ಕಡೆಗಣಿಸದೆ ಅವರಿಗೆ ಗೌರವ ಭಕ್ತಿಯನ್ನು ತೋರಿಸಿ, ಎಂದೆಂದಿಗೂ ನಿರ್ಲಕ್ಷಿಸದೆ ಗೌರವ, ಪೂಜ್ಯಭಾವನೆಯನ್ನು ಬೆಳೆಸಿಕೊಳ್ಳಿರಿ.

* * * * *

## ಬೆಲೆ ಕಟ್ಟಲಾಗದ ಮಾಣಿಕ್ಯ ಅಮ್ಮ

– ಕಾವ್ಯ. ಆರ್., ಪ್ರಥಮ ಬಿ.ಎ.,

'ಅಮ್ಮ ಎಂದರೆ ಏನೋ ಹರುಷವೋ, ನಮ್ಮ ಪಾಲಿಗೆ ಅವಳೇ ದೈವವೋ'. ಹೀಗೆ ಹಲವಾರು ಹಾಡುಗಳು ತಾಯಿಯ ಮಹತ್ವವನ್ನು ವರ್ಣಿಸುತ್ತವೆ. ಆಕೆ ತಾಯಿಯಾಗಿ, ಮಡದಿಯಾಗಿ, ಗೃಹಿಣಿಯಾಗಿ ತನ್ನೆಲ್ಲಾ ಜವಾಬ್ದಾರಿಯನ್ನು ನಿಬಾಯಿಸುತ್ತಾಳೆ. ತಂದೆ ಮಕ್ಕಳಿಗೆ ಗದ್ದರಿಸಿ ಬುದ್ಧಿ ಹೇಳಿದರೆ, ತಾಯಿ ಪ್ರೀತಿಯಿಂದ ತನ್ನ ಮಕ್ಕಳನ್ನು ಸಲಹುತ್ತಾಳೆ. ಅವಳು ತನಗೆನಿಲ್ಲದಿದ್ದರೂ ತನ್ನ ಮಕ್ಕಳಿಗೆ ನೀಡುತ್ತಾಳೆ. ತನ್ನ ನೋವುಗಳನ್ನೆ ಮರೆಮಾಚಿ ತನ್ನ ಮಕ್ಕಳ ಒಳಿತಿಗಾಗಿ ತನ್ನ ಬದುಕನ್ನು ಸವೆಸುತ್ತಾಳೆ. ಈ ಜಗತ್ತಿನ ಮೊದಲ ದೇವರು ತಾಯಿ. ಸೃಷ್ಟಿಸೋ ದೈವವೂ ತಾಯಿ.

ಈ ಸೃಷ್ಠಿಯಲ್ಲಿ ಕೆಟ್ಟ ಮಕ್ಕಳಿರಬಹುದು, ಆದರೆ ಕೆಟ್ಟ ತಾಯಿ ಇರಲು ಎಂದಿಗೂ ಸಾಧ್ಯವಿಲ್ಲ. ಅವಳು ಮಕ್ಕಳ ಪಾಲನೆ, ಪೋಷಣೆ, ಹಾಗೇ ಮಕ್ಕಳಿಗೆ ಏನಾಗಲೂ ಬಿಡದಂತೆ ಕಣ್ಣ ರೆಪ್ಪೆಯಲ್ಲಿಟ್ಟು ಸಲಹುತ್ತಾಳೆ. ತಾನು ಒಂದು ಹೊತ್ತು ಊಟ ಮಾಡದಿದ್ದರೂ ತನ್ನ ಮಗುವಿಗೆ ತುತ್ತು ಮಾಡಿ ತಿನಿಸುತ್ತಾಳೆ. ಇಂದಿನ ಯುಗದಲ್ಲಿ ಆ ತಾಯಿಯ ಮಹತ್ವವೇ ಗೊತ್ತಿಲ್ಲದವರು, ಅವಳಿಗೆ ನೋವಾಗುವಂತೆ ನಡೆದುಕೊಳ್ಳುವುದರ ಜೊತೆಗೆ ಹೆತ್ತು-ಹೊತ್ತು ಸಾಕಿದವಳಿಗೆ ಆಶ್ರಮ ಎಂಬ ದಾರಿ ಹಿಡಿದು ಹೊರದೂಡುತ್ತಿದ್ದಾರೆ. ಇವರಿಗೊಂದು ದಿಕ್ಕಾರವಿರಲಿ. ತಾಯಿ ಕೇವಲ ಪೋಷಕಿಯಾಗಿರದೆ, ಮಡದಿಯಾಗಿಯೂ ತನ್ನ ಕುಟುಂಬದ ಆಗುಹೋಗುಗಳಿಗೆ ಜವಾಬ್ದಾರಿಯಾಗಿರುತ್ತಾಳೆ. ಅವಳು ತನ್ನ ಮನೆಯವರೆಲ್ಲರ ಯೋಗಕ್ಷೇಮ ನೋಡಿಕೊಳ್ಳುತ್ತಾಳೆ. ಈ ಸಮಾಜದಲ್ಲಿ ಸಮತೋಲನವಿರಲು ಮೂಲಕಾರಣ ಹೆಣ್ಣು. ತಾಯಿಯ ಮತ್ತೊಂದು ರೂಪವೇ ಹೆಣ್ಣು. ದೇವರ ದೃಷ್ಟಿಯಲ್ಲಿ ತಾಯಿ ಎಂಬ ಸೃಷ್ಟಿ ಅದ್ಭುತವಾದುದು ಎಂಬುದು ನನ್ನ ಅಭಿಪ್ರಾಯ. ತಾಯಿಗೆ ತ್ಯಾಗಮಯಿ, ಸೃಷ್ಟಿಕರ್ತೆ, ಕರುಣಾಮಯಿ ಎಂಬ ಹೆಗ್ಗಳಿಕೆಯೂ ಇದೆ.

ಒಂದು ಮಗುವಿಗೆ ತಂದೆಗಿಂತ ಹೆಚ್ಚು ತಾಯಿಯ ಅಗತ್ಯವಿದೆ. ತಂದೆ ಇಲ್ಲದಿದ್ದರು ತಾಯಿಯ ಆರೈಕೆಯಲ್ಲಿ ಬದುಕಬಹುದು. ಆದರೆ ತಾಯಿ ಇಲ್ಲದ ಬದುಕು ಎಂಬ ಪದಕ್ಕೆ ಅರ್ಥವೇ ಇರುವುದಿಲ್ಲ. ಇತಿಹಾಸದಲ್ಲಿ, ಪುರಾಣದಲ್ಲಿ ಆಕೆಯ ಬಗ್ಗೆ ಅತ್ಯುತ್ತಮ ಸಂಗತಿಗಳು ಸೃಷ್ಟಿಯಾಗಿವೆ. ತನ್ನ ಮಗು ಬೆಳೆದು ಮಹತ್ವ ಸಾಧನೆ ಮಾಡಿದಾಗ ಎಲ್ಲರಿಗಿಂತ ಹೆಚ್ಚು ಸಂತೋಷಪಡುವವಳು ತಾಯಿ. ಸಂಸ್ಕೃತಿ, ನಡತೆ, ಗುಣ ಇವೆಲ್ಲವು ಒಂದು ನೀತಿಯಾಗಿವೆ. ಇವನ್ನು ತನ್ನ ಮಗುವಿಗೆ ತಿಳಿಸಿ ಬೆಳೆಸುತ್ತಾಳೆ ತಾಯಿ. ಇದಕ್ಕೆ ಅತ್ಯುತ್ತಮ ಉದಾಹರಣೆ: ದೇವಕಿ ಶ್ರೀಕೃಷ್ಣನನ್ನು ಹೆತ್ತರೂ ಯಶೋಧೆ ಅವನಿಗೆ ಈ ಜಗತ್ತಿನ ಒಡೆಯನಾಗುವ ಉತ್ತಮ ಶಿಶುವಾಗಿ ಬೆಳೆಸಿದಳು. ಶ್ರವಣಕುಮಾರನು ನಿಷ್ಠೆಯಿಂದ ತನ್ನ ತಂದೆ ತಾಯಿಯರ ಯಾತ್ರೆಗಾಗಿ ಹೆಗಲ ಮೇಲೆ ಹೊತ್ತುಕೊಂಡಿದನು.

ನಮ್ಮ ಬದುಕು ಕಟ್ಟಿಕೊಳ್ಳಲು ಸನ್‌ಮಾರ್ಗದಲ್ಲಿ ನಡೆಸುವ ತಾಯಿಯೊಬ್ಬಳು ಇರಬೇಕು. ಆದ್ದರಿಂದ ತಾಯಿಯನ್ನು ಗುರುವಿಗೆ ದೇವರಿಗೆ ಹೋಲಿಸಲಾಗಿದೆ. ತನಗೆ ಎಷ್ಟೇ ನೋವು ಕಷ್ಟಗಳಿದ್ದರೂ ಲೆಕ್ಕಿಸದೆ, ಜೀವನದಲ್ಲಿ ಮಕ್ಕಳಿಗಾಗಿ ಹಗಲು ರಾತ್ರಿಯೆನ್ನದೆ ಪ್ರೀತಿಯಿಂದ ದುಡಿಯುವವಳು ತಾಯಿ. ತನಗೆ ಊಟವಿಲ್ಲದಿದ್ದರೂ ಒಳ್ಳೆಯಬಟ್ಟೆ ಇಲ್ಲದಿದ್ದರೂ ಮಕ್ಕಳ ಹಿತಚಿಂತನೆಗಾಗಿ ನೋವಿನಲ್ಲೂ ನಗುವವಳು ತಾಯಿ. ಪ್ರತಿಯೊಬ್ಬ ಯಶಸ್ವಿ ಮಕ್ಕಳ ಹಿಂದೆ ತಾಯಿಯ ಶ್ರಮವಿರುತ್ತದೆ. ಆಕೆ ಯಾವುದೋ ಮೂಲೆಯಲ್ಲಿ ಕಾಣದ ಕೈಯಂತೆ ಏನು ಅರಿಯದ ಮುಗ್ಧಮನಸ್ಸಿನಿಂದ ಮಕ್ಕಳನ್ನು ಹರಸುತ್ತಾಳೆ. ಆಕೆಯ ಶ್ರಮದ ಮಹತ್ವ ದೊಡ್ಡದು. ಅದು ಈ ಸಮಾಜದ ಮೂಲೆಮೂಲೆಗೂ ತಿಳಿದು ತಾಯಿಯ ಮನಸ್ಸು ನೋಯಿಸುವ ಮಕ್ಕಳೆಲ್ಲರೂ ಬದಲಾಗಿ ಅವಳ ಹಿತವನ್ನು, ಅವಳ ಬದುಕಿನಲ್ಲಿ ಕಷ್ಟ ದೂರವಾಗಿ ಸುಖ-ಆನಂದ ತರುವ ಭಾಗ್ಯಶಾಲಿಗಳಾಗಬೇಕೆಂದು ಆ ಭಗವಂತನಲ್ಲಿ ಪ್ರಾರ್ಥನೆ ಸಲ್ಲಿಸುತ್ತೇನೆ.

* * * * *

# 'ಅಮ್ಮ' ಎಂಬ ಕಾಮಧೇನು

-ತಮನ್ನ ಸಹರ್, ತೃತೀಯ ಬಿ.ಎಸ್ಸಿ.,

'ಅಮ್ಮ ಎನ್ನಲು ಏನೋ ಅಂದವೊ, ಅವಳ ತ್ಯಾಗಕೆ ಸಾಟಿ ಇಲ್ಲವೋ' ಎಂಬ ಈ ಕಾವ್ಯಾನುಸಾರದಂತೆ, ಅಮ್ಮ ಎನ್ನುವ ಎರಡಕ್ಷರದ ಪದಗಳಲ್ಲಿ ಏನೋ ಅಪಾರವಾದ ಶಕ್ತಿ ತುಂಬಿದೆ. ಈ ಪ್ರಪಂಚದಲ್ಲಿ ಏನನ್ನು ಕಳೆದುಕೊಂಡರೂ ಪಡೆದುಕೊಳ್ಳಬಹುದು. ಆದರೆ ನಮ್ಮನ್ನು ತನ್ನ ಉದರದಲ್ಲಿ ನವಮಾಸ ಇರಿಸಿಕೊಂಡು, ಜಾಗ್ರತೆಯಿಂದ ಕಾಪಾಡಿ ಇಳೆಗೆ ಇಳಿಸಿದ ಅಮ್ಮನನ್ನು ಕಳೆದುಕೊಂಡರೆ ಮತ್ತೆ ಪಡೆಯಲು ಸಾಧ್ಯವಿಲ್ಲದ, ಊಹಿಸಿಕೊಳ್ಳಲಾಗದ ಮಾತು.

'ತಾಯಿಗಿಂತ ಬಂಧುವಿಲ್ಲ, ಉಪ್ಪಿಗಿಂತ ರುಚಿಯಿಲ್ಲ' ಎಂಬ ನಾಣ್ನುಡಿಯಂತೆ ಮಗುವಿಗೆ ಅಮ್ಮನ ಪ್ರೀತಿ, ಸುಖ, ಸಂತೋಷ, ಪ್ರೇಮದಿಂದ ಲಾಲಿಹಾಡು ಹಾಡಿ, ಮುದ್ದು ಲಲ್ಲೆಯಿಂದ ಎದೆಹಾಲುಣಿಸಿ, ಪೋಷಿಸಿ ಬೆಳೆಸುವ ರೀತಿ, ತ್ಯಾಗಮಯಿಯಾಗಿ, ತನ್ನ ನಗುವೆಲ್ಲವನ್ನೂ ಆ ಮಗುವಿನಿಂದಲೇ ಕಾಣುವ ತಾಯಿ, ಜನನಿ, ಜನ್ಮದಾತೆಯಾಗಿರುವಳು. ಅಂತಹ ಜನ್ಮಧಾತೆಗೆ ನಮ್ಮ ಶರೀರದಿಂದ ಚರ್ಮತೆಗೆದು ಮೃದುವಾದ ಚಪ್ಪಲಿ ಮಾಡಿ ತೊಡಿಸಿದರೂ ಮುಗಿಯದ ತಾಯಿ ಋಣ ನಮ್ಮ ಮೇಲಿರುತ್ತದೆ. ನಮ್ಮನ್ನು ಹೆತ್ತುಹೊತ್ತು ಸಾಕಿದ ತಾಯಿ ನಮ್ಮನ್ನು ಹೆತ್ತಂದಿನಿಂದ ಸರಿಯಾದ ಸಮಯಕ್ಕೆ ಊಟ ಮಾಡಿಲ್ಲ, ನಿದ್ರೆ ಮಾಡಿಲ್ಲ, ವಿರಮಿಸಿಲ್ಲ. ಎಲ್ಲವನ್ನು ನಮಗಾಗಿ ತ್ಯಾಗ ಮಾಡಿರುತ್ತಾಳೆ. ಅಮ್ಮ ಎಷ್ಟೋ ಸಲ ನಮ್ಮ ಜೊತೆ ಹಾಡು ಬಾರದಿದ್ದರೂ ಹಾಡು ಹಾಡಿದ್ದಾಳೆ. ಆಟವಾಡಲು ಬಾರದಿದ್ದರೂ ಆಟವಾಡಿದ್ದಾಳೆ. ಹಾಗೋ ಹೀಗೋ ನನ್ನ ಕಂದ ಸುಖವಾಗಿರಲಿ ಎಂದು ಬಯಸುತ್ತಾಳೆ.

'ನನ್ನ ಆಯುಷ್ಯಾವನ್ನೆಲ್ಲ ನನ್ನ ಮಗುವಿಗೆ ನೀಡು ದೇವರೆ' ಎಂದು ವಿನಮ್ರದಿಂದ ದೇವರಿಗೆ ಮೊರೆ ಇಟ್ಟಿದ್ದಾಳೆ. ಈ ಪ್ರಪಂಚದಲ್ಲಿ ಕೆಟ್ಟ ಮಕ್ಕಳನ್ನು ನೋಡಿರುತ್ತೇವೆ. ಆದರೆ ಇದುವರೆಗೆ ಯಾರೂ ಕೆಟ್ಟ ತಾಯಿಯನ್ನು ನೋಡಿರುವುದೇ ಇಲ್ಲ. ಒಬ್ಬ ತಾಯಿ 10 ಮಕ್ಕಳನ್ನು ಹೆತ್ತ ಹೊತ್ತು ಮಗುವಿಗೆ ಬೇಕಾದ ಎಲ್ಲಾ ಸೌಲಭ್ಯವನ್ನು ನೀಡಿ ಸಾಕುವಳು. ಆದರೆ ಆ 10 ಮಕ್ಕಳು ಒಬ್ಬ ತಾಯಿಯನ್ನು ಸಾಕುವುದಿಲ್ಲ. ಈ ಭೂಮಿಯ ಮೇಲೆ ಎಂತಹ ವೈಪರೀತ್ಯ ನೋಡಿ.

'ಸಾವಿರ ಸಲ ಭಜನೆ ಮಾಡಿದರೇನು ಫಲ' ಎಂಬ ದಾಸರ ಮಾತಿನಂತೆ ಅಮ್ಮನನ್ನು ಪ್ರೀತಿಯಿಂದ ಕಾಣದೆ ನಿಂದಿಸಿದರೆ, ಬೈದಾಡಿದರೆ ಏನು ಉಪಯೋಗ. 'ಮನೆಯೇ ಮೊದಲ ಪಾಠಶಾಲೆ, ಅಮ್ಮನೇ ಮೊದಲ ಗುರು' ಈ ವಾಕ್ಯದಂತೆ ತಾಯಿಯ ಅವಶ್ಯಕತೆ ಪ್ರತಿಯೊಬ್ಬ ಮಕ್ಕಳಿಗೂ ಬೇಕು. ಆಕೆಯನ್ನು ಜೀವನ ಪರ್ಯಂತ ಚೆನ್ನಾಗಿ ನೋಡಿಕೊಳ್ಳುವುದು ಮಕ್ಕಳಾದವರ ಕರ್ತವ್ಯ ಹಾಗೂ ಮೋಕ್ಷದ ಮಾರ್ಗವೆಂದು ಹೇಳಬಹುದು.

* * * * *

- ಪ್ರಪಂಚದೊಡನೆ ತನಗಿರುವ ಸಂಬಂಧವನ್ನು ಮನುಷ್ಯ ಅರಿತುಕೊಳ್ಳದಿದ್ದರೆ, ಅವನು ವಾಸಿಸುವ ಸ್ಥಳ ಸೆರೆಮನೆಯಾಗುತ್ತದೆ.- **ರವೀಂದ್ರನಾಥ ಟ್ಯಾಗೋರ್**
- ಗೆಲ್ಲಲೇಬೇಕೆಂಬ ದೃಢಸಂಕಲ್ಪ ನನ್ನಲ್ಲಿದ್ದಾಗ ಸೋಲುಗಳು ಎಂದಿಗೂ ನನ್ನ ದಾರಿಗೆ ಅಡ್ಡಿ ಬರುವುದಿಲ್ಲ. – **ಡಾ.ಎ.ಪಿ.ಜೆ.ಅಬ್ದುಲ್ ಕಲಾಂ**
- ಅತ್ಯುತ್ತಮ ಪ್ರಮಾಣದ ಬಡ್ಡಿ ಸಿಗುವುದು ಜ್ಞಾನದ ಮೇಲಿನ ಹೂಡಿಕೆಯಿಂದ ಮಾತ್ರ.
  – **ಬೆಂಜಮಿನ್ ಫ್ರಾಂಕ್ಲಿನ್**
- ನಿಮ್ಮ ಹಣೆಬರಹದ ಮೇಲೆ ನಂಬಿಕೆ ಇಡಬೇಡಿ. ನಿಮ್ಮ ಸಾಮರ್ಥ್ಯದ ಮೇಲೆ ನಂಬಿಕೆ ಇಡಿ.
  – **ಡಾ. ಬಿ. ಆರ್. ಅಂಬೇಡ್ಕರ್**
- ನಿಮ್ಮ ಬದುಕಿನ ಅವಧಿ ಸೀಮಿತ ಹಾಗಾಗಿ ಬೇರೊಬ್ಬರಂತೆ ಬದುಕಿ ಆ ಸಮಯವನ್ನು ವ್ಯರ್ಥ ಮಾಡಬೇಡಿ. – **ಅನಾಮಿಕ**

# ಆತ್ಮಹತ್ಯೆಯೇ ಪರಿಹಾರವೇ?

– ಭಾಗ್ಯಶ್ರೀ. ವಿ., ಪ್ರಥಮ ಬಿ.ಕಾಂ.,

'ಈಸಬೇಕು ಇದ್ದು ಜಯಿಸಬೇಕು', ಮಾನವ ಜನ್ಮ ದೊಡ್ಡದು, ಅದನ್ನು ಹಾಳು ಮಾಡಕೊಳ್ಳಬೇಡಿರೋ ಹುಚ್ಚಪ್ಪಗಳಿರಾ" ಎಂದು ದಾಸ ಶ್ರೇಷ್ಠರಾದ ನಮ್ಮ ಪುರಂದರದಾಸರು ಹೇಳಿದ್ದಾರೆ. ಇದನ್ನು ಅರಿಯದ ಇಂದಿನ ಯುವ ಪೀಳಿಗೆ ಚಿಕ್ಕ ಕಾರಣಗಳಿಗೂ ಆತ್ಮಹತ್ಯೆ ಮಾಡಿಕೊಳ್ಳಲು ಮುಂದಾಗುತ್ತಿದೆ. ಜಗತ್ತಿನಲ್ಲಿ ಯಾವುದೇ ಒಂದು ಸಮಸ್ಯೆ ಇದೆ ಎಂದಾದರೆ ಖಂಡಿತವಾಗಿ ಅದಕ್ಕೆ ಪರಿಹಾರ ಇದ್ದೆ ಇರುತ್ತದೆ ಎಂಬುದನ್ನು ನಾವು ಅರ್ಥ ಮಾಡಿಕೊಳ್ಳುವಲ್ಲಿ ವಿಫಲರಾಗಿದ್ದೇವೆ.

ನಮ್ಮಲ್ಲಿ ವಿದ್ಯಾರ್ಥಿಗಳು ಕಡಿಮೆ ಅಂಕ ಬಂದರೆ, ಪ್ರೀತಿಯಲ್ಲಿ ಸೋತರೆ, ಬೇರೆಯವರಿಂದ ಅವಮಾನಕ್ಕೆ ಗುರಿಯಾದರೆ, ತಂದೆ–ತಾಯಿ ಬೈದರೆ, ಶಿಕ್ಷಕರು ದಂಡಿಸಿದರೆ, ಉದ್ಯೋಗ ಸಿಗದಿದ್ದರೆ, ಹೀಗೆ ಹಲವಾರು ಸಣ್ಣ ಕಾರಣಗಳಿಂದ ನೊಂದು ನಮಗಾಗಿ ಕಾದಿರುವ ಉಜ್ವಲ ಭವಿಷ್ಯವನ್ನು ತೊರೆದು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಇಂತಹ ಘಟನೆಗಳು ನಡೆದಾಗ ಯುವ ಪ್ರಜೆಗಳ ಮನಸ್ಸು ಎಷ್ಟು ದುರ್ಬಲ ಎಂದು ತಿಳಿಯುತ್ತದೆ.

ಪ್ರಪಂಚದಲ್ಲಿ ಕಷ್ಟ ಇಲ್ಲದ ವ್ಯಕ್ತಿ ಯಾರಿರಲು ಸಾಧ್ಯ? ನೀವೇ ಯೋಚಿಸಿ ಎಲ್ಲರೂ ಒಂದಲ್ಲ ಒಂದು ರೀತಿಯಲ್ಲಿ ನೋವು, ನಿರಾಶೆಗೆ ಒಳಗಾಗಿರುವವರೇ ಆಗಿದ್ದಾರೆ. ಈ ನೋವನ್ನು, ಸಂಕಷ್ಟಗಳನ್ನು ಉತ್ತಮ ಮಾರ್ಗಗಳ ಮೂಲಕ ನಿಭಾಯಿಸಿ, ಗೆದ್ದು ನೋಡಿ ಈ ಬದುಕಿನ ಬೆಲೆ ನಿಮಗೆ ಆ ಕ್ಷಣ ಅರ್ಥವಾಗದೆ ಇರಲಾರದು. ಸಾವಿನಿಂದ ಸಾಧಿಸುವುದು ಏನು ಇಲ್ಲ. ಜೀವವನ್ನು ಕೊಂದ ಸೋಲು ನಿಮ್ಮದಾಗುತ್ತದೆ ಅಷ್ಟೆ. ನಾವು ಸಾವನ್ನು ಎಂದೂ ಹುಡುಕಿ ಹೋಗಬಾರದು ಅದೇ ನಮ್ಮ ಬಳಿಗೆ ಬಂದಾಗ ಯಾರು ಅದನ್ನು ತಡೆಯಲು ಸಾಧ್ಯವಿಲ್ಲ.

"ನಾವು ಕರೆಯದೆ ಬರುವ ಅತಿಥಿಗಳೆಂದರೆ ಅನಾರೋಗ್ಯ ಮತ್ತು ಸಾವು. ಇವು ತಾವಾಗಿಯೇ ಬರಬೇಕೇ ಹೊರತು ನಾವು ಅದಕ್ಕೆ ಹತ್ತಿರವಾಗಬಾರದು."

ಪರೀಕ್ಷೆಯಲ್ಲಿ ಕಡಿಮೆ ಅಂಕ ಬಂದರೆ ಪ್ರಾಣವನ್ನು ಕಳೆದುಕೊಳ್ಳಲು ಯೋಚಿಸುವ ವಿದ್ಯಾರ್ಥಿಗಳಿಂದ ಜೀವನದಲ್ಲಿ ಏನನ್ನು ಸಾಧಿಸಲು ಸಾಧ್ಯವಿಲ್ಲ. "ನಿನ್ನ ಜ್ಞಾನದ ಮಟ್ಟವನ್ನು ಅಳೆಯುವ ಪರೀಕ್ಷೆಯಲ್ಲಿ ವಿಫಲವಾಗಿ ಸಾವನ್ನು ಬಯಸುವ ನೀನು ಜೀವನವೆಂಬ ಪರೀಕ್ಷೆಯನ್ನು ಎದುರಿಸುವಲ್ಲಿ ಖಂಡಿತವಾಗಿ ಸೋಲನ್ನು ಅನುಭವಿಸುತ್ತೀಯಾ?"

ಸಾವನ್ನು ತಂದುಕೊಳ್ಳುವ ಮುನ್ನ ಇದರಿಂದ ಏನು ಪ್ರಯೋಜನ? ಎಂದು ಯೋಚಿಸಿದರೆ ಸಾಕು. ನಿನ್ನ ಸಮಸ್ಯೆಗೆ ಉತ್ತರ ಸಿಕ್ಕಂತೆ. ಹಾಗಾಗಿ ನಿನಗಾಗಿ ಕಾದಿರುವ ಉತ್ತಮ ಜೀವನವನ್ನು ರೂಪಿಸಲು ನೀನು ಮುಂದಾಗು. ಸಣ್ಣ ವಿಚಾರಗಳಿಗೆ ನಮ್ಮಲ್ಲಿ ಉತ್ತರ ಇಲ್ಲದಿದ್ದರೆ ದೊಡ್ಡ ವಿಚಾರಗಳಿಗೂ ಉತ್ತರ ಸಿಗುವುದಿಲ್ಲ. ನಮ್ಮನ್ನು ಪ್ರೀತಿಸುವ ಪೋಷಕರು, ಸ್ನೇಹಿತರು, ನಮ್ಮ ತಂದೆ–ತಾಯಿಗಳು ಎಲ್ಲರನ್ನೂ ಬಿಟ್ಟು ಹೋಗುವಾಗ ಒಂದು ಕ್ಷಣ ಯೋಚಿಸಿ. ಅವರು ನಾವಿಲ್ಲದೆ ಏನಾಗುವರು? ಎಂಬುದನ್ನು, ಅಷ್ಟಕ್ಕೆ ನಿಮ್ಮ ಸಂಕಷ್ಟಗಳು ನಿಮ್ಮಿಂದ ಮರೆಯಾಗುವವು.

'ಎಲ್ಲರೂ ಇರುವಷ್ಟು ದಿನ ಒಳ್ಳೆಯದನ್ನೆ ಬಯಸಿ ಒಳ್ಳೆಯದನ್ನೆ ಸಾಧಿಸಲು ಪ್ರಯತ್ನಿಸಿರಿ. ಇದೇ ನೀವು ನಿಮ್ಮನ್ನು ಪ್ರೀತಿಸುವವರಿಗೆ ನೀಡುವ ಅತ್ಯುತ್ತಮ ಉಡುಗೊರೆ'. ಜೀವನದಲ್ಲಿ ಎಂತಹ ಕಷ್ಟ ಬಂದರೂ "ಆತ್ಮಹತ್ಯೆಗೆ ಮನಸ್ಸು ಮಾಡದಿರಿ".

* * * * *

- ಮೊದಲು ತಮ್ಮನ್ನು ಸರಿಪಡಿಸಿಕೊಂಡವರು ಪ್ರಪಂಚವನ್ನು ಸರಿಪಡಿಸುತ್ತಾರೆ.

  – **ಸ್ವಾಮಿ ವಿವೇಕಾನಂದ**
- ತಿಳಿದವನಿಗೆ ಜಗವೆಲ್ಲ ರಸದೂಟ. – **ಜಿ.ಎಸ್ ಶಿವರುದ್ರಪ್ಪ**

# ಇಂದಿಗೂ ಬದಲಾಗದ ಸಮಾಜದ ದುಸ್ಥಿತಿ

– ಚಂದನ. ಎಂ, ತೃತೀಯ ಬಿ.ಕಾಂ

ಕಂಪ್ಯೂಟರ್ ಯುಗದಲ್ಲೂ ಧರ್ಮ, ಜಾತಿಪದ್ಧತಿಯು ಇನ್ನು ತನ್ನ ಅಟ್ಟಹಾಸವನ್ನು ಮೆರೆಯುತ್ತಿದೆ ಎಂಬುದು ನಮ್ಮ ವ್ಯವಸ್ಥೆಯ ದುಸ್ಥಿತಿಗೆ ಹಿಡಿದ ಕೈಗನ್ನಡಿಯಾಗಿದೆ. ಸರ್ಕಾರವು ಅಭಿವೃದ್ಧಿ ದೃಷ್ಟಿಯಿಂದ ಜಾರಿಗೆ ತರುತ್ತಿರುವ ಮೀಸಲಾತಿ ಯೋಜನೆಗಳು ಬೆಳವಣಿಗೆಯ ಹೆಜ್ಜೆಯಾದರೂ, ಇದರಿಂದಲೇ ಧರ್ಮಭೇದ, ಜಾತಿಪದ್ಧತಿಯು ಹೆಚ್ಚುತ್ತಿದೆ ಹಾಗೂ ಜೀವಂತವಾಗಿದೆ ಎಂಬುದು ನನ್ನ ಅಭಿಪ್ರಾಯ. ರಾಜಕೀಯ ವ್ಯಕ್ತಿಗಳು ಜಾತಿಯನ್ನು ತಮ್ಮ ಆಟದ ದಾಳವಾಗಿ ಉಪಯೋಗಿಸಿಕೊಂಡು ರಾಜಕಾರಣದಲ್ಲಿ ಜಾತಿಯನ್ನು ಸೇರಿಸಿ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಹಾಳು ಮಾಡುತ್ತಿದ್ದಾರೆ.

ಸಮಾಜದಲ್ಲಿರುವ ಉನ್ನತ ವರ್ಗದವರು ಕೆಳ ವರ್ಗದವರನ್ನು ಶೋಷಣೆಗೆ ಗುರಿಪಡಿಸಿರುವುದು ಇಂದಿನ ಜೀವಂತವಾಗಿರುವ ಕೆಟ್ಟಪದ್ಧತಿಯಾಗಿದೆ. ಮಾನವನು ಬೆಳೆದಂತೆ, ಈ ಜಾತಿಪದ್ಧತಿಯು ದೇಶಕ್ಕೆ ಮಾರಕವಾಗಿದೆ. ನಗರ ಪ್ರದೇಶಗಳಲ್ಲಿ ಇದರ ಆಚರಣೆ ಸ್ವಲ್ಪ ಮಟ್ಟಿಗೆ ಬದಲಾಗಿದೆ ಎಂದುಕೊಳ್ಳಬಹುದಾದರೂ ಹಳ್ಳಿಗಳಲ್ಲಿ ಜಾತಿಯ ಒಂದು ಕಡ್ಡಿಯನ್ನು ಕಿತ್ತು ಹಾಕಲು ಸಾಧ್ಯವಿಲ್ಲ ಎಂದೆನಿಸುತ್ತದೆ. ಇದೇ ಪರಿಸ್ಥಿತಿ ನಮ್ಮ ದೇಶದಲ್ಲಿನ ಧರ್ಮ–ಧರ್ಮಗಳ ನಡುವೆ ಇದೆ.

ಈ ಜಾತಿ–ಧರ್ಮ ಮನೋಭಾವನೆಯನ್ನು ಯುವಕರ ಮನಸ್ಸಿನಲ್ಲಿಯೂ ತುಂಬಲು ಈ ಸಮಾಜ ಸಿದ್ಧವಾಗಿ ನಿಂತಿದೆ. ಆದರೆ ಇದರ ಅನುಕರಣೆ ನಮ್ಮ ಸಮಾಜದಲ್ಲಿ ಕೆಟ್ಟ ವಾತಾವರಣವನ್ನು ನಿರ್ಮಿಸುತ್ತಿದೆ. ಈ ಪದ್ಧತಿಯಿಂದಾಗಿ ಏನನ್ನು ಸಾಧಿಸುತ್ತದೆ, ಈ ಸಮಾಜ ಎಂಬುದು ಮಾತ್ರ ನನಗೆ ಇಂದಿಗೂ ಅರ್ಥವಾಗದ ವಿಚಾರವಾಗಿಯೇ ಉಳಿದಿದೆ.

ಧರ್ಮಭೇದ, ಜಾತಿಪದ್ಧತಿಯಿಂದ ನಮ್ಮ ರಾಷ್ಟ್ರ ದುರ್ಬಲಗೊಳ್ಳುತ್ತಿದೆ. ವರ್ಣೀಯರು–ಸವರ್ಣೀಯರು, ಅಸ್ಪೃಶ್ಯರು, ಹಿಂದೂ, ಮುಸಲ್ಮಾನ, ಕ್ರೈಸ್ತ ಎಂಬ ಭೇದವೆಣಿಸಿ, ಬೇಡದ ಈ ಪದ್ಧತಿಯ ಜೊತೆಗೆ ಆಚಾರ, ಮಡಿವಂತಿಕೆಯನ್ನು ಎಳೆದು ಜನರು ತಮ್ಮತಮ್ಮಲ್ಲೇ ಹೊಡೆದಾಡುತ್ತಾ ನಾಗರೀಕತೆ ಏನೆಂಬುದನ್ನು ಮರೆತಿದ್ದಾರೆ. ಈ ಪದ್ಧತಿಯನ್ನು ಹೋಗಲಾಡಿಸಲು ಯುವಜನತೆಯಿಂದ ಮಾತ್ರ ಸಾಧ್ಯವಾಗುತ್ತದೆ. ಸಂವಿಧಾನದಲ್ಲಿ ಧರ್ಮ, ಜಾತಿ, ಲಿಂಗ ಯಾವುದೇ ಭೇದವಿಲ್ಲದೆ ಎಲ್ಲರೂ ಸಮಾನತೆಗಾಗಿ ಸಮಾನವಾಗಿ ಹೋರಾಡಬಹುದೆಂದು ತಿಳಿಸಿದೆ. ಧರ್ಮಭೇದ, ಜಾತಿಪದ್ಧತಿಯನ್ನು ಬೇಡ ಎನ್ನುವ ಸರ್ಕಾರವೇ ಎಲ್ಲಾ ವಿಚಾರಗಳಿಗೂ ಜಾತಿ–ಧರ್ಮವನ್ನು ಕೇಳುತ್ತಿದೆ. ಸಂವಿಧಾನದ 42ನೇ ತಿದ್ದುಪಡಿಯಲ್ಲಿ 'ಸರ್ವರನ್ನು ಸಮಾನವಾಗಿ ಕಾಣು' ಎಂದು ತಿಳಿಸಿ, ಮತ್ತೇ ಅದೇ ವಿಚಾರದ ಬಗ್ಗೆ ಪ್ರಸ್ತಾಪ ಮಾಡುವುದು ಎಷ್ಟು ಸರಿ? ಯಾರು ಸರ್ವರು? ಯಾರು ಸಮಾನರು? ಎಂಬುದೇ ಗೊಂದಲದ ವಿಚಾರವಾಗಿದೆ.

ಇಷ್ಟೆಲ್ಲಾ ತೊಂದರೆ, ಗೊಂದಲ ಉಂಟುಮಾಡಿರುವ ಈ ಪದ್ಧತಿ ನಮಗೆ ಬೇಕಾ? ಇದನ್ನು ಹೋಗಲಾಡಿಸಲು ಸಮಾಜದ ಭದ್ರಬುನಾದಿಯನ್ನು ನಿರ್ಮಿಸಿ, ಸಮಾಜದಲ್ಲಿನ ಜಾತಿ–ಧರ್ಮ ಪದ್ಧತಿಯನ್ನು ಬೇರು ಸಹಿತವಾಗಿ ಕಿತ್ತೆಸೆಯುವ ಹರಿತವಾದ ಕತ್ತಿ ಯುವ ಜನತೆಯ ಕೈಲಿದೆ. ಪಂಪ– ಕುವೆಂಪುರವರು ಹೇಳಿದಂತೆ ಮನುಷ್ಯರೆಲ್ಲರೂ ಒಂದೇ ಎಂಬ ಭಾವನೆ ಎಲ್ಲರಲ್ಲೂ ಜಾಗೃತಗೊಂಡು ವಿಶ್ವಮಾನವರಾಗಿ ಬಾಳಬೇಕಾಗಿದೆ. ಅದಕ್ಕಾಗಿ ಯುವಜನತೆ ಸಾಮಾಜಿಕ ಕ್ರಾಂತಿಯ ಕಹಳೆಯನ್ನು ಮೊಳಗಿಸಬೇಕಾಗಿದೆ.

* * * * *

# ಯುವ ದೇಶಭಕ್ತನ ವೇದನೆ

– ಕೌಶಿಕ್, ತೃತೀಯ ಬಿ.ಬಿ.ಎಂ

**ಎತ್ತ ಸಾಗುತಿದೆ ನಮ್ಮ ಈ ಭವ್ಯಭಾರತ..........**

ಭಾರತೀಯ ಸೇನೆಯಲ್ಲಿದ್ದ ಮತ್ತು ಪ್ರಸ್ತುತ ಸೇನೆಯಲ್ಲಿರುವ ಪ್ರತಿಯೊಬ್ಬ ಸೈನಿಕನೂ ಸಹ ತನ್ನ ಯಾವುದೇ ವೈಯಕ್ತಿಕ ಸ್ವಾರ್ಥಕ್ಕಾಗಿಯೂ ಅಥವಾ ಮತ್ತಾವುದೇ ಕಾರಣಕ್ಕಾಗಿಯೋ ಭಾರತೀಯ ಸೇನೆಗೆ ಸೇರುವುದಿಲ್ಲ. ಬದಲಾಗಿ ಭಾರತಾಂಬೆಯ ರಕ್ಷಣೆಗಾಗಿ ಅಂದರೆ ನಮ್ಮ ನಿಮ್ಮೆಲ್ಲರನ್ನು ರಕ್ಷಿಸುವ ಸಲುವಾಗಿ ತನ್ನ ಸರ್ವಸ್ವನ್ನು ತ್ಯಜಿಸಿ, ತನ್ನ ತಂದೆ–ತಾಯಿ, ಹೆಂಡತಿ, ಮಕ್ಕಳು ಎಲ್ಲರನ್ನೂ ಸಹ ಅನಿವಾರ್ಯವಾಗಿ ಬಿಟ್ಟು ಹಗಲು–ಇರುಳೆನ್ನದೆ, ಸಿಯಾಚಿನ್‌ನ ಚಳಿಗೂ ಹೆದರದೆ, ಎಂತಹ ಬಿರುಗಾಳಿಗೂ ಹೆದರದೆ ಇಟ್ಟ ಹೆಜ್ಜೆ ಹಿಂದಿಡದೆ, ಧಾರಾಕಾರ ಮಳೆಗೂ ಲೆಕ್ಕಿಸದೆ ಸದಾ ಭಾರತಾಂಬೆಯ ಧ್ಯಾನವನ್ನು ಮಾಡುತ್ತಾ ಎದುರಾಳಿಗಳ ಗುಂಡುಗಳಿಗೆ ತಮ್ಮ ಎದೆಯನ್ನು ಕೊಟ್ಟು, ತನ್ನ ಪ್ರಾಣವನ್ನು ಬಿಟ್ಟು ನಮ್ಮ ಪ್ರಾಣವನ್ನು ರಕ್ಷಸಲಿಕ್ಕೆ ನಿಂತಿರುವ ನಮ್ಮ ಹೆಮ್ಮೆಯ ವೀರ ಸೈನಿಕರಿಗೆ ನಾವು ಕೊಡುತ್ತಿರುವ ಗೌರವವೆಂದರೆ ಅವರ ನಿಸ್ವಾರ್ಥ ಸೇವೆಯನ್ನು ಸ್ಮರಿಸುವುದು. ಅದರ ಒಂದು ಭಾಗವಾಗಿ ಚಿತ್ರಮಂದಿರಗಳಲ್ಲಿ ರಾಷ್ಟ್ರಗೀತೆಗೆ ಕಡ್ಡಾಯವಾಗಿ ಎಲ್ಲರೂ ಎದ್ದುನಿಂತು ಗೌರವಿಸಬೇಕೆಂದು ನೀಡಿದ್ದ ಆದೇಶಕ್ಕೆ ಕೆಲವು ದುರುಳ ದೇಶದ್ರೋಹಿಗಳು ರಾಷ್ಟ್ರಗೀತೆಗೆ ಎದ್ದು ನಿಂತು ಗೌರವಿಸಲಾಗುವುದಿಲ್ಲವೆಂದು ಸುಪ್ರೀಂಕೋರ್ಟ್‌ನ ತೀರ್ಪಿಗೆ ಮರು ವಿಚಾರಣಾ ಅರ್ಜಿಯನ್ನು ಸಲ್ಲಿಸಿರುವುದು ಈ ದೇಶದ ಅಪ್ಪಟ ದೇಶಭಕ್ತರಿಗೆ ಇದು ದುರ್ದೈವದ ಸಂಗತಿಯೇ ಸರಿ.

ಈ ದೇಶದ ಕೆಲವು ವರ್ಗದ ಜನರಿಗೆ ತಮ್ಮ ನೆಚ್ಚಿನ ನಟನನ್ನು ನೋಡಲು ಸಾವಿರಾರು ರೂಪಾಯಿ ಹಣವನ್ನು ಖರ್ಚು ಮಾಡಿ ಸಾಲಿನಲ್ಲಿ ನಿಂತು ಟಿಕೇಟ್ ಖರೀದಿಸಲು ಸಾಧ್ಯವಾಗುತ್ತದೆ. ಬ್ರಾಂಡ್ ಬಟ್ಟೆಗಳ ಮೇಲೆ ಕೇವಲ 25% ರಿಯಾಯಿತಿ ನೀಡಿದರೆ ಸಾಕು, ಬಟ್ಟೆ ಅಂಗಡಿಗಳ ಮುಂದೆ ಗಂಟೆಗಟ್ಟಲೆಗಳ ಕಾಲ ಸರತಿ ಸಾಲಿನಲ್ಲಿ ನಿಂತು, ಬಟ್ಟೆಯನ್ನು ಖರೀದಿ ಮಾಡಲು ಹಾತೊರೆಯುವ ಮಂದಿಗೆ ಕೇವಲ 52 ಸೆಕೆಂಡ್‌ಗಳ ಕಾಲ ನಮ್ಮ ರಾಷ್ಟ್ರಗೀತೆಗೆ ಎದ್ದು ನಿಲ್ಲಲು ಸಾಧ್ಯವಾಗುತ್ತಿಲ್ಲ.

ನಮ್ಮ ದೇಶದ ಹೆಮ್ಮೆಯ ಭಾರತೀಯನಿಗೆ ಮಠ ಮಂದಿರ ಮಸೀದಿ ಚರ್ಚುಗಳಲ್ಲಿ ಸಮಯದ ಅರಿವಿಲ್ಲದೆ ಅವರವರ ದೇವರುಗಳ ಪ್ರಾರ್ಥನೆಯನ್ನು ಮಾಡುತ್ತಾ, ಕಾಣದ ದೇವರ ದರ್ಶನಕ್ಕಾಗಿ ಕಾಯಲಿಕ್ಕಾಗುತ್ತದೆ. ಬದಲಾಗಿ ಕಾಣುವ ದೈವ ಸಮಾನರಾದ ನಮ್ಮ ದೇಶದ ವೀರ ಸೈನಿಕರಿಗೆ ಗೌರವವನ್ನು ಸೂಚಿಸುವ ರಾಷ್ಟ್ರ ಗೀತೆಗೆ ಕೇವಲ 52 ಸೆಕೆಂಡ್‌ಗಳ ಕಾಲ ನಿಲ್ಲಲು ಸಾಧ್ಯವಾಗುತ್ತಿಲ್ಲ. ಹೀಗೆ ಹೇಳುತಾ ಹೋದರೆ ಪುಟಗಟ್ಟಲೇ ಭಾರತೀಯನ ಸಾಧನೆಯನ್ನು ಹೇಳಬಹುದು!

ಕೇವಲ ತಮಗೆ ಸಿಗುವ ಸೌಲಭ್ಯವನ್ನು ಮಾತ್ರ ಸಂಪೂರ್ಣವಾಗಿ ಬಳಸಿಕೊಳ್ಳಲು ನೋಡುವ ನಮ್ಮ ಜನಾಂಗಕ್ಕೆ ರಾಷ್ಟ್ರಗೀತೆಗಾಗಿ ಕೇವಲ 52 ಸೆಕೆಂಡುಗಳ ಕಾಲ ನಿಲ್ಲಲಾಗದಷ್ಟು ಬೇಸರವುಂಟಾಗಿದೆ. ಇದು ಚಿತ್ರಮಂದಿರದ ವಿಚಾರ ಮಾತ್ರವಲ್ಲ. ಶಾಲಾ–ಕಾಲೇಜುಗಳಲ್ಲಿ ವಿದ್ಯಾರ್ಥಿ ಮಿತ್ರರು ರಾಷ್ಟ್ರಗೀತೆಗಾಗಿ ನಿಲ್ಲುವ ತಾಳ್ಮೆ, ಆಸಕ್ತಿ ಕಳೆದುಕೊಂಡು ಅಸಡ್ಡೆ ತೋರುತ್ತಿರುವುದೂ ವಿಷಾದನೀಯ ಸಂಗತಿಯಾಗಿದೆ.

ಈ ದೇಶದ ಪ್ರಮುಖ ಅಂಗಗಳೆಂದರೆ ರೈತ ಮತ್ತು ಸೈನಿಕ ಇವರಿಬ್ಬರೂ ಸಹ ಈ ದೇಶದ ಎರಡು ಕಣ್ಣುಗಳಿದ್ದಂತೆ. ಆದರೆ ಈ ದೇಶದಲ್ಲಿ ಈ ಇಬ್ಬರಿಗೂ ಸಹ ಸರಿಯಾದ ಸ್ಥಾನಮಾನ ಮತ್ತು ಗೌರವ ದೊರಕಿಸಲಾಗದೇ ಇರುವುದು ನಮ್ಮೆಲ್ಲರಿಗೂ ಇದು ನಾಚಿಕೆಗೇಡಿನ ಸಂಗತಿಯೇ ಸರಿ. ಇನ್ನು ಮುಂದೆಯಾದರೂ ಪ್ರತಿಯೊಬ್ಬ ಭಾರತೀಯನು ಸೈನಿಕ ಮತ್ತು ರೈತರ ಬಗ್ಗೆ ಇರುವ ಮನೋಭಾವನೆಯನ್ನು ಬದಲಾಯಿಸಕೊಳ್ಳಬೇಕಿದೆ.

* * * * *

# ಪ್ರಾಚೀನ ಹಳ್ಳಿಗಳಲ್ಲಿದ್ದವಿಶಿಷ್ಟ ಲೆಕ್ಕ ವ್ಯವಹಾರ

– ಪವಿತ್ರ .ಸಿ.ಎಸ್, ತೃತೀಯ ಬಿ.ಕಾಂ.

ಈಗಿನ ಕಾಲದಲ್ಲಿ ಇರುವಂತೆ ತೂಕ, ಅಳತೆ, ಹಣದ ಲೆಕ್ಕಚಾರಕ್ಕೆ ಸಂಬಂಧಿಸಿದಂತೆ ಪ್ರಾಚೀನ ಕಾಲದಲ್ಲಿ ಹೇಗಿರಬಹುದು ಎಂಬ ಕುತೂಹಲ ಸಾಮಾನ್ಯವಾಗಿ ಇರುತ್ತದೆ. ಅದರಲ್ಲೂ ಪ್ರಾಚೀನ ಕಾಲದಲ್ಲಿ ಹಳ್ಳಿಗಳಲ್ಲಿ ಬಳಕೆಯಾಗುತ್ತಿದ್ದ ಲೆಕ್ಕ ವಿಚಾರಗಳು ತುಂಬಾ ಕುತೂಹಲಕಾರಿಯಾಗಿವೆ. ಅವುಗಳಲ್ಲಿ ಕೆಲವನ್ನು ತಿಳಿಸುವ ಪ್ರಯತ್ನ ಇಲ್ಲಿದೆ.

**ತೂಕ ಹಾಗೂ ಅಳತೆಗೆ ಸಂಬಂಧಿಸಿದಂತೆ** : ಹಿಂದೆ ತೂಕವನ್ನು 'ರೂಪಾಯಿ'ಗಳಿಂದಲೇ ಕಂಡುಕೊಂಡಿದ್ದು ನಮಗೆ ಕಂಡುಬರುತ್ತದೆ. 24 ಬೆಳ್ಳಿ 'ರೂಪಾಯಿ'ಗಳ ತೂಕವನ್ನು ಒಂದು 'ಸೇರು' ಎಂದು ಮಾಡಿಕೊಂಡಿದ್ದರಿಂದ, ಅದರ ಅಳತೆಗೆ ತಕ್ಕಂತೆ 'ಸೇರು' ಸೃಷ್ಟಿಯಾಗಿರುವುದನ್ನು ನಾವು ಗಮನಿಸುತ್ತೇವೆ. ಹೀಗೆ 'ಪಾವು', 'ಚಟಾಕು', 'ಗಜ', 'ಅಂಗುಲ', 'ಮೈಲಿ', 'ಹರಿದಾರಿ', 'ಎಕರೆ' ಮುಂತಾದ ಅಳತೆಮಾನಗಳ ಹಾಗೂ 'ತೊಲ', 'ಪಲ್ಲ', 'ಖಂಡುಗ' ಮುಂತಾದ ತೂಕಮಾನಗಳು ಬಂದು ಸೇರಿಕೊಂಡಿವೆ.

**ಉದಾ** : 'ಒಂದು ಸೇರು' ಎಂದರೆ 24 ಬೆಳ್ಳಿ ರೂಪಾಯಿಗಳ ತೂಕ ಅಥವಾ ನಾಲ್ಕು ಪಾವು ಎಂದೂ ಹಾಗೂ 'ಒಂದು ಗಜ' ಎಂಬುದನ್ನು 'ಅಡಿ' ಎಂದು ಹೇಳಲಾಗುತ್ತದೆ. ಇವುಗಳ ಪ್ರಕಾರ ತೂಕ ಹಾಗೂ ಅಳತೆಗಳನ್ನು ನಾವು ಈ ರೀತಿ ವಿಂಗಡಿಸಬಹುದಾಗುದೆ.

- ☞ 1 ಪಾವು = 4 ಚಟಾಕು
- ☞ 1 ಸೇರು = 4 ಪಾವು ಅಥವಾ 24 ಬೆಳ್ಳಿ ರಾಪಾಯಿಗಳ ತೂಕ
- ☞ 1 ಇಬ್ಬಳಿಗೆ = ಐದೂವರೆ ಸೇರು (ದೊಡ್ಡ ಇಬ್ಬಳಿಗೆಯಾದರೆ 6 ಸೇರು)
- ☞ 1 ಬೆಳ್ಳಿ ರೂಪಾಯಿ ತೂಕ = 1 ತೊಲ
- ☞ 1 ಪಲ್ಲ = 100 ಸೇರು
- ☞ 1 ಕೊಳಗ = 2 ಇಬ್ಬಳಿಗೆ ಅಥವಾ 20 ಕೊಳಗ
- ☞ 1 ಅಡಿ = 12 ಅಂಗುಲ ಅಥವಾ ಇಂಚು
- ☞ 1 ಗಜ = 2 ಅಡಿ ಅಥವಾ 26 ಅಂಗುಲ
- ☞ 1 ಗುಂಟೆ = 220 ಚದರ ಗಜ
- ☞ 1 ಎಕರೆ = 40 ಗುಂಟೆ
- ☞ 1 ಮೈಲಿ = 8 ಫರ್ಲಾಂಗು
- ☞ 1 ಹರಿದಾರಿ = 4 ಮೈಲಿ
- ☞ 1 ಗಾವುದ = 12 ಹರಿದಾರಿ

☞ ಇನ್ನು ತೂಕದಲ್ಲಿ ನೋಡಿದರೆ ಬೆಣ್ಣೆ, ತುಪ್ಪ ಮುಂತಾದ ಖಾದ್ಯಗಳನ್ನು 'ಸೇರು', 'ಪಾವು' ಎಂದೇ ತೂಗುವುದು ವಾಡಿಕೆಯಾಗಿತ್ತು. ಅದಕ್ಕಾಗಿಯೇ ತೂಕದ ಕಲ್ಲುಗಳನ್ನು ಉಪಯೋಗಿಸುತ್ತಿದ್ದರು.

**ಉದಾ** : ಅಚ್ಚೇರು ಬೆಣ್ಣೆ = ಅರ್ಧ ಸೇರು ಬೆಣ್ಣೆ = 12 ಬೆಳ್ಳಿ ರೂಪಾಯಿ ತೂಕ ಅಥವಾ 2 ಪಾವು

ಅರ್ಪಾವು ತುಪ್ಪ = ಅರ್ಧ ಪಾವು ತುಪ್ಪ

**ಹಣಕ್ಕೆ ಸಂಬಂಧಿಸಿದಂತೆ :** ಈ ಹಿಂದೆ ಕಾಸುಗಳು ಬಹುಪಾಲು ಎಲ್ಲಾ ಅಳತೆಗಳಲ್ಲೂ ಪ್ರಧಾನ ಪಾತ್ರ ವಹಿಸುತ್ತಿದ್ದದ್ದು ತಿಳಿಯುತ್ತದೆ. ಮೂರು ಕಾಸಿನ ಒಂದು ಬಿಲ್ಲೆ, ಇಂಥ ನಾಲ್ಕು ಬಿಲ್ಲೆಗಳು ಸೇರಿದರೆ ಹನ್ನೆರಡು ಕಾಸು ಅಥವಾ ಒಂದು ಆಣೆಯಾಗುತ್ತದೆ. ಇಂದಿನ 'ನಾಲ್ಕಾಣೆ, ಎಂಟಾಣೆ, ಹನ್ನೆರಡಾಣೆ, ಹದಿನಾರಾಣೆಗಳು ಈ ಹಿನ್ನಲೆಯಿಂದಲೇ ಬಂದಿರುವುದು ನಮಗೆ ತಿಳಿದ ಸಂಗತಿಯಾಗಿದೆ. ಈ ಆಣೆಗಳನ್ನು ಉಪಯೋಗಿಸುತ್ತಿದ್ದುದನ್ನು ಕೇಳಿದ್ದೇವೆ. ಇದರ ಪ್ರಕಾರ ನಾವು ನಾಣ್ಯಗಳನ್ನು ಈ ಕೆಳಗೆ ಹೇಳಿರುವ ರೀತಿ ವಿಂಗಡಿಸಬಹುದಾಗಿದೆ.

**ಚಲಾವಣೆಯಲ್ಲಿದ್ದ ನಾಣ್ಯಗಳು ಮತ್ತು ಉಪಯೋಗಿಸುತ್ತಿದ ಲೋಹಗಳು :**

☞ 1 ಕಾಸು (ತಾಮ್ರ)

☞ 2 ಕಾಸು (ತಾಮ್ರ)

☞ 6 ಕಾಸು (ನಿಕ್ಕಲ್)

☞ 1 ಆಣೆ = 12 ಕಾಸು (ನಿಕ್ಕಲ್)

☞ 2 ಆಣೆ = 14 ಕಾಸು (ನಿಕ್ಕಲ್)

☞ 4 ಆಣೆ (ಬೆಳ್ಳಿ)

☞ 1 ರೂಪಾಯಿ = 192 ಕಾಸು (ಬೆಳ್ಳಿ)

☞ 8 ಆಣೆ (ಬೆಳ್ಳಿ)

ಜೊತೆಗೆ ನಾಣ್ಯವಲ್ಲದಿದ್ದರೂ 'ದುಡ್ಡು', 'ಪಾವಲಿ', 'ಹಣ' ಅಥವಾ 'ವರಹ' ಹಾಗೂ 'ದುಗ್ಗಾಣಿ' ಎಂಬ ಪದಗಳು ವ್ಯವಹಾರಿಕವಾಗಿ ಉಪಯೋಗಿಸಲ್ಪಡುತ್ತಿದ್ದವು. ಇವುಗಳನ್ನು 'ಕಾಸು' ಮತ್ತು 'ಆಣೆ'ಗಳಲ್ಲಿ ಹೇಳುವುದಾದರೆ

☞ ದುಡ್ಡು = 4 ಕಾಸು

☞ 1 ಪಾವಲಿ = 4 ಆಣೆ

☞ 1 ಹಣ / ವರಹ = 4 ಆಣೆ / ಪಾವಲಿ

☞ 1 ದುಗ್ಗಾಣಿ = 8 ಕಾಸು ಅಥವಾ 2 ದುಡ್ಡು ಎಂದು ಹೇಳಲಾಗುತ್ತಿತ್ತು.

ಹೀಗೆ ಪ್ರಾಚೀನ ಕಾಲದಲ್ಲಿದ್ದ ಅಳತೆ, ತೂಕ ಹಾಗೂ ಹಣಕ್ಕೆ ಸಂಬಂಧಿಸಿದ ವ್ಯವಹಾರಿಕವಾಗಿದ್ದ ವಿಶಿಷ್ಟ ಪದ ಪ್ರಯೋಗವನ್ನು ಕಾಣಬಹುದು.

* * * * *

☞ ಮೊದಲು ತಮ್ಮನ್ನು ಸರಿಪಡಿಸಿಕೊಂಡವರು ಪ್ರಪಂಚವನ್ನು ಸರಿಪಡಿಸುತ್ತಾರೆ **–ಸ್ವಾಮಿ ವಿವೇಕಾನಂದ**

☞ ಯಾರಿಗೆ ಒಬ್ಬ ಶತ್ರುವು ಇರುವುದಿಲ್ಲವೊ, ಅಂಥವರಿಗೆ ಒಬ್ಬ ಮಿತ್ರನೂ ಇರುವುದಿಲ್ಲ **–ಟೆನಿಸನ್**

☞ ಉತ್ತಮನಾದವನು ಕಡಿಮೆ ಮಾತನಾಡುತ್ತಾನೆ. ಮಾತಿಗಿಂತ ಹೆಚ್ಚಾಗಿ ಕೆಲಸ ಮಾಡುತ್ತಾನೆ **–ಕನ್‌ಫ್ಯೂಷಿಯಸ್**

☞ ಎಷ್ಟೋ ಬಾರಿ ಗೆಲುವು ಸೋಲಿನ ರೂಪದಲ್ಲಿ ಬರುತ್ತದೆ. **–ರಾಬರ್ಟ್ ಬ್ರೌನಿಂಗ್**

☞ ಮನಸ್ಸೆ ಎಲ್ಲಕ್ಕೂ ಮೂಲ: ಅದನ್ನು ಸರಿಪಡಿಸದ ಹೊರತು ಇನ್ನಾವುದೂ ಸರಿಯಾಗಲಾರದು **–ಡಿ.ವಿ.ಜಿ**

☞ ಒಳ್ಳೆಯ ಹೃದಯವಂತಿಕೆ ಇರುವವರನ್ನು ಸುಲಭವಾಗಿ ಎದುರಿಸುವುದು ಕಷ್ಟ **–ಷೇಕ್ಸ್‌ಪಿಯರ್**

☞ ತಿಳಿದವನಿಗೆ ಜಗವೆಲ್ಲ ರಸದೂಟ. **–ಜಿ.ಎಸ್ ಶಿವರುದ್ರಪ್ಪ**

# ನಿರುದ್ಯೋಗ ಸಮಸ್ಯೆ ನಿಜವಾಗಲೂ ಇದೆಯೇ..?

– ರೋಹಿಣಿ .ಬಿ.ವಿ, ಪ್ರಥಮ ಬಿ.ಕಾಂ.,

ಉದ್ಯೋಗವು ಹುಟ್ಟಿರುವ ಎಲ್ಲಾ ಮಾನವರ ಜನ್ಮಸಿದ್ದ ಹಕ್ಕು. ಉದ್ಯೋಗ ಇಲ್ಲದ ಮನುಷ್ಯ ಈ ಭೂಮಿಯಲ್ಲಿಲ್ಲ ಎಂಬುದು ತಿಳಿದವರ ಅಭಿಪ್ರಾಯ. ಅಖಂಡ ಭಾರತದಲ್ಲಿ 121 ಕೋಟಿಗೂ ಹೆಚ್ಚಿನ ಜನಸಂಖ್ಯೆ ಇದ್ದರೂ, ಪ್ರತಿಯೊಬ್ಬರಿಗೂ ಒಂದೊಂದು ತರಹದ ಕೆಲಸ ಇದ್ದೇ ಇರುತ್ತದೆ. ಕೆಲಸ ಇಲ್ಲದವ ಎಂದರೆ ಯಾರು? ಎಂಬ ಪ್ರಶ್ನೆಗೆ ಇಲ್ಲಿ ಜಾಗ ಇಲ್ಲ. ಹಾಗಾದರೆ 'ನಿರುದ್ಯೋಗಿ' ಎಂಬ ಪದ ಹೇಗೆ ಸೃಷ್ಠಿಯಾಯಿತು. ಕಾರಣವಿಲ್ಲದೆ ಕಾರ್ಯ ನಡೆಯುವುದೇ ಇಲ್ಲ. ಆಗಾಗೆ ನಮಗೆ ಕೇಳಿಬರುತ್ತಿರುವ ಮತ್ತೊಂದು ಪದ 'ವಿದ್ಯಾವಂತ ನಿರುದ್ಯೋಗಿ'. ಏನಿದರ ಅರ್ಥ? ಹಾಗಾದರೆ ನಮ್ಮ ವಿದ್ಯೆ ಅವನಿಗೆ ಏನು ಕಲಿಸಿದೆ? ಹಾಗೆಯೇ ಒಂದು ಕಡೆ ನೋಡಿದರೆ ವಿದ್ಯೆ ಕಲಿಯುವುದೇ ನಿರುದ್ಯೋಗ ಎಂಬ ರೋಗವನ್ನು ವಾಸಿ ಮಾಡುವುದಕ್ಕಾಗಿ. ಆದರೆ ನಮ್ಮ ಯುವಕರು ಏನು ಮಾಡುತ್ತಿದ್ದಾರೆ? ಪದವೀಧರ ಎಂಬ ಹಣೆಪಟ್ಟಿ ಕಟ್ಟಿಕೊಂಡು ನಿರುದ್ಯೋಗಿ ಎಂಬ ಫಲಕ ಹಾಕಿಕೊಳ್ಳುತ್ತಿದ್ದಾರೆ.

ಬೆಂಗಳೂರಿನಂತಹ ಮಹಾನಗರದಲ್ಲಿ ಕೆಲವು ಕಡೆ ನೋಡಿದರೆ ನಿರುದ್ಯೋಗಿ ಪದವೀಧರ ಎಂದು ಬರೆದುಕೊಂಡು ಪುಟ್‌ಪಾತಿನಲ್ಲಿ ಒಂದು ಹಾರ್ಮೋನಿಯಂ ಇಟ್ಟುಕೊಂಟು ಕಾಸಿಗಾಗಿ ಗೋಗರೆಯುವುದನ್ನು ನಾವು ಕಾಣಬಹುದಾಗಿದೆ. ಹಾಗಾದರೆ ನಿಜಕ್ಕೂ ನಮ್ಮ ನಾಡು ಅಷ್ಟೊಂದು ಹೀನಾಯದ ಸ್ಥಿತಿಗೆ ಇಳಿದಿದೆಯೇ? ಖಂಡಿತಾ ಇಲ್ಲ. ಯಾರೊಬ್ಬರು ಮನಸಾರೆ ಈ ಮಾತನ್ನು ಒಪ್ಪಲು ಸಿದ್ದವಿರುವುದಿಲ್ಲ. ನಿರುದ್ಯೋಗ ಎಂಬ ಪದವನ್ನು ಕಟ್ಟಿಕೊಂಡು ನಮ್ಮ ಯುವಜನತೆ ಹಾಳಾಗುತ್ತಿದೆ. ದುಡಿಯುವ ಮನಸ್ಸಿದ್ದರೆ ಯಾವ ಕಾರ್ಯವನ್ನು ಬೇಕಾದರೂ ಸಾಧಿಸಬಹುದು. ಕೇವಲ ಅರ್ಥಹೀನವಾದ ಮಾತಿನಿಂದಲ್ಲ, ದೃಢವಾದ ಛಲವಿರಬೇಕು. ಛಲಕ್ಕೆ ತಕ್ಕ ಬಲವಿರಬೇಕು. ಆ ಬಲವನ್ನು ಪೌಷ್ಟಿಕಗೊಳಿಸುವ ಮನಸ್ಸು ಮುಖ್ಯವಾಗಿ ಬೇಕು. ಇವುಗಳಿಲ್ಲದೆ ಯಾರೂ ಏನೂ ಸಾಧನೆ ಮಾಡಲು ಸಾಧ್ಯವಿಲ್ಲ. ಯಾವ ಮನುಷ್ಯ ಈ ತತ್ವಗಳನ್ನು ಹೊಂದಿರುತ್ತಾನೋ ಅವನು ಖಂಡಿತಾ ನಿರುದ್ಯೋಗಿ ಎಂದುಕೊಳ್ಳಲಾರ. ಕೆಲಸ ಮಾಡಲು ಮನಸ್ಸಿದ್ದರೆ ಯಾವ ಕೆಲಸವನ್ನಾದರೂ ಮಾಡಬಹುದು. ನಾನು ಅಷ್ಟು ಓದಿದ್ದೇನೆ, ಇದನ್ನು ಮಾಡುವುದೇ? ಈ ಅಲ್ಪ ಬುದ್ದಿಯನ್ನ ಯಾರು ಹೊಂದಿರುತ್ತಾರೋ ಅವರು ಖಂಡಿತಾ ನಿರುದ್ಯೋಗಿಯೇ!

ತಾಯಿಯ ಗರ್ಭದಲ್ಲಿರುವ ಶಿಶು ಕೂಡ ತಾನು ತನ್ನ ತಾಯಿಯಿಂದ ಆಹಾರವನ್ನು ಪಡೆದುಕೊಂಡು, ದೊಡ್ಡದಾಗುತ್ತಾ ತಾನೂ ಸಹ ನಿರುದ್ಯೋಗಿಯಲ್ಲ ಎಂದು ಸಾರುತ್ತದೆ. ಹೀಗಿರುವಾಗ ಕೆಲಸ ಮಾಡುವವನಿಗೆ ಏನಾದರೂ ಕೆಲಸ ಸಿಕ್ಕೇ ಸಿಗುತ್ತದೆ. ನಮ್ಮ ಯುವಜನಾಂಗ ಬರಿಯ ಸರ್ಕಾರವನ್ನೇ ದೂರುತ್ತಾ, ತಾವು ಮಾತ್ರ ಬೀಡಿ ಸಿಗರೇಟು ಮತ್ತು ಮಾದಕ ವಸ್ತುಗಳಿಗೆ ಬಲಿಯಾಗುತ್ತಿದ್ದಾರೆ. ಆದ್ದರಿಂದ ಧನ ಮತ್ತ ಮನ ಎರಡೂ ಹಾನಿ ಎಂದು ತಿಳಿದರೂ ಸಹ ಅದಕ್ಕೆ ಬಲಿಯಾಗುತ್ತಿದ್ದಾರೆ. ಇಡೀ ವಿಶ್ವ ಇಷ್ಟೊಂದು ದೊಡ್ಡದಿರುವಾಗ ಇರುವ ಇಷ್ಟು ಮನುಜರಿಗೆ ಕೆಲಸವಿಲ್ಲವೆ? ಯಾಕಿಲ್ಲಾ? ಇಲ್ಲ ಎನ್ನುವವನು ಬುದ್ದಿ ಇರುವ ಮನುಷ್ಯನೇ? ತನ್ನ ದೌರ್ಬಲ್ಯಕ್ಕೆ ಇನ್ನೊಬ್ಬರನ್ನು ದೂರುವುದು ಯಾವ ನ್ಯಾಯ. ತಾನು ಓದಿದ ಮಾತ್ರಕ್ಕೆ ಸರ್ಕಾರಿ ಕೆಲಸವೇ ಬೇಕೆನ್ನುವುದು ಕೈಲಾಗದ ಹೇಡಿಗಳ ಮಾತು. ವಿದ್ಯಾವಂತರಿಗೆ ಕೆಲವು ಮಾತುಗಳು ತಿಳಿದಿರಬೇಕು. ಸರ್ಕಾರ ನಮಗಾಗಿ ಏನೆಲ್ಲಾಮಾಡುತ್ತಿದೆಯೋ, ಅದನ್ನು ನಾವು ಸರಿಯಾದ ರೀತಿಯಲ್ಲಿ ಉಪಯೋಗಿಸಿಕೊಳ್ಳುವುದನ್ನು ಮೊದಲು ಕಲಿಯಬೇಕಾಗಿದೆ. ವಿದ್ಯಾವಂತರು ಮತ್ತು ಅವಿದ್ಯಾವಂತರು ಮಾಡಬಹುದಾದ ಅನೇಕ ಕೆಲಸಗಳು ಸಮಾಜದಲ್ಲಿವೆ. ಅನೇಕ ಸಂಘ ಸಂಸ್ಥೆಗಳು, ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಕೋಟ್ಯಾಂತರ ರೂಪಾಯಿಗಳ ಯೋಜನೆಯನ್ನು ಜಾರಿಗೊಳಿಸಿದೆ.ತರಬೇತಿ ಕೊಟ್ಟು,ಸಾಲ ನೀಡುವುದರ ಮೂಲಕ ವೃತ್ತಿಜೀವನಕ್ಕೆ ದಾರಿ ತೋರಿಸುತ್ತಿದೆ.

ಶ್ರಮವಿಲ್ಲದೆಯೇ ಯಾವ ಕೆಲಸವೂ ಆಗಲಾರದು ಪಣತೊಟ್ಟಿ ತೋಳು ತಟ್ಟಿ ನಿಲ್ಲುವ ಜಟ್ಟಿಯಾಗಬೇಕು. ಆಗಲೇ ಈ ನಿರುದ್ಯೋಗ ಎಂಬ ರೋಗವನ್ನು ಅಳಿಸಲು ಸಾಧ್ಯ. ಇದು ಕೇವಲ ಒಬ್ಬಿಬ್ಬರ ಕಾರ್ಯವಲ್ಲ. ಇಡೀ ಮನುಕುಲವೇ ಇದಕ್ಕೆ ಬದ್ದರಾಗಿ ಕಾರ್ಯಗತಗೊಳಿಸಬೇಕು.

* * * * *

# ಸ್ವಚ್ಛ ಭಾರತ ಅಭಿಯಾನದಲ್ಲಿ ಗಂಗೆಗೆ ಕಾಯಕಲ್ಪ..!

– ಆಯಿಷಾ ಸಿದ್ದೀಖ, ಪ್ರಥಮ ಬಿ.ಎ.,

ಭಾರತೀಯರು ವಿಶ್ವದಲ್ಲೇ ಅತ್ಯಂತ ಸ್ವಚ್ಛತಾ ಪ್ರಿಯರು. ದಿನಕ್ಕೆರಡು ಬಾರಿ ಸ್ನಾನ ಮಾಡುವುದರಿಂದ ಹಿಡಿದು ಸುಗಂಧ ದ್ರವ್ಯಗಳಲ್ಲಿ ಮುಳುಗೆದ್ದು ಬರುವವರು ನಮ್ಮಲ್ಲಿ ಇದ್ದಾರೆ. ಆದರೆ ನಮ್ಮ ದೇಶ ಮಾತ್ರ ವಿಶ್ವದಲ್ಲೇ ಅತ್ಯಂತ ಕೊಳಕು ದೇಶಗಳಯಾದಿಯಲ್ಲಿ ಬರುತ್ತಿದೆ. ಯಾಕೆ ಹೀಗೆ?

ಗಾಂಧೀಜಿಯವರು ಸ್ವಾತಂತ್ರ್ಯದ ಕನಸನ್ನು ಸಾಕಾರಗೊಳಿಸಿದ್ದರು. ಕೋಟ್ಯಂತರ ಜನರ ಉತ್ಕಟ ತುಡಿತದ ಮಹಾಪೂರ ಅವರ ಹೋರಾಟಕ್ಕೆ ಬೆಂಗಾವಲಾಗಿ ಶತಮಾನಗಳ ದಾಸ್ಯದಿಂದ ಮುಕ್ತಿ ಪಡೆದುಕೊಂಡಿತ್ತು. ಸ್ವಾತಂತ್ರ್ಯದ ಜೊತೆಗೇ ಗಾಂಧೀಜಿಯವರು ಸ್ವಚ್ಛ ಪರಿಶುದ್ಧ ಭಾರತದ ಕನಸನ್ನು ಕಂಡಿದ್ದರು. ಅದು ಇನ್ನು ಯಾಕೆ ಸಾಧ್ಯವಾಗಿಲ್ಲ? ಸ್ವಚ್ಛತೆಗಾಗಿ ವಿಭಿನ್ನ ಸರಕಾರಗಳು ಹಲವು ದಶಕಗಳಿಂದ ಯೋಜನೆಗಳನ್ನು ಜಾರಿಗೆ ತಂದಿದ್ದವು. ಇದೀಗ ಪ್ರಧಾನಮಂತ್ರಿ ನರೇಂದ್ರಮೋದಿಯವರು ಹುಟ್ಟು ಹಾಕಿರುವ ಸ್ವಚ್ಛ ಭಾರತ ಅಭಿಯಾನ ಗಾಂಧೀಜಿಯವರ 150ನೆಯ ಹುಟ್ಟುಹಬ್ಬದ ಒಳಗಾಗಿ ಅವರ ಕನಸನ್ನು ಸಾಕಾರಗೊಳಿಸುವ ಪಣ ತೊಟ್ಟಿದೆ. ಯಶಸ್ವಿಯಾದೀತೆ ಈ ಯೋಜನೆ? ಎಂಬ ಅನುಮಾನ ಎಲ್ಲರಲ್ಲೂ ಮೂಡುವುದು ಸಹಜ.

ನಮ್ಮ ಭಾರತವು ಸ್ವಚ್ಛತೆಯಲ್ಲಿ ಎಷ್ಟು ಹದಗೆಟ್ಟಿದೆ ಎಂಬುದನ್ನು ನೋಡಬಹುದು. ಉದಾಹರಣೆಗೆ ಭಾರತದ ಪವಿತ್ರ ನದಿಯಾದ ಗಂಗಾನದಿಯನ್ನು ನೋಡಬಹುದು.

**ಗಂಗಾನದಿ :** ಅಸಂಖ್ಯಾ ಭಾರತೀಯ ಭಕ್ತರ ಪಾಲಿಗೆ ಗಂಗೆ ಸಾಕ್ಷಾತ್ ಸ್ವರ್ಗದಿಂದ ಇಳಿದು ಬಂದ ದೇವತೆ, ಭಾರತೀಯರು ಅವಳ ಪೂಜೆ ಮಾಡುತ್ತಾರೆ. ಅವಳ ಶರಣು ಹೋಗುವುದೇ ಮೋಕ್ಷಕ್ಕೆ ಮಾರ್ಗ ಎಂದು ತಿಳಿಯುತ್ತಾರೆ. ಆದರೆ ಇದೇ ದೇವತೆಯನ್ನು ಕೊಳಚೆ ಚರಂಡಿಯಾಗಿ ಮಾಡುವವರೂ ನಾವು ಭಾರತೀಯರೇ. ಗಂಗೆ ಒಂದು ಕಾಲದಲ್ಲಿ ಭಾರತೀಯ ಸಂಸ್ಕೃತಿಯ ಚೈತನ್ಯವಾಹಿನಿಯಾಗಿದ್ದಳು. ಜಗತ್ತಿನ ಅತೀ ಸಮೃದ್ಧ ಶ್ರೀಮಂತ ನಾಗರೀಕತೆಯೊಂದು ಹುಟ್ಟಿ ಬೆಳೆದಿದ್ದು ಗಂಗೆಯ ತಡಿಯಲ್ಲಿ, ಆದರೆ ಇಂದು ಪರಿಸ್ಥಿತಿ ವಿಪರೀತವಾಗಿದೆ.

ಭಾರತದ 11 ರಾಜ್ಯಗಳಲ್ಲಿ 50 ಕೋಟಿಗೂ ಹೆಚ್ಚು ಜನರಿಗೆ ನೀರು ಒದಗಿಸುತ್ತಿರುವ ನದಿ ಗಂಗೆ. ಹಳ್ಳಿ–ಪಟ್ಟಣಗಳ ಜನರು ಸಾಬೂನು ಹಚ್ಚಿ ಅವಳ ನೀರಿನಲ್ಲಿ ಪವಿತ್ರ ಸ್ನಾನಕ್ಕೆ ಇಳಿಯುತ್ತಾರೆ. ಹಬ್ಬ ಹುಣ್ಣಿಮೆಗಳ ದಿನ 7 ಕೋಟಿಗೂ ಹೆಚ್ಚು ಜನರು ಗಂಗೆಯಲ್ಲಿ ಪಾಪ ತೊಳೆದುಕೊಳ್ಳಲು ಸ್ನಾನ ಮಾಡುತ್ತಾರೆ. ಧಾರ್ಮಿಕ ಆಚರಣೆಗಳ ಬಳಿಕ ಗಂಗೆಯ ನೀರಿನಲ್ಲಿ ತಿಂಡಿ ತಿನಿಸುಗಳು, ಎಲೆಗಳನ್ನು ಹರಿಯ ಬಿಡುತ್ತಾರೆ.

ಇತ್ತೀಚಿನ ಅಂಕಿಅಂಶಗಳ ಪ್ರಕಾರ ಗಂಗಾ ನದಿ ಅಪವಿತ್ರವಾಗಲು ಪ್ರಮುಖ ಕಾರಣಗಳನ್ನು ಈ ರೀತಿ ವಿಶ್ಲೇಷಿಸಬಹುದು. ಪವಿತ್ರ ಕ್ಷೇತ್ರ ವಾರಣಾಸಿಯಲ್ಲಿ ವರ್ಷಕ್ಕೆ 33,000 ಜನರ ಅಂತ್ಯಕ್ರಿಯೆ ನಡೆಯುತ್ತದೆ. 800 ಟನ್ ಬೂದಿಯನ್ನು ನೀರಿಗೆ ಬಿಡಲಾಗುತ್ತದೆ. ವರ್ಷಕ್ಕೆ 3,200 ಮಾನವರ ಹೆಣಗಳು, 300 ಟನ್ ಅರ್ಧ ಸುಟ್ಟ ಮಾನವರ ಹಾಗೂ 6000 ಪ್ರಾಣಿಗಳ ಕಳೇಬರಗಳು ಗಂಗೆಗೆ ಸೇರಿಕೊಳ್ಳುತ್ತಿವೆ ಎಂಬುದು ಸಮೀಕ್ಷೆಯೊಂದರಿಂದ ತಿಳಿಯುತ್ತದೆ.

ಭಾರತೀಯರ ಪಾಲಿಗೆ ಗಂಗೆಯಷ್ಟೆ ಪವಿತ್ರ ನದಿ ಯಮುನೆ. ಗಂಗೆಯ ಜೊತೆಗೆ ಸಂಗಮವಾಗುವ ಯಮುನೆಯ ಅವಸ್ಥೆ ಕೂಡ ಅಷ್ಟೆ ಭಯಾನಕ. ಯಮುನೆ ಸೋನಿಪತ್, ಪಾಣಿಪತ್, ದೆಹಲಿ ಮುಂತಾದ ಪಟ್ಟಣಗಳ ಅಮೇಧ್ಯಗಳು, ಫ್ಯಾಕ್ಟರಿಗಳ ರಾಸಾಯನಿಕಗಳು ಯಮುನಾ ನದಿಯ ನೀರನ್ನು ಕೊಳಚೆ ರಾಡಿಯನ್ನಾಗಿ ಮಾಡುತ್ತಿದೆ.

ಈ ಪವಿತ್ರ ನದಿಗಳನ್ನು ಶುದ್ಧೀಕರಿಸುವ ಯೋಜನೆ 1985ರಲ್ಲಿ ತಯಾರಾಗಿತ್ತು. ಆಗಿನ ಪ್ರಧಾನಮಂತ್ರಿ ರಾಜೀವ್‌ಗಾಂಧಿ ಭಾರೀ ಪ್ರಚಾರದೊಡನೆ 'ಗಂಗಾ ಆ್ಯಕ್ಷನ್ ಪ್ಲಾನ್' ಎಂಬ ಯೋಜನೆಯನ್ನು ಆರಂಭಿಸಿ ಅದಕ್ಕೆ 452 ಕೋಟಿ ರೂಪಾಯಿಗಳನ್ನು ಮಂಜೂರು ಮಾಡಿದ್ದರು. ಆ ಕಾಲದಲ್ಲಿ ಜಗತ್ತಿನಲ್ಲೇ ನದಿ ಶುದ್ಧೀಕರಣದ

ಅಲೆ ದೊಡ್ಡ ಯೋಜನೆಯಾಗಿತ್ತು. ಆದರೆ ಈ ಯೋಜನೆ ಯಶಸ್ವಿಯಾಗಲಿಲ್ಲ. ಆದರೆ ಈಗಿನ ಪ್ರಧಾನಮಂತ್ರಿಯವರಾದ ನರೇಂದ್ರಮೋದಿಯವರು ಗಂಗೆಯನ್ನು ಸ್ವಚ್ಛ ಮಾಡಬೇಕೆಂದು ದೃಢ ನಿಶ್ಚಯದೊಂದಿಗೆ ಮುನ್ನಡೆದಿದ್ದಾರೆ. ದೂರದೃಷ್ಟಿಯುಳ್ಳ ಸ್ವಚ್ಛಭಾರತ ಅಭಿಯಾನ ಕೈಗೊಂಡಿದ್ದಾರೆ.

ಇವರ ಪ್ರಕಾರ ಪವಿತ್ರ ನದಿ ಗಂಗಾ ಶೇ 70% ರಷ್ಟು ಮಲಿನಗೊಂಡಿದೆ ಎಂದು ಹೇಳಿದ್ದಾರೆ. ನರೇಂದ್ರಮೋದಿಯವರು ಮೊದಲು ಗಂಗೆಯನ್ನು ಶುದ್ಧೀಕರಣಗೊಳಿಸುತ್ತಿದ್ದಾರೆ. ಗಾಂಧೀಜಿಯವರ 150ನೇ ಹುಟ್ಟು ಹಬ್ಬದ ಒಳಗಾಗಿ ಗಂಗೆಯನ್ನು ಶುದ್ಧೀಕರಣ ಮಾಡುವ ಪಣ ತೊಟ್ಟಿದ್ದಾರೆ. ಅವರೊಂದಿಗೆ ಎಲ್ಲಾ ಭಾರತೀಯರು ಗಂಗೆಯ ಶುದ್ಧೀಕರಣದ ಜೊತೆಗೆ ತಮ್ಮ ಸುತ್ತಮುತ್ತಲಿನ ಕೆರೆ, ಕಟ್ಟೆ, ಬಾವಿ, ನದಿಗಳೂ ಸೇರಿದಂತೆ ಸಮಸ್ತ ಪರಿಸರವನ್ನು ಶುಚಿಯಾಗಿಟ್ಟುಕೊಳ್ಳುವತ್ತ ಗಮನಹರಿಸಬೇಕಾಗಿದೆ. ಇದು ಸರ್ಕಾರವೊಂದರಿಂದಲೇ ಕೈಗೊಳ್ಳುವ ಅಭಿಯಾನವಲ್ಲ, ಬದಲಿಗೆ ಭಾರತೀಯರೆಲ್ಲರೂ ಸಕ್ರಿಯವಾಗಿ ಪಾಲ್ಗೊಂಡು ಯಶಸ್ವಿಗೊಳಿಸಬೇಕಾಗಿದೆ.

* * * * *

## ಗ್ರಾಮದ ಸ್ಪರ್ಶವಿಲ್ಲದೆ ಬದುಕಿದವರ ಬದುಕು ಪರಿಪೂರ್ಣವಲ್ಲ

**– ರಮ್ಯ ಕೆ. ವಿ, ಪ್ರಥಮ ಬಿ.ಕಾಂ.,**

ಹಳ್ಳಿಗಳು ನಮ್ಮ ದೇಶದ ಆರ್ಥಿಕಾಭಿವೃದ್ಧಿಗೆ ಬೆನ್ನೆಲುಬುಗಳು. ಯಾವುದೇ ಒಂದು ದೇಶದಲ್ಲಿ ಗ್ರಾಮಗಳ ಉದ್ಧಾರವಾಗದೇ ಆ ದೇಶ ಎಂದೂ ಬೆಳವಣಿಗೆಯ ಹಂತವನ್ನು ಸಾಧಿಸಲು ಸಾಧ್ಯವಿಲ್ಲ. ಆದರೆ ಇಂದು ಜನರು ಹಳ್ಳಿ ಎಂದರೆ ಅಥವಾ ಹಳ್ಳಿಯ ಜನರೆಂದರೆ ಕೀಳು, ನಗರದ ಜನರೆಂದರೆ ಮೇಲು ಎಂಬ ಭಾವನೆಯಿಂದ ನೋಡುತ್ತಾರೆ. ನಗರ ಎಂಬ ಕೊಳಚೆ ಪ್ರದೇಶದಲ್ಲಿ ಜನರು ವಾಸಿಸಲು ಬಯಸುತ್ತಾರೆಯೇ ವಿನಹಃ, ಶುದ್ಧ ಗಾಳಿ, ಪರಿಸರ ಮತ್ತು ನೈರ್ಮಲ್ಯದಿಂದ ಕೂಡಿದ ಹಳ್ಳಿಯಲ್ಲಿ ವಾಸಿಸಲು ಬಯಸುವುದಿಲ್ಲ. ಕಾರಣ ನಗರ ಪ್ರದೇಶದಲ್ಲಿ ಎಲ್ಲಾ ಮೂಲಭೂತ ಸೌಕರ್ಯಗಳು ದೊರೆಯುತ್ತವೆ ಎಂಬ ಕ್ಷುಲಕ ಕಾರಣದಿಂದಾಗಿ. ನಗರಗಳಿಗೆ ಜನರು ಹಿಂಡುಹಿಂಡಾಗಿ ವಲಸೆ ಹೋಗುತ್ತಾರೆ. ಆದರೆ ಮನುಷ್ಯರಿಗೆ ಇನ್ನೂ ತಿಳಿದಿಲ್ಲ ಸಂಪೂರ್ಣ ಜೀವನಕ್ಕಿಂತ, ಸಂತೋಷದ ಜೀವನ ಮುಖ್ಯ ಎಂದು. ಹಣವನ್ನು ಯಾರು ಬೇಕಾದರೂ ಸಂಪಾದಿಸಬಹುದು. ಆದರೆ ಉತ್ತಮ ಆರೋಗ್ಯವನ್ನು ಕಾಪಾಡಿಕೊಳ್ಳುವುದು ಈಗಿನ ಪ್ರಪಂಚದಲ್ಲಿ ತುಂಬಾನೆ ಕಷ್ಟ. ಇದನ್ನು ಅರಿಯದ ಜನರು ನಗರ ಎಂಬ ಕೊಳಚೆ ಪ್ರದೇಶದಲ್ಲಿ ವಾಸಿಸಲು ಬಯಸುತ್ತಾರೆ.

ಹಳ್ಳಿಗಳು ಮರಗಿಡಗಳಿಂದ ಸಮೃದ್ಧವಾಗಿರುತ್ತವೆ. ನಗರಗಳಲ್ಲಿ ನೋಡುವುದಕ್ಕೂ ಸಹ ಒಂದು ಮರಗಿಡವೂ ಕಣ್ಣಿಗೆ ಕಾಣುವುದಿಲ್ಲ. ನೋಡಲು ಮರಗಿಡಗಳೇ ಇಲ್ಲದ ನಗರಗಳಲ್ಲಿ ಆಮ್ಲಜನಕವಾದರೂ ಎಲ್ಲಿಂದ ಸಿಗುತ್ತದೆ. ನಗರದ ಜನರು ವಾಹನದಿಂದ ಬಿಡುಗಡೆಯಾಗುವ ಇಂಗಾಲದ ಡೈ ಆಕ್ಸೈಡನ್ನು ಹೀರಿಕೊಂಡು, ಅನೇಕ ಖಾಯಿಲೆಗಳಿಗೆ ತುತ್ತಾಗುತ್ತಾರೆ. ಒಬ್ಬ ವ್ಯಕ್ತಿಗೆ ಒಂದು ದಿನಕ್ಕೆ 200ರೂಗಳ ಆಕ್ಸಿಜನ್ ಬೇಕಾಗುತ್ತದೆ. ಒಂದು ವರ್ಷಕ್ಕೆ ಸುಮಾರು 7,30,000ರೂಗಳ ಕೃತಕ ಆಕ್ಸಿಜನ್ ಬೇಕಾಗುತ್ತದೆ. ಇಂತಹ ಪ್ರದೇಶದಲ್ಲಿ ಜೀವನ ನಡೆಸುತ್ತಿದ್ದ ಜನರು ತಮ್ಮ ಆರೋಗ್ಯವನ್ನು ಹಾಳು ಮಾಡಿಕೊಂಡು ಶ್ವಾಸಕೋಶದ ತೊಂದರೆ, ಉಸಿರಾಟದ ತೊಂದರೆಗಳಿಂದ ಪಾರಾಗಲು ಮತ್ತೆ ಹಳ್ಳಿಗಳಿಗೆ ಬರುತ್ತಾರೆ. ನಗರಗಳು ಕಳ್ಳತನ, ದರೋಡೆ, ಕೊಲೆ, ಸುಲಿಗೆಗಳ ತವರು ಮನೆಗಳಾಗಿರುತ್ತವೆ.

ನಗರ ಪ್ರದೇಶದ ಮಕ್ಕಳಿಗೆ ನಮ್ಮ ಆಚಾರ, ವಿಚಾರ, ಸಂಸ್ಕೃತಿ ಬಗ್ಗೆ ಅರಿವೇ ಇರುವುದಿಲ್ಲ. ಹಳ್ಳಿಯ ಜನರು ಮನೆಯವರೊಂದಿಗೆ ತಮ್ಮ ಕಾಲವನ್ನು ಕಳೆಯುತ್ತ ನೆಮ್ಮದಿಯಿಂದ ಜೀವನವನ್ನು ನಡೆಸುತ್ತಾರೆ. ಆದರೆ ನಗರ ಪ್ರದೇಶದ ಜನರಿಗೆ ಮನೆಯ ಮಂದಿಯೊಂದಿಗೆ ಸಮಯವನ್ನು ಕಳೆಯಲು ಅವರ ಬಳಿ ಸಮಯವೇ ಇರುವುದಿಲ್ಲ. ಬೆಳಗ್ಗೆ ಎದ್ದು ಮನೆಯಿಂದ ಕೆಲಸಕ್ಕೆಂದು ಹೊರಗೆ ಹೋದರೆ ಮತ್ತೆ ಮನೆಗೆ ಹಿಂತಿರುಗಿ ಬರುವುದೇ ಮಧ್ಯರಾತ್ರಿ ಅವರಿಗೆ ಮನೆಯವರೊಂದಿಗೆ ಕಾಲಕಳೆಯಲು ಸಮಯವೆಲ್ಲಿದೆ. ನಗರದ ಜೀವನವೆಂದರೆ ಒಂದು ಕೃತಕ

ಜೀವನದ ಕ್ರಮವಷ್ಟೆ, ಪ್ರಕೃತಿದತ್ತವಾದ ನೈಸರ್ಗಿಕ ಜೀವನವಲ್ಲ. ನಗರಗಳು ಎಷ್ಟೇ ಸೌಲಭ್ಯಗಳನ್ನು ಹೊಂದಿದ್ದರು, ಅದು ನಮ್ಮ ಹಳ್ಳಿಯ ಸೊಬಗನ್ನು ನೀಡಲು ಸಾಧ್ಯವೇ, ಎಂದಿಗೂ ಸಾಧ್ಯವಿಲ್ಲ. ಆದ್ದರಿಂದಲೇ ನಗರದ ಜನರು ತಮ್ಮ ವೃದ್ಧಾಪ್ಯ ಜೀವನವನ್ನು ಹಳ್ಳಿಗಳಲ್ಲಿ ಕಳೆಯುತ್ತಾರೆ. ಅವರಿಗೆ ನೆಮ್ಮದಿಯ ಸಂತೋಷದ ಜೀವನದ ಅರಿವೇ ಇರುವುದಿಲ್ಲ. ತಮ್ಮ ಕೊನೆಯ ದಿನದಲ್ಲಾದರೂ ಇವುಗಳನ್ನು ಅನುಭವಿಸುವ ಅಂಬಲದಿಂದ ನಗರದಿಂದ ಹಳ್ಳಿಗೆ ಬರುತ್ತಾರೆ.

ತಳಪಾಯವಿಲ್ಲದೆ ಗೋಡೆ ಭದ್ರವಾಗಿ ನಿಲ್ಲಲಾರದು, ಅದೇ ರೀತಿ ಹಳ್ಳಿಗಳ ಉದ್ದಾರವಾಗದೇ ದೇಶ ಅಭಿವೃದ್ಧಿ ಹೊಂದಲಾರದು. ಇದರ ಅರಿವಿಲ್ಲದ ಸರ್ಕಾರಗಳು ಕೇವಲ ನಗರಗಳ ಅಭಿವೃದ್ಧಿಗೆ ಹೆಚ್ಚಿನ ಪ್ರಾಮುಖ್ಯತೆ ನೀಡುತ್ತವೆಯೇ ಹೊರತು, ಹಳ್ಳಿಗಳ ಅಭಿವೃದ್ಧಿಗಳಿಗೆ ಅಲ್ಲ. ಬೆಂಕಿ ಇಲ್ಲದೆ ಮೇಣದಬತ್ತಿ ಉರಿಯಲಾರದು. ಹಳ್ಳಿಗಳ ಉದ್ದಾರವಾಗದೆ ದೇಶ ಉದ್ಧಾರವಾಗಲಾರದು ಮತ್ತು ಹಳ್ಳಿಯನ್ನು ಸ್ಪರ್ಶಿಸದವನ ಬದುಕು ಎಂದಿಗೂ ಪರಿಪೂರ್ಣವಾಗಲಾರದು.

* * * * *

## ಕನ್ನಡದ ಜೊತೆಗೆ ಆಂಗ್ಲ ಭಾಷೆಯೂ ಬೇಕು!

**– ಹೇಮಾವತಿ ಸಿ., ಪ್ರಥಮ ಬಿ.ಕಾಂ.,**

ಪ್ರಸ್ತುತ ಕಾಲಮಾನದಲ್ಲಿ ಇಂತಹ ಮಾತು ಎಷ್ಟು ಅಗತ್ಯ ಎಂಬುದನ್ನು ಈ ಲೇಖನದ ಮೂಲಕ ತಿಳಿಯಪಡಿಸುವುದು ನನ್ನ ಉದ್ದೇಶವಾಗಿದೆ. ಆಂಗ್ಲ ಭಾಷೆಯನ್ನು ಯಾವ ತರಗತಿಯಿಂದ ಕಲಿಸಬೇಕು ಎಂಬ ಚರ್ಚೆಗೆ ದಿನದಿಂದ ದಿನಕ್ಕೆ ಕಾವೇರುತ್ತಲೇ ಇದೆ. ಭಾಷಾ ಬೋಧನೆಯ ಸಾಧ್ಯತೆ ಮತ್ತು ಮಿತಿಗಳನ್ನು ಅರಿತವರಿಗಿಂತ ಹೆಚ್ಚಾಗಿ ಇಡೀ ವಿಷಯವನ್ನು ಭಾವನಾತ್ಮಕವಾಗಿ ಗ್ರಹಿಸಿದವರು ಮಾತ್ರ ಈ ವಿಷಯ ಚರ್ಚೆಯ ಮುಂಚೂಣಿಯಲ್ಲಿದ್ದಾರೆ. ಪರಿಣಾಮವಾಗಿ ಯಾವುದು ಚರ್ಚೆಯಾಗಬೇಕಿತ್ತೋ ಅದು ಚರ್ಚೆಯಾಗದೆ ಕನ್ನಡದ ಬಳಕೆ ಎಂಬುದು ವರ್ಗ, ವರ್ಣ, ಜಾತಿ ಮುಂತಾದವುಗಳ ಚರ್ಚೆಯಾಗಿ ಬದಲಾಗುತ್ತಿದೆ. ಭಾಷೆಯೊಂದರ ಕಲಿಕೆಯ ಹಿಂದೆ ಈ ಎಲ್ಲಾ ಸಾಮಾಜಿಕ ಅಸಮಾನತೆಗಳು ಪರಿಣಾಮ ಬೀರುತ್ತವೆಯಾದರೂ ಕೇವಲ ಅವುಗಳನ್ನಷ್ಟೇ ಪರಿಗಣಿಸಿ ಭಾಷೆಯೊಂದರ ಕಲಿಕೆಗೆ ಸಂಬಂಧಿಸಿದ ನೀತಿ ರೂಪಿಸಲು ಸಾಧ್ಯವಿಲ್ಲ.

ಒಂದನೇ ತರಗತಿಯಿಂದ ಇಂಗ್ಲಿಷ್ ಕಲಿಸುವುದರಿಂದ ಮಕ್ಕಳಿಗೆ ಹೊರೆಯಾಗುತ್ತದೆ. ಕನ್ನಡಕ್ಕೆ ಅಪಾಯ, ಕನ್ನಡ ಸಂಸ್ಕೃತಿಗೆ ಅಪಾಯ ಎಂದು ಒಂದು ಗುಂಪಿನವರು ವಾದಿಸುತ್ತಿದ್ದಾರೆ. ಈ ಗುಂಪಿನಲ್ಲಿರುವ ಹಿರಿಯರಲ್ಲಿ ಹಲವರು ತಮ್ಮದೇ ಆದ ಕಾರಣಗಳಿಗಾಗಿ ತಮ್ಮ ಮಕ್ಕಳನ್ನು ಇಂಗ್ಲಿಷ್ ಮಾಧ್ಯಮ ಶಾಲೆಗಳಲ್ಲಿ ಓದಿಸಿಯೂ ಇದ್ದಾರೆ. ಮತ್ತೊಂದು ಗುಂಪಿನವರು ಇಂಗ್ಲಿಷ್ ಸಾಮಾಜಿಕ ಅಸಮಾನತೆಯ ನಿವಾರಣೆಗೆ ಅವಶ್ಯ. ಆಧುನಿಕ ಉದ್ಯೋಗ ಮಾರುಕಟ್ಟೆಯಲ್ಲಿ ಅವಕಾಶ ಗಿಟ್ಟಿಸಿಕೊಳ್ಳಲು ಇಂಗ್ಲಿಷ್ ಇಲ್ಲದಿದ್ದರೆ ಸಾಧ್ಯವಿಲ್ಲ. ಶೋಷಿತ ವರ್ಗಗಳಿಗೆ ಇಂಗ್ಲಿಷ್ ಶಾಲೆಗಳಲ್ಲಿ ಪ್ರವೇಶಗಿಟ್ಟಿಸಿಕೊಂಡಿದ್ದಾರೆ. ಇಂಗ್ಲಿಷ್ ಪರವಾಗಿ ವಾದಿಸುವ ಮೂಲಕ ತಮ್ಮ ಮಕ್ಕಳಿಗೆ ಪ್ರತಿಷ್ಠಿತ ಇಂಗ್ಲಿಷ್ ಶಾಲೆಗಳಲ್ಲಿ ಪ್ರವೇಶಗಿಟ್ಟಿಸಿಕೊಂಡಿದ್ದಾರೆ. ಇಂಗ್ಲಿಷ್ ಪರವಾಗಿ ವಾದಿಸುವ ಮೂಲಕ ತಮ್ಮ ಮಕ್ಕಳನ್ನು ಇಂಗ್ಲಿಷ್ ಶಾಲೆಗಳಿಗೆ ಸೇರಿಸಿರುವುದನ್ನು ಸಮರ್ಥಿಸಿಕೊಳ್ಳುತ್ತಿದ್ದಾರೆ ಎಂಬುದು ಮೊದಲ ಗುಂಪಿನವರ ಆರೋಪ.

ವಾಸ್ತವದಲ್ಲಿ ಈ ಎರಡೂ ವಾದಗಳೂ ವಿತಂಡವಾದಗಳೇ ಸರಿ. ಕನ್ನಡಕ್ಕೆ ಸಾವಿರಾರು ವರ್ಷಗಳ ಇತಿಹಾಸವಿದೆ. ಕನ್ನಡ ಸಂಸ್ಕೃತಿ ಇಷ್ಟೂ ವರ್ಷಗಳಿಂದ ಉಳಿದುಕೊಂಡು ಬಂದಿದೆ. ಈ ಕನ್ನಡ ಸಂಸ್ಕೃತಿ ಎಂಬುದು ಇತರ ಎಲ್ಲಾ ಸಂಸ್ಕೃತಿಗಳಂತೆ ಚಲನಶೀಲವೇ ಆಗಿರುವುದರಿಂದ ಆಯಾ ಕಾಲಕ್ಕೆ ತಕ್ಕಂತೆ ಬದಲಾಗುತ್ತಾ ತನ್ನನ್ನು ಉಳಿಸಿಕೊಂಡಿದೆ. ಹೈದರ್, ಟಿಪ್ಪು, ಬಹಮನಿ ಸುಲ್ತಾನರ ಆಡಳಿತದ ಅವಧಿಯಲ್ಲಿ ದಖ್ಖನಿ ಆಡಳಿತ ಭಾಷೆಯಾಗಿತ್ತು. ಹಾಗೆಂದು ಕನ್ನಡ ಮರೆಯಾಗಲಿಲ್ಲ. ಬ್ರಿಟಿಷರ ಆಳ್ವಿಕೆಯ ಅವಧಿಯಲ್ಲಿ ಇಂಗ್ಲಿಷ್ ಆಳುವವರ ಭಾಷೆಯಾಗಿತ್ತು. ಆಗಲೂ

ಕನ್ನಡ ಮರೆಯಾಗಲಿಲ್ಲ. ಈ ಸವಾಲುಗಳನ್ನು ಎದುರಿಸಲು ನಮ್ಮ ಭಾಷೆಯನ್ನು ಸಿದ್ಧಗೊಳಿಸಬೇಕು. ಅಂದರೆ ಹೊಸ ಪರಿಕಲ್ಪನೆಗಳನ್ನು ನಮ್ಮ ಭಾಷೆಯಲ್ಲಿ ಚರ್ಚಿಸಬೇಕು. ಇದರ ಬದಲಿಗೆ ಕಂಪ್ಯೂಟರನ್ನು 'ಗಣಕಯಂತ್ರ' ಎಂದರೆ ಮಾತ್ರ ಕನ್ನಡವಾಗುತ್ತದೆ ಎಂಬ ಕೂದಲು ಸೀಳುವ ಕೆಲಸವನ್ನು ಮಾತ್ರ ಮಾಡುತ್ತಾ ಹೋದರೆ ಕನ್ನಡವನ್ನು ಶಿಶುವಿಹಾರದಿಂದ ಸ್ನಾತಕೋತ್ತರ ಮಟ್ಟದವರೆಗೆ ಕಡ್ಡಾಯ ಮಾಡಿದರೂ ಅದು ಉಳಿಯಲಾರದು.

ಒಂದನೇ ತರಗತಿಯಿಂದ ಇಂಗ್ಲಿಷ್ ಕಲಿತವರೆಲ್ಲರೂ ಇಂಗ್ಲಿಷ್ ಪಂಡಿತರಾಗಿ ಬಿಡುವುದಿಲ್ಲ. ನನ್ನ ತಲೆಮಾರಿನ ಹಾಗೂ ಅದಕ್ಕೂ ಹಿಂದಿನವರೆಲ್ಲರೂ ಹಳ್ಳಿಯ ಶಾಲೆಗಳಲ್ಲಿ ಕನ್ನಡ ಮಾಧ್ಯಮದಲ್ಲಿಯೇ ಕಲಿತು ಬಂದು ಕಾಲೇಜು ಮಟ್ಟದಲ್ಲಿ ಇಂಗ್ಲಿಷ್‌ಗೆ ತೆರೆದುಕೊಂಡವರು. ಇವರೆಲ್ಲರೂ ಇಂಗ್ಲಿಷ್‌ನ್ನು ಸಲೀಸಾಗಿ ಬಳಸುತ್ತಿಲ್ಲವೇ? ಹೌದು, ಕೆಲವು ಸಂದರ್ಭಗಳಲ್ಲಿ ಇಂಗ್ಲಿಷ್ ಒಂದು ಸವಾಲು ಎನಿಸಿತ್ತು. ಆದರೆ ಇದು ಮೀರಲಾರದ ಸವಾಲಾಗಿರಲಿಲ್ಲ.

ಪ್ರಸ್ತುತ ನಮಗಿರುವ ಸವಾಲು ಮಾಧ್ಯಮದ್ದಲ್ಲ, ಶಿಕ್ಷಣದ್ದು. ಈ ಸವಾಲನ್ನು ಎದುರಿಸುವ ಬದಲಿಗೆ ಅದರಿಂದ ತಪ್ಪಿಸಿಕೊಳ್ಳುವ ಹಾದಿಯಾಗಿ ಮಾಧ್ಯಮದ ಕುರಿತ ಚರ್ಚೆಯನ್ನು ಅನವಶ್ಯಕವಾಗಿ ಬೆಳಸುತ್ತಿದ್ದೇವೆ. ನಮ್ಮ ಕನ್ನಡ ಮತ್ತು ಇಂಗ್ಲಿಷ್ ಮಾಧ್ಯಮ ಶಿಕ್ಷಣಗಳೆರಡೂ ಈ ಕಾಲದ ಅಗತ್ಯವನ್ನು ಪೂರೈಸುತ್ತಿಲ್ಲ. ಜಗತ್ತು ಹಳ್ಳಿಯಾಗಿರುವ ಈ ಹೊತ್ತಿನಲ್ಲಿಯೂ ನಮ್ಮ ಜ್ಞಾನದ ಎಲ್ಲೆಗಳನ್ನು ವಿಸ್ತರಿಸಿಕೊಳ್ಳಲು ಅಗತ್ಯವಿರುವ ಪರಿಕರಗಳನ್ನು ಒದಗಿಸುತ್ತಿಲ್ಲ. ಈ ಮೂಲಭೂತ ಪ್ರಶ್ನೆಗೆ ಉತ್ತರ ಕಂಡುಕೊಳ್ಳದೆ ಮಾಧ್ಯಮ ಯಾವುದಾಗಿರಬೇಕು ಎಂಬುದರ ಕುರಿತು ಚರ್ಚಿಸುವುದರಲ್ಲಿ ಯಾವ ಅರ್ಥವೂ ಇಲ್ಲ. ಬದುಕಿಗೆ ಪ್ರಸ್ತುತವಾಗದ ಶಿಕ್ಷಣವನ್ನು ಯಾವ ಮಾಧ್ಯಮದಲ್ಲಿ ಒದಗಿಸಿದರೂ ಅದು ವ್ಯರ್ಥವೇ.

* * * * *

## ಸದಾ ನೆನಪಿರಲಿ

1. ಗೌರವಿಸಬೇಕಾದ 3 ವಿಷಯ – **1. ತಾಯಿ 2. ತಂದೆ 3. ಗುರು**
2. ಜಾಗ್ರತೆ ವಹಿಸಬೇಕಾದ 3 ವಿಷಯ – **1. ಪತ್ನಿ 2. ಐಶ್ವರ್ಯ 3. ಬುದ್ಧಿವಂತಿಕೆ**
3. ಮರೆಯಲಾರದ 3 ವಿಷಯ – **1. ಸಾಲ 2. ಕರ್ತವ್ಯ 3. ಕಾಯಿಲೆ**
4. ನಿಯಂತ್ರಣದಲ್ಲಿಡಬೇಕಾದ 3 ವಿಷಯ – **1. ಆಸೆ 2. ಕಾಮ 3. ನಾಲಿಗೆ**
5. ಸಂತೋಷಕ್ಕಾಗಿ ಬಿಡಬೇಕಾದ 3 ವಿಷಯ – **1. ಕೋಪ 2. ಮತ್ಸರ 3. ಅಸೂಯೆ**
6. ದೂರವಿಡಬೇಕಾದ 3 ವಿಷಯ – **1. ಕೆಟ್ಟವರ ಸಹವಾಸ 2. ಸ್ವಾರ್ಥ 3. ದುರಾಸೆ**
7. ಸಮೃದ್ಧಿ ಹೊಂದಿರುವ 3 ವಿಷಯ – **1. ದೇವರು 2. ವಿದ್ಯೆ 3. ಕಠಿಣ ಪರಿಶ್ರಮ**
8. ಎಲ್ಲರೂ ಕಾಯಬೇಕಾದ 3 ವಿಷಯ – **1. ಸಮಯ 2. ಸಾವು 3. ಗಿರಾಕಿ**
9. ಅರಿವಿನ ಮೂರು ವಿಷಯ – **1. ಕ್ಷಮೆ 2. ಮರೆಯುವಿಕೆ 3. ಗೆಳೆತನ**
10. ಹಿಂದಕ್ಕೆ ಬಾರದ 3 ವಿಷಯ – **1. ಬಿಟ್ಟಬಾಣ 2. ಆಡಿದ ಮಾತು 3. ಹೋದ ಪ್ರಾಣ**

* * * * *

# ಮರೀಚಿಕೆಯಾಗುತ್ತಿರುವ ರಾಮರಾಜ್ಯ

**– ದರ್ಶನ್ ಕೆ. ಆರ್, ತೃತೀಯ ಬಿ.ಎಸ್ಸಿ.,**

ನಮ್ಮ ನಾಡಿನ ಪುರಾಣ ಕೃತಿಯಾದ ವಾಲ್ಮೀಕಿ ರಚಿಸಿರುವ ರಾಮಾಯಣದಲ್ಲಿ ಚಿತ್ರಿತನಾಗಿರುವ ರಾಮ, ಆತನ ವ್ಯಕ್ತಿತ್ವವನ್ನು ಕಂಡಾಗ ಆತ ಸಾರ್ವಕಾಲೀಕ ಪುರುಷನಾಗಿ ನಮ್ಮ ಎದುರಿಗೆ ಬಂದು ನಿಲ್ಲುತ್ತಾನೆ. ಶ್ರೀರಾಮನು ಒಬ್ಬ ಆದರ್ಶ ರಾಜನಾಗಿದ್ದನು. ಅವನು ಪ್ರಜೆಗಳ ಕಾಳಜಿಯನ್ನು ತಾಯಿಯಂತೆ ತೆಗೆದುಕೊಳ್ಳುತ್ತಿದ್ದನು. ತಾಯಿ ಹೇಗೆ ಸತತವಾಗಿ ಮಕ್ಕಳ ಅಭ್ಯುದಯ ಮತ್ತು ಅವರ ಜೀವನ ಆನಂದಮಯವಾಗಿರಬೇಕೆಂದು ಪ್ರಯತ್ನಿಸುತ್ತಿರುತ್ತಾಳೆಯೋ, ಹಾಗೆಯೇ ಶ್ರೀರಾಮನು ಸತತವಾಗಿ ಪ್ರಜೆಗಳ ವಿಚಾರವನ್ನು ಮಾಡುತ್ತಿದ್ದನು. ಆದ್ದರಿಂದಲೇ ರಾಮರಾಜ್ಯದಲ್ಲಿ ಜನರು ಆನಂದದಿಂದ ಇದ್ದರು. ಮಿತ್ರರೇ ನಮಗೆ ಇಂತಹ ರಾಜನು ಬೇಕಲ್ಲವೇ. ಹಾಗಿದ್ದರೆ ಅದಕ್ಕಾಗಿ ನಾವು ಕೂಡ ಆದರ್ಶವಾಗಿರಬೇಕು. ಇಂದಿಗೂ ಜನರಿಗೆ ರಾಮರಾಜ್ಯ ಭಾವೀ ಆದರ್ಶ ರಾಜ್ಯದ ನಾಗರಿಕರೆಂದು ಪ್ರಸ್ತುತ ಸಂದರ್ಭದಲ್ಲಿ ರಾಮನ ಎಲ್ಲ ಗುಣಗಳನ್ನು ನಮ್ಮಲ್ಲಿ ಅಳವಡಿಸಿಕೊಳ್ಳಲು ಪ್ರಯತ್ನಿಸೋಣ ಮತ್ತು ಆದಷ್ಟು ಬೇಗ ರಾಮರಾಜ್ಯ ಬರಲಿ ಎಂದು ಶ್ರೀರಾಮನ ಚರಣಗಳಲ್ಲಿ ಪ್ರಾರ್ಥಿಸೋಣ.

ಈಗಿನ ಕಾಲದ ಬಹುತೇಕ ರಾಜಕಾರಣಿಗಳು ನೀತಿಭ್ರಷ್ಟರು, ಸುಳ್ಳು ಮಾತನಾಡುವವರು, ಗೂಂಡಾಗಿರಿ ಮಾಡುವವರು ಮತ್ತು ಹೊಲಸು ವರ್ತನೆಯನ್ನು ಹೊಂದಿರುವವರಾಗಿದ್ದಾರೆ. ಇಂತಹ ರಾಜಕಾರಣಿಗಳೂ ಇದ್ದಾರೆ. ಇಂತಹ ಸನ್ನಿವೇಶದಲ್ಲಿ ಸಾಮಾನ್ಯ ಜನರು ಸಂತೋಷದಿಂದ ಇರಬಲ್ಲರೇ? ಸಾಮಾನ್ಯ ಜನರನ್ನು ತಾಯಿಯಂತೆ ಕಾಳಜಿ ವಹಿಸುವುದಕ್ಕಿಂತ ಜನರು ಸಂಪತ್ತನ್ನು ಲೂಟಿ ಮಾಡುವ ಲೂಟಿಕೋರರಾಗಿದ್ದಾರೆ. ಇಂತಹ ಲೂಟಿಕೋರರನ್ನು ಪದಚ್ಯುತಗೊಳಿಸುವುದೇ ಶ್ರೀರಾಮನಿಗೆ ಇಷ್ಟವಾಗುವುದು. ರಾಮನು ರಾವಣನನ್ನು ಸಂಹಾರ ಮಾಡಿದ ನಂತರ ರಾಮರಾಜ್ಯ ಬಂದಿತು. ಈ ರಾವಣರೂಪಿ ರಾಜಕಾರಣಿಗಳನ್ನು ನಿರ್ಮೂಲನೆ ಮಾಡಿದಾಗ ಮಾತ್ರ ರಾಮರಾಜ್ಯವು ಬರಲು ಸಾಧ್ಯವಿದೆ.

ಶ್ರೀರಾಮನು ಸ್ವತಃ ಧರ್ಮಪಾಲನೆಯನ್ನು ಮಾಡುತ್ತಿದ್ದನು. ಅವನು ಸ್ವತಃ ಪ್ರತಿಯೊಂದು ಕೃತಿಯನ್ನು ಧರ್ಮರೀತ್ಯಾ ನಡೆಸುತ್ತಿದ್ದನು ಮತ್ತು ಪ್ರಜೆಗಳಿಗೆ ಆಚರಿಸಲು ಹೇಳುತ್ತಿದ್ದನು. ಧರ್ಮವೆಂದರೇ ಈಶ್ವರ, ಪ್ರತಿಯೊಂದು ಕೃತಿಯು ಈಶ್ವರನಿಗೆ ಪ್ರಿಯವಾಗುವ ರೀತಿಯಲ್ಲಿ ಮಾಡುತ್ತಿದ್ದನು. ಧರ್ಮಪಾಲನೆಯನ್ನು ಮಾಡುವಾಗ 'ದೇವರೇ ಎಲ್ಲವನ್ನು ನನ್ನಿಂದ ಮಾಡಿಸಿಕೊಳ್ಳುತ್ತಿದ್ದಾನೆ' ಎನ್ನುವ ಅರಿವು ಸತತ ಇರುತ್ತದೆ.

ಇಂದಿನ ರಾಜಕಾರಣಿಗಳು ಧರ್ಮವನ್ನು ನಂಬುವುದಿಲ್ಲ. ಅವರು 'ನಾವೇ ಸರ್ವಸ್ವವಾಗಿದ್ದೇವೆ. ದೇವರು ಧರ್ಮ ಎಂದೇನು ಇಲ್ಲ, ನಾವೇ ಮಾಡುವವರು, ಮಾಡಿಸುವವರಾಗಿದ್ದೇವೆ' ಎನ್ನುತ್ತಾರೆ. ದೇವರನ್ನು ನಂಬದ ರಾಜರ ರಾಜ್ಯದಲ್ಲಿ ಜನರು ಆನಂದದಿಂದ ಇರಲು ಸಾಧ್ಯವೇ ಇಲ್ಲ. ಆದ್ದರಿಂದಲೇ ಇಂದು ನಮಗೆ ಎಲ್ಲ ಕಡೆಯಿಂದಲೂ ದುಃಖ ಮತ್ತು ಒತ್ತಡಯುಕ್ತ ಜೀವನವನ್ನು ಜೀವಿಸುವ ಜನರು ಕಾಣಿಸುತ್ತಾರೆ. ಶ್ರೀರಾಮನ ಆದರ್ಶ ರಾಜ್ಯವು ಮರೀಚಿಕೆಯಾಗದೆ ಆದಷ್ಟು ಬೇಗ ಸ್ಥಾಪಿತಗೊಳ್ಳಲಿ ಎಂಬುದು ನನ್ನ ಆಶಯ.

* * * * *

- ಯಾರನ್ನೂ ಮೆಚ್ಚಿಸುವ ಸಲುವಾಗಿ ಕರ್ತವ್ಯದಿಂದ ಎಂದಿಗೂ ವಿಮುಖರಾಗಬಾರದು.

  **– ಸರ್ದಾರ್ ವಲ್ಲಭಭಾಯಿ ಪಟೇಲ್**
- ಪ್ರತಿಭೆಗೆ ಶಾಸ್ತ್ರ ಜ್ಞಾನವಿದ್ದರೆ ವಜ್ರಕ್ಕೆ ಕುಂದಣವಿಟ್ಟಂತೆ. **–ತ.ರಾ.ಸು**
- ಮೌನ ಅನಂತದಷ್ಟು ಆಳವಾದುದು. ಮಾತು ಕಾಲದಷ್ಟು ಕ್ಷಣಿಕ. **–ಥಾಮಸ್ ಕಾರ್ಲೈಲ್.**
- ಆತ್ಮದ ನಿರ್ಬಂಧ ಬೆಳವಣಿಗೆಗೆ ನೆರವು ನೀಡುವುದೇ ಶಿಕ್ಷಣ. **–ಡಾ. ಎಸ್. ರಾಧಾಕೃಷ್ಣನ್**

## ಇವರ ಬದುಕಿನ ಕನಸಿಗೂ ಬೆಲೆ ಸಿಗುವಂತಿರಲಿ..!

–ಮಂಜು ಕೆ. ಜಿ., ತೃತೀಯ ಬಿ.ಕಾಂ.

ಪ್ರತಿಯೊಬ್ಬರಲ್ಲೂ ಶಿಕ್ಷಣವೆಂಬ ದೀಪವನ್ನು ಹಚ್ಚುವ ಅಗತ್ಯತೆ ಇದೆ. ಏಕೆಂದರೆ ಶಿಕ್ಷಣವೆಂಬುದು ಅಂಧಕಾರದಲ್ಲಿರುವ ಜಗತ್ತಿಗೆ ದಾರಿದೀಪವಾಗಬಲ್ಲದು. ನಾನು ಈ ಹಿಂದೆ ಓದಿದ ದಿನಪತ್ರಿಕೆಯಲ್ಲಿ ಬಂದ ಶಿಕ್ಷಣ ಕುರಿತ ನೈಜಕತೆಯ ಚಿತ್ರಣವನ್ನು ನೋಡಿದಾಗ ಓದುಗರ ಮನಸ್ಸನ್ನು ಕಲಕುವಂತಿತ್ತು.

'ನನ್ನೊಳಗೂ ಶಾಲೆಗೆ ಹೋಗಬೇಕೆನ್ನುವ ಕನಸಿದೆ. ಪರಿಸ್ಥಿತಿ ಆ ಕನಸಿನ ಉಸಿರಾಟ ನಿಲ್ಲುವಂತೆ ಮಾಡಿದೆ. ನಾನು ಮಣ್ಣು ಕೆಲಸ ಮಾಡುವವರ ಮಗಳು, ನಮ್ಮೂರು ಹೆಸರಿಗೆ ಶಿವಮೊಗ್ಗವಾದರೂ ವಾಸ್ತವದಲ್ಲಿ ನಾವು ಒಂದೆಡೆ ನೆಲೆಯೂರುವ ಮಂದಿಯಲ್ಲ. ಎಲ್ಲಿ ಕೈಗೆ ಕೆಲಸ ಸಿಗುವುದೋ ಅಲ್ಲಿಗೆ ನನ್ನಪ್ಪ, ನನ್ನವ್ವ ಗಂಟುಮೂಟೆ ಕಟ್ಟಿಕೊಂಡು ಹೊರಡುತ್ತಾರೆ. ನಾನು ಅವರನ್ನು ಹಿಂಬಾಲಿಸುತ್ತೇನೆ.

ನಾನೇನು ಅವರೊಂದಿಗೆ ಮಣ್ಣು ಕೆಲಸ ಮಾಡುತ್ತಿರಲಿಲ್ಲ. ಆ ಶಕ್ತಿಯೂ ನನಗಿಲ್ಲ. ನಾನಿನ್ನೂ ಹತ್ತು ವರ್ಷ ತುಂಬಿದ ಪುಟ್ಟ ಹುಡುಗಿ, ನನಗೊಬ್ಬ ಪುಟ್ಟ ತಮ್ಮ, ಅವನನ್ನು ನೋಡಿಕೊಳ್ಳುವುದೇ ನನ್ನ ಕೆಲಸವಾಗಿತ್ತು. ಆದರೆ ನನ್ನ ಕನಸು ಅದಕ್ಕಾಗಿ ಕಮರುತ್ತಿರುವುದು ಸುಳ್ಳಲ್ಲ. ಪರಿಚಯವಿಲ್ಲದ ಪಟ್ಟಣದ ರಸ್ತೆಗಳಲ್ಲಿ ಒಬ್ಬಳೆ ಅಬ್ಬೇಪಾರಿಯಂತೆ ಅಲೆಯುವಾಗ ಕಣ್ಣಿಗೆ ಬೀಳುವ ಶಾಲೆಗೆ ಹೋಗಿ ಬರುವ ಮಕ್ಕಳು ನನ್ನ ನೋವ ಸೆಲೆ ಬತ್ತದಂತೆ ನೋಡಿಕೊಳ್ಳುತ್ತಾರೆ.

ನಾನು ಹೀಗೆ ಕನಸು ಹಿಸುಕಿಸಿ ಬೆಳೆದು ದೊಡ್ಡವಳಾಗುತ್ತೇನೆ. ನನ್ನವ್ವನಂತೆ ನಾನೂ ಹಾರೆ, ಗುದ್ದಲಿ ಹಿಡಿದು ಮಣ್ಣು ಅಗೆಯುತ್ತೇನೆ. ತೆಗೆಯುವ ಗುಂಡಿಯೊಳಗೆ ನನ್ನ ಕನಸುಗಳನ್ನು ಹೂತಿಡುತ್ತ ಬದುಕಿನ ಪಯಣ ಮುಂದುವರೆಸುತ್ತೇನೆ'.

ಪುಟ್ಟಹುಡುಗಿಯ ಈ ಮೇಲಿನ ಮನದಾಳದ ಭಾವನೆಗಳನ್ನು ನೋಡಿದಾಗ ತಂದೆತಾಯಿಯಂದಿರು ಮಕ್ಕಳನ್ನು ತಮ್ಮ ಕೆಲಸಗಳಲ್ಲೇ ತೊಡಗುವಂತೆ ಮಾಡುವುದರ ಬದಲು, ಆ ಪುಟ್ಟ ಮಕ್ಕಳಲ್ಲಿ ಜ್ಞಾನದ ಕಿರಣಗಳನ್ನು ಮೂಡಿಸಲು ಶಿಕ್ಷಣವನ್ನು ನೀಡಲು ಶ್ರಮಿಸಬೇಕು.ಜೊತೆಗೆ ಸಮಾಜವು ಇಂತಹ ಮಕ್ಕಳ ಏಳ್ಗೆಗೆ ಶ್ರಮಿಸಬೇಕು.

* * * * *

## ನೆಮ್ಮದಿ ಎಲ್ಲಿದೆ...? ಹುಡುಕುವ ಪ್ರಯತ್ನದಲ್ಲಿ...!

–ಶುಭ, ಪ್ರಥಮ ಬಿ.ಎ.,

ಈ ಪ್ರಕೃತಿ ಹಾಗೂ ಈ ಬದುಕಿನ ಮೂಲಗುಣ ಅಥವಾ ಧರ್ಮ ಒಂದೇ. ಅದು ಆನಂದ, ಅದು ಸಂತಸ, ಅದು ನೆಮ್ಮದಿ. ನಮ್ಮ ಜೀವನದ ಮೂಲ ಉದ್ದೇಶ ಅಧಿಕಾರ ಪಡೆಯುವುದಲ್ಲ, ದುಡ್ಡು ಗಳಿಸುವುದಲ್ಲ, ಸುಖ, ಶಾಂತಿ, ನೆಮ್ಮದಿಯಿಂದ ಇರುವುದು. ಆರೋಗ್ಯವನ್ನ ಕಾಪಾಡಿಕೊಂಡು ಸಂತೋಷವನ್ನ ಹೊಂದುವುದು.

ಆದರೆ ನಿಮ್ಮ ಸುತ್ತಮುತ್ತಲಿರುವ ಜನರನ್ನು ನೋಡಿ ಅವರು ನೆಮ್ಮದಿಯ ಬದುಕನ್ನ ಸಾಗಿಸುತ್ತಿದ್ದಾರಾ ಎಂದು ನಿಮಗನ್ನಿಸುತ್ತದಾ? ಅದರ ಮಾತನ್ನು ಬಿಡಿ, ನೀವಾದರೂ ಸಹ ನೆಮ್ಮದಿ, ಆನಂದದಿಂದ ಇದ್ದೀರಾ? ಈ ಎರಡೂ ಪ್ರಶ್ನೆಗಳಿಗೆ ಒಂದೇ ಉತ್ತರ. ಅದೇನೆಂದರೆ 'ಇಲ್ಲ' ಎಂಬುದು.

ಬದುಕಿನ ಮೂಲಧರ್ಮ ಆನಂದ ಹೊಂದುವುದೇ ಅದರೂ, ಯಾರಲ್ಲೂ ಆನಂದವಿಲ್ಲ. ಎಲ್ಲರ ಮುಖ ದುಃಖತಪ್ತ, ಮನಸ್ಸು ರೋಗಗ್ರಸ್ತ. ಅಂದರೆ ಈ ಜೀವನದ ಮೂಲಧರ್ಮವನ್ನ ಈಡೇರಿಸುವುದರಲ್ಲಿ ಮೂಲಗುಣವನ್ನ ತಲುಪುವಲ್ಲಿ ನಾವು ವಿಫಲರಾಗಿದ್ದೇವೆ ಅಂದಂತಾಯಿತು?

ನಮ್ಮೆಲ್ಲ ಆಶಯ ಸಾಕಾರಾತ್ಮವಾಗಿದ್ದರೂ, ಅಂದರೆ ಆನಂದವನ್ನು ಪಡೆಯುವುದೇ ಆಗಿದ್ದರೂ, ನಮಗಿನ್ನೂ ಅದು ಕೈಗೆಟುಕಿಲ್ಲ. ಆನಂದ ನಮ್ಮ ಕೈಗೆ ಸಿಗದೇ ತಪ್ಪಿಸಿಕೊಂಡು ಹೋಗುತ್ತಿದೆ. ಯಾಕೆಂದರೆ ನಮ್ಮ ಆಶಯ

ಸಕಾರತ್ಮಕವಾಗಿದ್ದರೂ, ನಾವು ಮಾಡುವ ಕೆಲಸ/ಕ್ರಿಯೆ ಮಾತ್ರ ನಕಾರಾತ್ಮಕವಾಗಿಯೇ ಇದೆ. ಆಸೆಯೇ ದುಃಖಕ್ಕೆ ಮೂಲವೆಂಬುದು ಗೊತ್ತಿದ್ದರೂ ಎಲ್ಲರೂ ಆಸೆಪಟ್ಟು, ದುಃಖವನ್ನು ಆಹ್ವಾನಿಸುವಂತೆ, ಆನಂದಕ್ಕಾಗಿ, ನೆಮ್ಮದಿಗಾಗಿ ಕನವರಿಸುವುದರಿಂದ ವಂಚಿತರಾಗುತ್ತೇವೆ.

ಉದಾಹರಣೆಗೆ ಒಂದು ಸೈಟಿಲ್ಲದವರು ಸದಾ ಕೊರಗುತ್ತಲೇ ಇರುತ್ತಾರೆ. ಇಷ್ಟೆಲ್ಲಾ ದುಡಿದರೂ ಒಂದು ಸೈಟು ಮಾಡಿಕೊಳ್ಳಲು ಆಗಲಿಲ್ಲವಲ್ಲ ಅಂತ ತಮ್ಮನ್ನೇ ಹಳಿದುಕೊಳ್ಳುತ್ತಾರೆ. ನಿಮ್ದೂ ಒಂದು ಬಾಳ್ವೆನಾ, ಸೈಟು ಅಂತ ಒಂದು ಚೂರು ಭೂಮಿ ನಿಮಗಿಲ್ಲವಲ್ಲ, ಅಂತ ಹೆಂಡತಿ ಬೈಯುತ್ತಾಳೆ. 'ಪಕ್ಕದ ಮನೆಯವರನ್ನು ನೋಡಿ ನಮ್ಮ ಕಣ್ಣ ಮುಂದೆಯೇ ಸೈಟು ಖರೀದಿಸಿ ಮನೆಯನ್ನು ಕಟ್ಟಿಸಿದರು' ಎಂದು ಕುಕ್ಕುತ್ತಾಳೆ.

ಸರಿ ಸೈಟಿಲ್ಲದ, ಮನೆಯಿಲ್ಲದ ಇವರಂತೂ ನೆಮ್ಮದಿಯಿಂದ ಇರಲು ಸಾಧ್ಯವಿಲ್ಲ ಎಂದಂತಾಯಿತು. ಮನೆಯಿರುವ ಪಕ್ಕದ ಮನೆಯವರಾದರೂ ನೆಮ್ಮದಿಯಿಂದ ಇದ್ದಾರಾ? ಉಹುಂ! ಖಂಡಿತಾ ಇಲ್ಲ. ಅವರನ್ನು ಕೇಳಿ ಅವರು ತಮ್ಮ ಕಷ್ಟದ ಸರಮಾಲೆಯನ್ನೇ ಬಿಚ್ಚಿಡುತ್ತಾರೆ. ಹೆಂಡತಿ, ಬಂಧುಗಳು ಹೇಳಿದರೆಂದು ಸಾಲ ಮಾಡಿ ಮನೆ ಕಟ್ಟಿಸಿದೆ. ಈಗ ಬಡ್ಡಿ, ಅಸಲು ತೀರಿಸಲು ಪರದಾಡುತ್ತಿದ್ದೇವೆ. ಹೊಟ್ಟೆಬಟ್ಟೆಗೆ ಕಟ್ಟಿಕೊಂಡು ಹಣ ಕೂಡಿಟ್ಟರೂ ಸಾಲ ತೀರುತ್ತಿಲ್ಲ. ಪಕ್ಕದ ಮನೆಯವರೇ ವಾಸಿ ಎಂದು ತಮ್ಮ ಪಾಡನ್ನು ನೆನೆದು ವ್ಯಥೆಪಡುತ್ತಿರುತ್ತಾರೆ.

ಸೈಟು, ಮನೆ ಇಲ್ಲದವರಿಗೂ ನೆಮ್ಮದಿ ಇಲ್ಲ. ಸೈಟು, ಮನೆ ಇರುವವರಿಗೂ ನೆಮ್ಮದಿ ಇಲ್ಲ. ಹಾಗಾದರೆ ನೆಮ್ಮದಿ ಎಲ್ಲಿದೆ ಅಂದರೆ ಇವರ ಜೀವನದ ಉದ್ದೇಶ ಏನು? ಹೇಗಾದರೂ ಮಾಡಿ ನೆಮ್ಮದಿಯನ್ನು ಹಾಳು ಮಾಡಿಕೊಳ್ಳುವುದೇ?

ಖಂಡಿತ ಇಲ್ಲ. ಆದರೆ ನಮ್ಮೆಲ್ಲ ಕೆಲಸಗಳು / ಕ್ರಿಯೆಗಳು ನೆಮ್ಮದಿಯನ್ನು ಕೆಡಿಸಿಕೊಳ್ಳುವುದು, ಹೇಗೆ ಎಂಬ ದಿಕ್ಕಿನಲ್ಲಿಯೇ ಹೊರಟಿರುತ್ತವೆ. ಎಂಥ ವಿಪರ್ಯಾಸ ನೋಡಿ ಈ ನೆಮ್ಮದಿ ಎಂಬ ಮೂರಕ್ಷರದ ಮಾತೆಲ್ಲಾ ಇಲ್ಲ. ಅದು ಎಲ್ಲಿ ಯಾವಾಗ ಬೇಕಾದರೂ ಸಿಗುವಂಥದ್ದು. ಏಕೆಂದರೆ ಅದು ನಮ್ಮೊಳಗೇ ಇದೆ. ಹುಡುಕಿದರೆ ನಿಮಗೆ ಸಿಗುತ್ತದೆ. ಒಟ್ಟಿನಲ್ಲಿ ನಮಗೆ ನಮ್ಮ ಮನಸಿನಲ್ಲಿ ನಾವು ಬದುಕುತ್ತಿರುವ ರೀತಿಯ ಬಗ್ಗೆ ತೃಪ್ತ ಭಾವನೆ ಮೂಡಬೇಕು ಅಷ್ಟೆ. ಆಗ ತಾನಾಗಿಯೇ ನೆಮ್ಮದಿ ಲಭಿಸುವುದು.

* * * * *

## ನಮ್ಮ ಜೀವನದಲ್ಲಿ ತಂದೆ-ತಾಯಿಯ ಪಾತ್ರ ಎಷ್ಟು ಮುಖ್ಯ?

–ಪ್ರತಿಭಾ.ಈ., ಪ್ರಥಮ ಬಿ.ಕಾಂ.,

ಪುರಾತನ ಕಾಲದಿಂದಲೂ ತಂದೆ-ತಾಯಿಗಳ ಬಗ್ಗೆ ಕೊಂಡಾಡಿದ್ದಾರೆ. ಭೂಮಿಯ ಮೇಲೆ ತಂದೆ ತಾಯಿಯರ ಪಾತ್ರ ವಿಶೇಷವಾಗಿದೆ. ಅವರ ಪ್ರೀತಿ, ವಾತ್ಸಲ್ಯ, ಕರುಣೆ ಆಕಾಶಕ್ಕೂ ಮೀರಿದ ಸಂಗತಿ. ಇದಕ್ಕಾಗಿಯೇ 'ತಾಯಿಯೇ ದೇವರು' ಎಂದಿದ್ದಾರೆ ತಿಳಿದವರು. ಹಾಗೆಯೇ ತಾಯಿಯನ್ನೇ ಮೊದಲ ಗುರು, ಮನೆಯೇ ಮೊದಲ ಪಾಠಶಾಲೆ. ಪ್ರತಿಯೊಬ್ಬರ ಜೀವನದಲ್ಲಿ ತಂದೆ ತಾಯಿಯರು ಮಾರ್ಗದರ್ಶಕರಾಗಿರುತ್ತಾರೆ. ಮಗುವನ್ನು ಸತ್ಪ್ರಜೆಯನ್ನಾಗಿ ಮಾಡುವ ಜವಾಬ್ದಾರಿ, ಕರ್ತವ್ಯ ತಂದೆತಾಯಿಯರದ್ದಾಗಿದೆ. ಇದರಿಂದ ಅವರ ಪ್ರೀತಿಗೆ ಬೆಲೆಕಟ್ಟಲು ಸಾಧ್ಯವಿಲ್ಲ. ಅಲ್ಲದೇ ನಾವು ಇಡುವ ಪ್ರತಿ ಹೆಜ್ಜೆಯಲ್ಲಿಯೂ ತಂದೆ ತಾಯಿಯರ ಪಾತ್ರ ಅತ್ಯಂತ ಮುಖ್ಯವಾದುದಾಗಿದೆ.

ಒಂದು ಉದಾಹರಣೆ ಎಂದರೆ ಪುರಾತನ ಕಾಲದಲ್ಲಿ ಶ್ರವಣಕುಮಾರನು ತನ್ನ ತಂದೆತಾಯಿಯನ್ನು ಹೆಗಲ ಮೇಲೆ ಹೊತ್ತು ಸಾಗುತ್ತಾನೆ. ಅಲ್ಲದೇ ಅವನು ಸಾಯುವ ಮುನ್ನವು ತನ್ನ ತಂದೆತಾಯಿ ಕ್ಷೇಮವನ್ನು ಬೇಡುತ್ತಾನೆ. ಇದರಲ್ಲಿಯೇ ಕಾಣಬಹುದು ಅವನ ತಂದೆ-ತಾಯಿಗಳ ಮೇಲಿರುವ ಪ್ರೀತಿ, ವಾತ್ಸಲ್ಯ, ಗೌರವ ಎಷ್ಟಿದೆಯೆಂದು. ಹಾಗೆಯೇ ನಾವು ಏನೇ ಮಾಡಿದರು ನಮ್ಮ ತಂದೆತಾಯಿಯ ಋಣವನ್ನು ತೀರಿಸಲು ಸಾಧ್ಯವಾಗುವುದಿಲ್ಲ. ಅದಕ್ಕಾಗಿಯೇ ಉಪ್ಪಿಗಿಂತ ರುಚಿಯಿಲ್ಲ, ತಾಯಿಗಿಂತ ಬಂಧುವಿಲ್ಲ ಎಂದಿದ್ದಾರೆ.

ತಾಯಿಯು ನವಮಾಸ ಹೊತ್ತು, ಹೆತ್ತು ನಮಗೆ ರಕ್ಷಣೆ ನೀಡಿ ಕಾಪಾಡುತ್ತಾಳೆ. ಅವಳು ಕಷ್ಟ ದುಃಖ ನೋವನ್ನ ಬಚ್ಚಿಟ್ಟು ನಮ್ಮನ್ನು ಸಾಕುತ್ತಾಳೆ. ಅವಳಿಗೆ ಅವಳ ನೋವು ಏನೇನು ಇಲ್ಲ. ನಮಗೆ ನೋವಾದರೆ ಅವರು ಸಹಿಸುವುದಿಲ್ಲ. ಹಾಗೆಯೇ ತಂದೆಯು ಕೂಡ ಹಗಲು ರಾತ್ರಿ ಎನ್ನದೇ, ಬಿಸಿಲು ಮಳೆ ಎನ್ನದೇ ಕಷ್ಟ ಪಟ್ಟು ದುಡಿದು ನಮ್ಮನ್ನು ಸಾಕಿ ಸಲಹುತ್ತಾರೆ. ಹಾಗೆಯೇ ನಮ್ಮ ಏಳಿಗೆಗೆ ಶ್ರಮಿಸುತ್ತಾರೆ ಮಕ್ಕಳ ಜೀವನಕ್ಕೆ ತಂದೆ ತಾಯಿಯೇ ದಾರಿದೀಪ ನಮ್ಮ ಜೀವನಕ್ಕೆ ಹಾದಿಯಾಗಿದ್ದಾರೆ. ಇದರ ಅಡಿಯಲ್ಲಿ ಮಕ್ಕಳ ಉನ್ನತ ಶಿಕ್ಷಣಕ್ಕಾಗಿ, ಕಷ್ಟಪಟ್ಟು ದುಡಿದು ಸಾಕುತ್ತಾರೆ. ಹಾಗೆಯೇ ನಮ್ಮ ತಂದೆ ತಾಯಿಯು ನಾವು ಏನೇ ಕೇಳಿದರೂ ಕಷ್ಟಪಟ್ಟು ತಂದು ಕೊಡುವ ಪ್ರಯತ್ನ ಮಾಡುತ್ತಾರೆ. ಅಲ್ಲದೆ ತಂದೇ ತರುತ್ತಾರೆ. ನಮಗೆ ಕಾಯಿಲೆಯಾದರೆ ಅವರು ನೋವನ್ನು ಅನುಭವಿಸಿ ಅಳುತ್ತಾರೆ.

ಇಂತವರನ್ನು ಈಗಿನ ಕಾಲದಲ್ಲಿ ಮಕ್ಕಳು ವೃದ್ಧಶ್ರಾಮಕ್ಕೆ ದೂಡುತ್ತಿದ್ದಾರೆ. ಇದು ನ್ಯಾಯವೇ? ಈ ಮೇಲೆ ನಾನು ತಿಳಿಸಿರುವಂತೆ ಅವರು ನಮಗೆಲ್ಲ ಎಷ್ಟು ಮಾಡಿದ್ದಾರೆ. ಆದರೆ ನಾವು ಅವರಿಗಾಗಿ ಏನು ಮಾಡಿದ್ದೇವೆ. ದಯವಿಟ್ಟು ಯೋಚಿಸಿ, ಅವರನ್ನು ವೃದ್ಧಾಶ್ರಮಕ್ಕೆ ದೂಡಬೇಡಿ. ಅವರನ್ನ ನಿಮ್ಮ ಮಕ್ಕಳಂತೆ ನೋಡಿಕೊಳ್ಳಿ, ಅವರು ನಮ್ಮನ್ನು ಹೇಗೆ ನೋಡಿಕೊಂಡಿದ್ದರೊ ಅದಕ್ಕಿಂತ ಹೆಚ್ಚಾಗಿ ನೋಡಿಕೊಳ್ಳಿ. ಇಷ್ಟೇ ನಾನು ನಿಮ್ಮೆಲ್ಲರಲ್ಲಿಯೂ ಪ್ರಾರ್ಥಿಸಿಕೊಳ್ಳುವುದು. ನಮ್ಮ ಜೀವನದಲ್ಲಿ ನಡೆದಾಡುವ ದೇವರುಗಳೆಂದರೆ ತಂದೆ ತಾಯಿಯೇ ಸರಿ. ಅವರಿಗೆ ನನ್ನ ಅನಂತ ಅನಂತ ವಂದನೆಗಳು.

* * * * *

- ಮೂರ್ಖನು ಕಷ್ಟವನ್ನಾದರೂ ಸಹಿಸಿಯಾನು, ಉದ್ಯೋಗಶೀಲನಾಗಲಾರ **–ಕಥಾ ಸರಿತ್ಸಾಗರ**
- ಚಂಚಲೆಯಾದ ಮಿಂಚು ಮೊದಲು ಪ್ರಕಾಶವನ್ನು ಕೊಡುತ್ತದೆ ಬಳಿಕ ವಜ್ರಾಘಾತವನ್ನುಂಟು ಮಾಡುತ್ತದೆ. **–ಹರ್ಷಚರಿತೆ**
- ನಿಜವಾದ ಮಿತ್ರರಿಗೆ ಬಡತನದ ವೇಳೆಯಲ್ಲಿ ಮಾತ್ರ ಮನುಷ್ಯ ಕಾಣುತ್ತಾನೆ. **–ಇಟಲಿ ಗಾದೆ**
- ಬೇರೆ ಸಂಸ್ಕೃತಿಯನ್ನು ಪ್ರೀತಿಸು: ಆದರೆ ನಿನ್ನ ಸಂಸ್ಕೃತಿಯಲ್ಲಿ ಜೀವಿಸು. **–ಜವಹರ್‌ಲಾಲ್ ನೆಹರು**
- ವಿದ್ಯೆಯ ಮುಖ್ಯ ಗುರಿಯೆಂದರೆ ಇತರರೊಡನೆ ಕೂಡಿ ಬಾಳುವ ಕಲೆಯನ್ನು ಕಲಿಸುವುದು **–ಡಾ. ಸರ್ವಪಲ್ಲಿ ರಾಧಾಕೃಷ್ಣನ್.**
- ಮತ್ತೆ ಮತ್ತೆ ಯಾವ ಪುಸ್ತಕ ಓದುತ್ತೇವೆಯೋ ಅದು ಉತ್ತಮವಾದ ಪುಸ್ತಕ. **–ಜಾನ್ ರಸ್ಕಿನ್.**
- ನನ್ನನ್ನು ಇತರರು ಪ್ರೀತಿಸಬೇಕೆನ್ನುವುದಕ್ಕಿಂತಲೂ ನಾನು ಇತರರನ್ನು ಪ್ರೀತಿಸುವುದು ಮುಖ್ಯ **–ಸ್ಪೆನ್ಸರ್ ಜಾನ್‌ಸನ್.**
- ಬಿರುದು ಮನುಷ್ಯನಿಗೆ ಗೌರವ ತರುವುದಿಲ್ಲ, ಮನುಷ್ಯನು ಬಿರುದಿಗೆ ಗೌರವ ತರಬೇಕು. **–ಮಾಕಿಯ ವಿಲಿ.**
- ಶಾಂತ ಸಾಗರವು ಯಾವತ್ತೂ ಶ್ರೇಷ್ಠ ನಾವಿಕರನ್ನು ಸೃಷ್ಟಿಸಲಾರದು **–ಅನಾಮಿಕ.**
- ನಿಸ್ವಾರ್ಥ ಜೀವನ ಅನುಸರಿಸಲು ಸಹನೆ ಅವಶ್ಯ ಸಾಧನ. **–ಸ್ವಾಮಿ ವಿವೇಕಾನಂದ.**
- ಆಕಾಶದೆತ್ತರ ಸಾಧನೆ ಮಾಡಿದರೂ ನಿಂತ ನೆಲವನ್ನು ಮರೆಯಬಾರದು. **–ನೀತಿಸಾರ**
- ದುಷ್ಟ ವಿಚಾರಗಳು ದುಃಖಕ್ಕೆ ಮೂಲ ಕಾರಣ **–ಬುದ್ಧ**
- ಕಾರ್ಯನಿರತನಿಗೆ ಕೆಲಸವೇ ವಿಶ್ರಾಂತಿ, ಸೋಮಾರಿಗೆ ಸುಮ್ಮನೆ ಕುಳಿತಿರುವುದೇ ಕೆಲಸ **–ಸ್ವಾಮಿ ವಿವೇಕಾನಂದರು**
- ಸ್ನೇಹಿತನ ತಪ್ಪನ್ನು ಗುಟ್ಟಾಗಿ ತಿದ್ದು ಆದರೆ ಆತನನ್ನು ಎಲ್ಲರ ಮುಂದೆ ಹೊಗಳು. **–ನೀತಿಸಾರ**

# ಕಾಲದ ಶಕ್ತಿಯ ಮುಂದೆ ಎಲ್ಲರೂ ಕೈಕಟ್ಟಿ ಕೂರಲೇಬೇಕು..!

–ರಮ್ಯ ಕೆ. ವಿ. ಪ್ರಥಮ ಬಿ.ಕಾಂ

ಮುಗ್ಧ ಮನುಷ್ಯರೇ ನಾವು! ಕಾಣುವ ಮನುಷ್ಯರನ್ನೇ ಪ್ರೀತಿಸಲಾರದವರೂ, ಕಾಣದಿರುವ ದೇವರನ್ನು ಪ್ರೀತಿಸಲು ಸಾಧ್ಯವೇ? ಆ ದೇವರಿಗೆ ಹಲವಾರು ಹೆಸರುಗಳನ್ನು ಕಟ್ಟಬಹುದು. ಪರಮಾತ್ಮನ ನಾಮಕ್ಕೆ ಅಗೋಚರ ಶಕ್ತಿ ಇದೆ. ಅದೇ ಜನರು ಸಾವಿರಾರು ಕಲ್ಲಿನ ಮೂರ್ತಿಗಳನ್ನು ಕೆತ್ತಿಸಿ, ಅವುಗಳನ್ನು ಪರಮಾತ್ಮನ ಹೆಸರಿನಿಂದ ಕರೆದಾಕ್ಷಣಕ್ಕೆ ಅದಕ್ಕೆ ಯಾವುದೇ ರೀತಿಯ ಶಕ್ತಿ ಇರುತ್ತದೆ ಎಂದು ನಂಬುವುದು ನಮ್ಮ ಮೂರ್ಖತನವೇ ಹೊರತು ಬೇರೆನೂ ಅಲ್ಲ. ಕೆಲವು ಮನುಜರು ನಡೆದಾಡುವ ರಸ್ತೆಯಲ್ಲಿ ಒಂದು ಕಲ್ಲನ್ನು ಇಟ್ಟು, ಅದಕ್ಕೆ ಹೂವನ್ನು ಮುಡಿಸಿದರೆ ಅದನ್ನು ದೇವರು ಎಂದು ನಂಬಿ ಅದಕ್ಕೂ ನಮಸ್ಕರಿಸುತ್ತಾರೆ. ಅಷ್ಟೇ ಅಲ್ಲದೆ ಒಂದು ಕಲ್ಲಿನ ಮೂರ್ತಿಗೆ ಪುಷ್ಪವನ್ನು ಇಟ್ಟು, ದೇವರನ್ನು ಹೂ ಕೇಳುತ್ತಾರೆ. ಪರಮಾತ್ಮನ ಮೂರ್ತಿಗೆ ಹೂವನ್ನು ನೀರಿನಲ್ಲಿ ಅಂಟಿಸಿರುತ್ತಾರೆ. ಆ ಪುಷ್ಪದಲ್ಲಿದ್ದ ನೀರಿನ ಅಂಶ ಆರಿಹೋದ ಮೇಲೆ ಹೂಗಳು ಒಂದೊಂದಾಗಿ ಮೂರ್ತಿಯಿಂದ ಕೆಳಗೆ ಬೀಳುತ್ತವೆ. ಇದನ್ನೆ ಮುಗ್ಧ ಜನರು ಹೂ ಬಲಗಡೆ ಬಿದ್ದರೆ ಒಳಿತು ಆಗುತ್ತದೆ ಎಂದು ಅಥವಾ ಎಡಗಡೆ ಬಿದ್ದರೆ ಕೆಡಕು ಸಂಭವಿಸಬಹುದೆಂದು ತಿಳಿದು, ಪರಮಾತ್ಮ ನಮ್ಮ ಮೇಲೆ ದಯೆ ತೋರಿ ಹೂಗಳ ಮೂಲಕ ಅದನ್ನು ತಿಳಿಸಿದ್ದಾನೆ ಎಂದು ನಂಬುತ್ತಾರೆ.

ಬಸವಣ್ಣ ಹೇಳಿದಂತೆ ನಮ್ಮಲ್ಲೇ ದೇವರನ್ನು ಹುಡುಕಬೇಕು. ದೇಹವನ್ನೇ ದೇಗುಲವನ್ನಾಗಿ ಮಾಡಿಕೊಂಡು ನಿರ್ಮಲ ಮನಸ್ಸಿನಿಂದ ಪೂಜಿಸಿದರೆ ದೇವರನ್ನು ಕಾಣಬಹುದು. ತೋರಿಕೆಯ ಪೂಜೆ, ನಂಬಿಕೆ, ಆಡಂಬರದ ಆಚರಣೆಗಳಿಂದ ಏನೂ ಪ್ರಯೋಜನವಿಲ್ಲ. ಪೃಥ್ವಿಯು ನಮ್ಮ ನಿಜವಾದ ದೇವರು. ಭೂಮಿ ತಾಯಿಯಲ್ಲಿರುವ ಪ್ರಾಣಿ ಪಕ್ಷಿಯನ್ನು ಮತ್ತು ಸಸ್ಯಗಳನ್ನು ಸಹ ತನ್ನ ಸ್ವಂತ ಮಕ್ಕಳಂತೆ ನೋಡು, ಅಂದು ಆ ಕ್ಷಣ ನಿನಗೆ ದೇವರ ನಿಜವಾದ ಶಕ್ತಿ, ಅವನ ಮರ್ಮ ಮತ್ತು ಆತನ ನಿಜವಾದ ರೂಪ ನಿನಗೆ ಪ್ರತ್ಯಕ್ಷವಾಗಿ ಕಾಣುತ್ತದೆ. ಅಂದು ನೀನು ನಿಜವಾಗಿಯೂ ಒಬ್ಬ ನಾಗರೀಕ ಮನುಷ್ಯನಾಗುವೆ. ಇದನ್ನು ಬಿಟ್ಟು ಶ್ರದ್ಧೆಯಿಲ್ಲದ ಪೂಜೆ, ನಿಷ್ಠೆಯಿಲ್ಲದ ಕೆಲಸ, ಆಡಂಬರವಾಗಿರುವ ಭಕ್ತಿಯಿದ್ದರೆ ಏನು ಪ್ರಯೋಜನ.

ಮನುಷ್ಯರು ತನ್ನ ದೇಹ ದಂಡಿಸಿ, ಜ್ಞಾನ ದಂಡಿಸಿ ಕಾಯಕ ಮಾಡುತ್ತಾರೆ. ದೇಹವನ್ನು ದಂಡಿಸಿದರೆ ಸಕ್ಕರೆ ಕಾಯಿಲೆ, ರಕ್ತದೊತ್ತಡ (ಬಿ.ಪಿ), ಕೊಬ್ಬು ಬೆವರಿನ ರೂಪದಲ್ಲಿ ದೇಹದಿಂದ ದೂರ ಹೋಗುತ್ತವೆ. ಉತ್ತಮವಾದ ಆರೋಗ್ಯ ಬರುತ್ತದೆ. ಧ್ಯಾನ ಏಕಾಗ್ರತೆ ಜ್ಞಾನ ಬೆಳೆಯುತ್ತದೆ. ನಮ್ಮಿಂದ ಯಾರು ಕಿತ್ತುಕೊಳ್ಳಲಾಗದ ಅತ್ಯಂತ ಅಮೂಲ್ಯವಾದ ಶಕ್ತಿ ಎಂದರೆ ಅದು ಜ್ಞಾನ. ಜ್ಞಾನವನ್ನು ದಂಡಿಸಿ ಕೆಲಸ ಮಾಡಿದರೆ ಅತ್ಯಂತ ಜ್ಞಾನದ ಸಂಪತ್ತು ಲಭಿಸುತ್ತದೆ. ಅದನ್ನು ಮರೆತು ಸೋಮಾರಿ ಜೀವನವನ್ನು ನಡೆಸುತ್ತ ಕಾಲಹರಣ ಮಾಡಿ, ದೇವರ ಮೇಲೆ ಬಾರ ಹಾಕಿದರೆ ಉತ್ತಮ ಫಲಿತಾಂಶ ನಿರೀಕ್ಷಿಸುವುದು ಮೂರ್ಖತನ. ನಾವು ಮಾಡುವ ಕಾಯಕದಲ್ಲೇ ಕೈಲಾಸ ಕಾಣುವ ಪ್ರಯತ್ನ ಮಾಡಬೇಕು.

ಸ್ವಾರ್ಥದ ಬುದ್ಧಿಯನ್ನು ತೊರೆದು ನಾನು, ನನ್ನದು, ನಾನೇ ಸರ್ವಶ್ರೇಷ್ಠ ಎಂಬ ಅಹಂಕಾರವನ್ನು ತೊರೆದು ದೇಹವನ್ನು ದಂಡಿಸಿ, ದುಡಿದರೆ ನಮಗೆ ನೆಮ್ಮದಿಯ ಜೀವನ ದೊರಕುತ್ತದೆಯೇ ಹೊರತು, ಸೋಮಾರಿ ಜೀವನದಿಂದಲ್ಲ. ರಾಮಯಣದಲ್ಲಿ ಕೈಕೆ ತನ್ನ ಮಗ ರಾಜನಾಗಿ ಮೆರೆಯಬಹುದೆಂಬ ಆಸೆಯು ನಿರಾಸೆಗೊಂಡಿತು. ಆದರೆ ಆಕೆಯ ಮಗ ತನ್ನ ಅಣ್ಣನ ಪಾದರಕ್ಷೆಯಿಟ್ಟು ರಾಜ್ಯವನ್ನಾಳಿ ಸತ್ಯ, ತ್ಯಾಗವನ್ನು ಎತ್ತಿ ಹಿಡಿದನು. ದೇವರು ಮನುಷ್ಯನ ಸತ್ಯಕ್ಕೆ, ನಿಷ್ಠೆಗೆ, ತ್ಯಾಗಕ್ಕೆ ಆಸಕ್ತಿ ಪಡುವವನೇ ವಿನಹ, ಆತನ ದುರಾಸೆ ಮತ್ತು ಅಹಂಕಾರಕಲ್ಲ. ಕಾಲ ಮನುಷ್ಯರಿಗೆ ಜ್ಞಾನವನ್ನು ತಿಳಿಸಿಕೊಡುತ್ತದೆ. ಅಲ್ಲದೆ ತಾನೇ ಸರ್ವಶ್ರೇಷ್ಠನೆಂದು ಬೀಗಿದರೆ ಅಜ್ಞಾನದಲ್ಲಿ ಮುಳುಗಿಸುತ್ತದೆ.

ಜೀವನದ ಕಾಲಚಕ್ರದಲ್ಲಿ ನಡೆಯುವುದನ್ನು ತಡೆಯಲು ಯಾರಿಂದಲೂ ಸಾಧ್ಯವಿಲ್ಲ. ನಾವು ನಿಸ್ವಾರ್ಥದಿಂದ, ಶ್ರದ್ಧೆಯಿಂದ ಕೆಲಸ ಮಾಡಿದರೆ ನಮ್ಮ ಬದುಕು ಸುಗಮವಾಗಿ ಸಾಗುತ್ತದೆಯೇ ವಿನಹಃ ಅಂಧಕಾರದ ನಡತೆಯಿಂದಲ್ಲ. ಸ್ವಾರ್ಥದಿಂದ ಈ ದೇಶ ನಮ್ಮದು. ಆ ದೇಶ ನಮ್ಮದು, ಈ ಜಾತಿ ನಮ್ಮದು, ಆ ಜಾತಿ ನಮ್ಮದು ಎಂದು

ಬದುಕುವ ಸ್ವಾರ್ಥ ಜನರ ನಾಶಕ್ಕೆ ಕಾಲವೇ ಕಾರಣವಾಗುತ್ತದೆ. ಕಾಲದ ಮುಂದೆ ಯಾವ ವ್ಯಕ್ತಿಯೂ ಶಾಶ್ವತವಲ್ಲ. ಕಾಲ ಯಾರನ್ನೂ ಬಿಡುವುದಿಲ್ಲ. ನಿಮ್ಮ ಯಶಸ್ವಿಗಾಗಿ ನಿಮ್ಮನ್ನು ನೀವು ನಂಬಿ. ನಿಮ್ಮ ಜ್ಞಾನವನ್ನು ನೀವು ನಂಬಿ. ಅಂದು ನೀವು ನಿಜವಾದ ಮನುಷ್ಯರಾಗುತ್ತಿರ, ನಿಮ್ಮ ಜೀವನ ಸಾರ್ಥಕಮಯವಾಗುತ್ತದೆ.

* * * * *

## ಕುತೂಹಲಕಾರಿಯಾಗಿರುವ ರಾಷ್ಟ್ರಪತಿ ಭವನ

–ಕನ್ಯಾಕುಮಾರಿ ಕೆ. ದ್ವಿತೀಯ ಬಿ.ಎ.,

ರಾಷ್ಟ್ರಪತಿ ಭವನ (ರಾಷ್ಟ್ರಪತಿ ಅವರ ನಿವಾಸ) ಒಂದು ಭವ್ಯ ಸೌಧ ಹಾಗೂ ಭಾರತದ ರಾಷ್ಟ್ರಪತಿಗಳ ಅಧಿಕೃತ ನಿವಾಸ. ಇದು ಭಾರತದ ರಾಜಧಾನಿ ನವದೆಹಲಿಯಲ್ಲಿದೆ. ರಾಷ್ಟ್ರಪತಿ ಭವನದ ಭವ್ಯತೆಗೆ ಅನೇಕ ಆಯಾಮಗಳಿವೆ. ಅದರ ಶಿಲ್ಪಕಲೆ ಬೆರಗುಗೊಳಿಸುವಂತಹದು. ಪ್ರಜಾಪ್ರಭುತ್ವದ ಅಧ್ಯಕ್ಷರ ನಿವಾಸವೆಂಬ ಪವಿತ್ರ ಭಾವನೆಯೂ ಸೇರಿಕೊಂಡುಬಿಟ್ಟಿದೆ. ಅದರ ಗಾತ್ರ ವೈಶಾಲ್ಯ ಮತ್ತು ಭವ್ಯತೆಯ ಅಂಶಗಳಲ್ಲಿ ಜಗತ್ತಿನ ಕೆಲವೇ ದೇಶಗಳ ಅಧ್ಯಕ್ಷರ ನಿವಾಸಗಳು ಮಾತ್ರ ಇದಕ್ಕೆ ಸಾಟಿಯಾದಾವು.

ಈ ಭವ್ಯ ಕಟ್ಟಡಕ್ಕೆ ನಾಲ್ಕು ಅಂತಸ್ತುಗಳಿವೆ. ಮುಖ್ಯ ಕಟ್ಟಡದಲ್ಲಿ ಸಭಾಂಗಣ, ಅತಿಥಿ ಕೊಠಡಿಗಳು,ರಾಷ್ಟ್ರಪತಿಗಳ ಅಧಿಕೃತ ನಿವಾಸ ಹಾಗೂ ಕಛೇರಿಗಳೂ ಸೇರಿದಂತೆ 340 ಕೊಠಡಿಗಳಿವೆ. ಅದರ ನೆಲದ ವಿಸ್ತೀರ್ಣ 2,00,000 ಚದರ ಅಡಿಗಳು. ಈ ಭವನವನ್ನು ಕಟ್ಟಲು 700 ದಶಲಕ್ಷ ಇಟ್ಟಿಗೆಗಳನ್ನು, 3 ದಶಲಕ್ಷ ಘನ ಅಡಿ ಕಲ್ಲನ್ನು ಬಳಸಲಾಗಿದೆ. ಆದರೆ ಈ ಕಟ್ಟಡ ನಿರ್ಮಾಣದಲ್ಲಿ ಉಕ್ಕನ್ನು ಬಳಸದೇ ಇರುವುದು ವಿಶೇಷ. ಇದನ್ನು ಸುತ್ತುವರಿದಂತೆ 130 ಹೆಕ್ಟೇರು (320 ಎಕರೆ) ವಿಶಾಲವಾದ ತೋಟವಿದೆ (ಮೊಘಲ್ ತೋಟ).ತೆರೆದ ಬಹು ವಿಸ್ತೀರ್ಣವಾದ ಜಾಗವಿದೆ. ಅಂಗರಕ್ಷಕರ, ಸಿಬ್ಬಂದಿ ವರ್ಗದ, ಕುದುರೆಲಾಯ, ಇತರೆ ಕಛೇರಿಗಳು ಮತ್ತು ಉಪಯೋಗಕ್ಕೆ ಬರುವ ರಚನೆಗಳು ಗೋಡೆಯ ಪರಿಧಿಯಲ್ಲೇ ಇವೆ. ಮುಖ್ಯ ಅರಮನೆಯನ್ನು ಹಿಂದೆ 'ವೈಸ್‌ರಾಯ್ ನಿವಾಸ' ಎನ್ನಲಾಗುತ್ತಿತ್ತು. ಅದರ ವಿಸ್ತೀರ್ಣವನ್ನು ಪರಿಗಣಿಸಿದರೆ ಜಗತ್ತಿನ ಯಾವುದೇ ದೇಶದ ಅಧ್ಯಕ್ಷರ ನಿವಾಸಕ್ಕಿಂತ ಅತಿ ದೊಡ್ಡದು ಎನ್ನಬಹುದು.

ಈಗಿನ ರಾಷ್ಟ್ರಪತಿ ಭವನ ಹಿಂದೆ ಬ್ರಿಟಿಷ್ ವೈಸ್‌ರಾಯ್ ವಾಸಿಸುತ್ತಿದ್ದ ಗೃಹವಾಗಿತ್ತು. ಅದರ ಶಿಲ್ಪಿ ಎಡ್ವಿನ್ ಲ್ಯಾಂಡ್‌ಸೀರ್ ಲುಟ್ಯೆಯೆನ್ಸ್. ಬ್ರಿಟಿಷ್ ವೈಸ್‌ರಾಯ್‌ಗಾಗಿ ನವದೆಹಲಿಯಲ್ಲಿ ನಿವಾಸ ಕಟ್ಟಬೇಕೆಂಬ ತೀರ್ಮಾನವನ್ನು 1911ರಲ್ಲಿ ದೆಹಲಿ ದರ್ಬಾರ್‌ನಲ್ಲಿ ತೆಗೆದುಕೊಳ್ಳಲಾಯಿತು. ಅದೇ ವರ್ಷ ಭಾರತದ ರಾಜಧಾನಿಯನ್ನು ಕಲ್ಕತ್ತೆಯಿಂದ ದೆಹಲಿಗೆ ವರ್ಗಾಯಿಸಲು ತೀರ್ಮಾನವೂ ಆಗಿತ್ತು. ಭಾರತದಲ್ಲಿ ಬ್ರಿಟಿಷ್ ಆಳ್ವಿಕೆಯನ್ನು ಶಾಶ್ವತಗೊಳಿಸಬೇಕೆಂಬ ಇಚ್ಚೆಯಂತೆ ಈ ಕಟ್ಟಡವನ್ನು ನಿರ್ಮಾಣ ಮಾಡಲಾಗಿತ್ತು. ಈ ಕಟ್ಟಡವನ್ನು ನೋಡಿದವರಿಗೆ ಇದು ಸರ್ವಕಾಲಿಕ ದರ್ಬಾರ್ ನಿರ್ಮಾಣವಾಗಿದೆ ಎಂಬ ಭಾವನೆ ಬರುತ್ತದೆಂದು ವಿಮರ್ಶಕರು ನುಡಿದಿದ್ದಾರೆ.

1950ರ ಜನವರಿ 26ರಂದು ಅದನ್ನು ಪ್ರಜಾಪ್ರಭುತ್ವದ ಶಾಶ್ವತ ಸಂಸ್ಥೆಯಾಗಿ ವರ್ಗಾಯಿಸಲಾಯಿತು. ಆಗ ಡಾ॥ ರಾಜೇಂದ್ರ ಪ್ರಸಾದ್ ಅವರು ಭಾರತದ ಮೊದಲ ರಾಷ್ಟ್ರಪತಿಗಳಾದರು. ಅವರು ಈ ನಿವಾಸಕ್ಕೆ ಬರುವುದರ ಮೂಲಕ ನಮ್ಮ ದೇಶದ ಸಂವಿಧಾನವನ್ನು ಕಾಪಾಡುವುದು, ರಕ್ಷಿಸುವುದು ಮತ್ತು ಸಮರ್ಥಿಸಿದಂತಾಯಿತು. ಆ ದಿನದಿಂದ ಈ ಕಟ್ಟಡವನ್ನು ಅಂದರೆ ರಾಷ್ಟ್ರಪತಿಗಳ ನಿವಾಸವನ್ನು ರಾಷ್ಟ್ರಪತಿ ಭವನ ಎಂದು ಮರುನಾಮಕರಣ ಮಾಡಲಾಯಿತು.

ಎಡ್ವರ್ಡ್, ಲುಟ್ಯೆಯೆನ್ಸ್ ಅಲ್ಲದೆ ಪ್ರಧಾನ ಶಿಲ್ಪಿ ಮತ್ತು ಮುಖ್ಯ ಎಂಜಿನಿಯರಾಗಿದ್ದ ಹ್ಯೂ ಕೀಲಿಂಗ್ ಹಾಗೂ ಭಾರತದ ಅನೇಕ ಗುತ್ತಿಗೆದಾರರು ಈ ಕಟ್ಟಡದ ನಿರ್ಮಾಣದ ಕೆಲಸದಲ್ಲಿ ಪಾಲ್ಗೊಂಡಿದ್ದರು. ಹೀಗೆ ನಮ್ಮ ದೇಶದ ಪ್ರಥಮ ಪ್ರಜೆಯಾದ ರಾಷ್ಟ್ರಪತಿಯ ವಾಸನೆಲೆ ಕುತೂಹಲಕಾರಿ ವಿಚಾರಗಳನ್ನು ಒಳಗೊಂಡಿದೆ.

* * * * *

# ಕರ್ನಾಟಕದ / ಕನ್ನಡದ ಮೊದಲುಗಳು

–ಅನು ಆರ್., ಪ್ರಥಮ ಬಿ.ಕಾಂ.,

- ಅಚ್ಚ ಕನ್ನಡದ ಮೊದಲ ದೊರೆ – ಮಯೂರವರ್ಮ
- ಕನ್ನಡದ ಮೊದಲ ಕವಿ (ಆದಿ ಕವಿ) – ಪಂಪ
- ಕನ್ನಡದ ಮೊದಲ ಶಾಸನ – ಹಲ್ಮಿಡಿ ಶಾಸನ
- ತ್ರಿಪದಿ ಛಂದಸ್ಸಿನ ಮೊದಲ ಬಳಕೆಯಿರುವ ಶಾಸನ – ಬಾದಾಮಿಯ ಕಪ್ಪೆ ಅರಭಟ್ಟನ ಶಾಸನ
- ಕನ್ನಡದ ಮೊದಲ ಲಕ್ಷಣಗ್ರಂಥ (ಮೊದಲ ಕೃತಿ) – ಕವಿರಾಜಮಾರ್ಗ (ಶ್ರೀವಿಜಯ)
- ಕನ್ನಡದ ಮೊದಲ ಮಹಾಕಾವ್ಯ – ಪಂಪನ ಆದಿಪುರಾಣ
- ಕನ್ನಡದ ಮೊದಲ ಗದ್ಯ ಕೃತಿ – ವಡ್ಡಾರಾಧನೆ (ಭ್ರಾಜಿಷ್ಣು)
- ಕನ್ನಡದ ಮೊದಲ ನಾಟಕ – ಮಿತ್ರಾವಿಂದ ಗೋವಿಂದ (ಸಿಂಗಾರಾರ್ಯ)
- ಕನ್ನಡದ ಮೊದಲ ಜ್ಯೋತಿಷ್ಯ ಗ್ರಂಥ – ಜಾತಕ ತಿಲಕ (ಶ್ರೀಧರಾಚಾರ್ಯ)
- ಕನ್ನಡದ ಮೊದಲ ಸ್ವತಂತ್ರ ಸಾಮಾಜಿಕ ಕಾದಂಬರಿ – ಇಂದಿರಾಬಾಯಿ (ಗುಲ್ವಾಡಿ ವೆಂಕಟರಾವ್)
- ಕನ್ನಡದ ಮೊದಲ ಪತ್ತೇದಾರಿ ಕಾದಂಬರಿ – ಚೋರಗ್ರಹಣ ತಂತ್ರ (ಎಂ.ವೆಂಕಟಕೃಷ್ಣಯ್ಯ)
- ಕನ್ನಡದ ಮೊದಲ ಛಂದೋಗ್ರಂಥ – ನಾಗವರ್ಮನ ಛಂದೋಂಬುದಿ
- ಕನ್ನಡದ ಮೊದಲ ಸ್ವತಂತ್ರ ಸಾಮಾಜಿಕ ನಾಟಕ – ಇಗ್ಗಪ್ಪ ಹೆಗ್ಗಡೆಯ ವಿವಾಹ ಪ್ರಹಸನ
- ಕನ್ನಡದಲ್ಲಿ ಮೊದಲು ಅಚ್ಚಾದ ಕೃತಿ – ಎ ಗ್ರಾಮರ್ ಆಫ್ ದಿ ಕನ್ನಡ ಲಾಂಗ್ವೇಜ್
- ಕನ್ನಡದ ಮೊದಲ ಪತ್ರಿಕೆ – ಮಂಗಳೂರು ಸಮಾಚಾರ
- ಕನ್ನಡದಲ್ಲಿ ಮೊದಲು ಸಣ್ಣಕಥೆ ಬರೆದವರು – ಪಂಜೆ ಮಂಗೇಶರಾಯರು
- ಕನ್ನಡ ಸಾಹಿತ್ಯ ಪರಿಷತ್ತಿನ ಮೊದಲ ಅಧ್ಯಕ್ಷರು – ಹೆಚ್.ವಿ.ನಂಜುಂಡಯ್ಯ
- ಕನ್ನಡದ ಮೊದಲ ವಚನಕಾರ – ದೇವರ ದಾಸಿಮಯ್ಯ / ಜೇಡರ ದಾಸಿಮಯ್ಯ
- ಹೊಸಗನ್ನಡದ ಮೊದಲ ಮಹಾಕಾವ್ಯ – ಶ್ರೀ ರಾಮಾಯಣ ದರ್ಶನಂ
- 'ಜ್ಞಾನಪೀಠ ಪ್ರಶಸ್ತಿ' ಪಡೆದ ಮೊದಲ ಕನ್ನಡಿಗ – ಕುವೆಂಪು
- 'ಪಂಪ ಪ್ರಶಸ್ತಿ' ಪಡೆದ ಮೊದಲ ಕನ್ನಡಿಗ – ಕುವೆಂಪು
- ಕನ್ನಡದ ಮೊದಲ 'ಕನ್ನಡ–ಇಂಗ್ಲೀಷ್ ನಿಘಂಟು' ರಚಿಸಿದವರು – ಆರ್.ಎಫ್.ಕಿಟೆಲ್
- ಕರ್ನಾಟಕ ರತ್ನ ಪ್ರಶಸ್ತಿ ಪಡೆದ ಮೊದಲ ಕವಿ – ಕುವೆಂಪು
- ಕನ್ನಡದ ಮೊದಲ ವಿಶ್ವಕೋಶ – ವಿವೇಕ ಚಿಂತಾಮಣಿ
- ಕನ್ನಡದ ಮೊದಲ ಪ್ರಾಧ್ಯಾಪಕರು – ಟಿ.ಎಸ್. ವೆಂಕಣ್ಣಯ್ಯ
- ಕನ್ನಡದ ಮೊದಲ ಗಣಿತಶಾಸ್ತ್ರಜ್ಞ – ಮಹಾವೀರಾಚಾರ್ಯ
- ಕನ್ನಡ ಲಿಪಿಯನ್ನು ಕಂಪ್ಯೂಟರ್‌ಗೆ ಅಳವಡಿಸಿ ಸರಳ ಫಾಂಟ್ ರಚನೆ ಮಾಡಿದವರು– ಕೆ. ಪಿ. ರಾವ್
- ಮೈಸೂರು ರಾಜ್ಯದ ಮೊದಲ ಮುಖ್ಯಮಂತ್ರಿ – ಕೆ. ಸಿ. ರೆಡ್ಡಿ
- ಮೈಸೂರು ರಾಜ್ಯದ ಮೊದಲ ರಾಜ್ಯಪಾಲ – ಜಯಚಾಮರಾಜೇಂದ್ರ ಒಡೆಯರ್
- ಏಕೀಕೃತ ಕರ್ನಾಟಕದ ಮೊದಲ ಮುಖ್ಯಮಂತ್ರಿ – ಎಸ್. ನಿಜಲಿಂಗಪ್ಪ

☞ ಮೊದಲಿಗೆ 'ಭಾರತರತ್ನ' ಪ್ರಶಸ್ತಿ ಪಡೆದ ಕನ್ನಡಿಗ – ಸರ್. ಎಂ. ವಿಶ್ವೇಶ್ವರಯ್ಯ

☞ ಕನ್ನಡದ ಮೊದಲ ರಾಷ್ಟ್ರಕವಿ – ಎಂ. ಗೋವಿಂದ ಪೈ

☞ ಕನ್ನಡ ಕೆಲಸಕ್ಕೆ ಡಾಕ್ಟರೇಟ್ ಪಡೆದ ಮೊದಲ ವಿದೇಶಿಗ – ಫರ್ಡಿನೆಂಟ್ ಕಿಟಲ್

☞ ಕನ್ನಡದ ಮೊದಲ ವೈದ್ಯಗ್ರಂಥ – ಕೀರ್ತಿವರ್ಮನ ಗೋವೈದ್ಯ

☞ ಕನ್ನಡದ ಮೊದಲ ಮಕ್ಕಳ ವಿಶ್ವಕೋಶ – ಬಾಲ ಪ್ರಪಂಚ

☞ ಕನ್ನಡದ ಮೊದಲ ವ್ಯಾಕರಣ ಗ್ರಂಥ – ಕೇಶಿರಾಜನ ಶಬ್ಧಮಣಿದರ್ಪಣ

☞ ಕನ್ನಡದ ಮೊದಲ ಐತಿಹಾಸಿಕ ಕಾದಂಬರಿ – ಮುದ್ರಾಮಂಜೂಷ (ಕೆಂಪುನಾರಾಯಣ)

☞ ಕನ್ನಡ ನಾಡಿನ ಮೊದಲ ಕನ್ನಡ ರಾಜವಂಶ – ಕದಂಬ

☞ ಕರ್ನಾಟಕದ ಮೊದಲ ವಿಶ್ವವಿದ್ಯಾಲಯ – ಮೈಸೂರು ವಿ. ವಿ

☞ ಕರ್ನಾಟಕದಲ್ಲಿ ಮೊದಲಿಗೆ ವಿದ್ಯುತ್ ಸಂಪರ್ಕ ಪಡೆದ ನಗರ – ಬೆಂಗಳೂರು

☞ ಕರ್ನಾಟಕದ(ಏಷ್ಯಾದ) ಮೊದಲ ಜಲವಿದ್ಯುತ್ ಕೇಂದ್ರ – ಶಿವನಸಮುದ್ರ

☞ ರಾಷ್ಟ್ರಪ್ರಶಸ್ತಿ ಪಡೆದ ಮೊದಲ ಕನ್ನಡ ಚಲನಚಿತ್ರ – ಬೇಡರಕಣ್ಣಪ್ಪ

☞ ಕನ್ನಡದ ಮೊದಲ ಐತಿಹಾಸಿಕ ಚಲನಚಿತ್ರ – ರಣಧೀರ ಕಂಠೀರವ

☞ ಕನ್ನಡದ ಮೊದಲ ಮೂಕಿಚಿತ್ರ – ಮೃಚ್ಛಕಟಿಕ

☞ ಕನ್ನಡದ ಮೊದಲ ಕಾದಂಬರಿ ಆಧಾರಿತ ಚಲನಚಿತ್ರ – ಕರುಣೆಯೇ ಕುಟುಂಬದ ಕಣ್ಣು

☞ ಕನ್ನಡದ ಮೊದಲ ಸಾಮಾಜಿಕ ಚಲನಚಿತ್ರ – ಸಂಸಾರ ನೌಕೆ

* * * * *

# ನಮ್ಮೀ ಕಾಲೇಜು (ಕವಿತೆ)

–ಅನು .ಆರ್, ಪ್ರಥಮ ಬಿ.ಕಾಂ.,

ನಾಗಮಂಗಲ ರೋಡಿನಲ್ಲಿ
ಬುದ್ಧಿಜೀವಿಗಳ ಊರಿನಲ್ಲಿ
ಶಾಂತಿ, ಶಿಸ್ತು, ಸಂಯಮಗಳ ನೆರಳಿನಲ್ಲಿ
ಕಲಿಯುವ ವಿದ್ಯಾರ್ಥಿಗಳ ಮನಸ್ಸಿನಲ್ಲಿ
ನೆಲೆ ನಿಂತಿರುವುದು ನಮ್ಮೀ ಕಾಲೇಜು

ಶ್ರೀ ಆದಿಚುಂಚನಗಿರಿ ಕಾಲೇಜು ಹೆಸರಿದಕ್ಕೆ
ವಿದ್ಯಾಭಿವೃದ್ಧಿಯೇ ಗುರಿಯಿದಕ್ಕೆ
ಸತ್ಯ ತ್ಯಾಗ ನೆರಳಿದಕ್ಕೆ
ಪೋಷಕರ ಪ್ರೀತ್ಯಾದರಗಳಿದಕ್ಕೆ

ಆದರ್ಶ ಚಿಂತನೆ ಇಲ್ಲುಂಟು
ಭೋಧನಾ ಮಾರ್ಗ ಹೊಸದುಂಟು
ಶಿಕ್ಷಣ ತಜ್ಞರ ಬೆಂಬಲವುಂಟು
ಅನುಭವಿ ಉಪನ್ಯಾಸಕರ ಪಾಂಡಿತ್ಯವುಂಟು

ವಿದ್ಯಾರ್ಥಿ ಸ್ವಾವಲಂಬನೆಯೇ ಇದರಗುರಿ
ನೂತನ ಶೈಕ್ಷಣಿಕ ತಂತ್ರಗಳೇ ಅದಕ್ಕೆ ಸಿರಿ
ಕಲಿಕೆಯಲ್ಲಿ ನೂತನ ಚಿಂತನೆಯೇ ಅದಕ್ಕೆ ಪರಿ
ಬೋಧನೆಯಲ್ಲಿ ಅದಕ್ಕಿಲ್ಲ ತರಾತುರಿ

ಇದುವೇ ನಮ್ಮೀ ಶ್ರೀ ಆದಿಚುಂಚನಗಿರಿ ಪದವಿ ಕಾಲೇಜು
ಜ್ಞಾನವೆಂಬ ದೀಪವ ಬೆಳಗುವ ಕಾಲೇಜು
ಸರ್ವರಿಗೂ ಸಾಮರ್ಥ್ಯವ ನೀಡುವ ಕಾಲೇಜು
ಭವ್ಯತೆಯ ಬೆಳಗುವ ನಮ್ಮ ಹೆಮ್ಮೆಯ ಕಾಲೇಜು
ಸಾಗುತಿದೆ ವಿದ್ಯಾ ಸಾಗರದಂತೆ
ನಮ್ಮ ಈ ಶ್ರೀ ಆದಿಚುಂಚನಗಿರಿ ಪದವಿ ಕಾಲೇಜು.

* * * * *

# ಕರ್ನಾಟಕ ರಾಜ್ಯದ ಬಗ್ಗೆ ಕೆಲವು ಉಪಯುಕ್ತ ಮಾಹಿತಿ

–ಶಫ್ಲಿಯಾ ಬಾನು, ಪ್ರಥಮ ಬಿ.ಎ.,

- 'ಕರ್ನಾಟಕ' ಎಂಬ ಹೆಸರಿನ ಪದದ ಬಳಕೆ ಪ್ರಪ್ರಥಮವಾಗಿ ಮಹಾಭಾರತದಲ್ಲಿ ಕಂಡು ಬಂದಿದೆ.
- ಪ್ರಾಚೀನ ಕಾಲದಲ್ಲಿ ಕರ್ನಾಟಕವನ್ನು ಕರುನಾಡು (ಕಪ್ಪು ಮಣ್ಣಿನ ನಾಡು) ಎಂದು ಕರೆಯುತ್ತಿದ್ದರು.
- ರಾಷ್ಟ್ರಕೂಟರ ಅಮೋಘವರ್ಷ ನೃಪತುಂಗನ ಆಸ್ಥಾನ ಕವಿ ಶ್ರೀವಿಜಯನ ಕವಿರಾಜಮಾರ್ಗದಲ್ಲಿ ಕರ್ನಾಟಕವು ಕಾವೇರಿ ನದಿ ತೀರದಿಂದ ಗೋದಾವರಿ ನದಿಯವರೆಗೂ ವಿಸ್ತರಿಸಿತು ಎಂಬ ಉಲ್ಲೇಖವಿದೆ.
- ಭಾರತ ಸ್ವಾತಂತ್ರ್ಯ ಪಡೆದ ಸಂಸ್ಥಾನಗಳಲ್ಲಿ ಮೈಸೂರು ಎರಡನೆಯ ದೊಡ್ಡದಾದ ಸಾಮ್ರಾಜ್ಯವಾಗಿತ್ತು.
- 1953 ರಲ್ಲಿ ಮೈಸೂರು ಅರಸರ ಒಡೆತನದಲ್ಲಿದ್ದ 9 ಜಿಲ್ಲೆಗಳನ್ನು ಒಳಗೊಂಡ ಮೈಸೂರು ರಾಜ್ಯ ಉದಯವಾಗಿತು.
- ನವೆಂಬರ್ 1, 1956 ರಲ್ಲಿ ಭಾಷಾವಾರು ಪ್ರಾಂತ್ಯಗಳು ಕರ್ನಾಟಕದಲ್ಲಿ ವಿಲೀನಗೊಂಡು 'ವಿಶಾಲ ಮೈಸೂರು ರಾಜ್ಯ' ಉದಯವಾಯಿತು.
- 1973 ನವೆಂಬರ್ 1 ರಂದು ಮೈಸೂರು ರಾಜ್ಯಕ್ಕೆ 'ಕರ್ನಾಟಕ' ಎಂದು ನಾಮಕರಣ ಮಾಡಲಾಯಿತು. ಆಗ ಮುಖ್ಯಮಂತ್ರಿಯಾಗಿದ್ದವರು ದೇವರಾಜ್ ಅರಸ್.
- ಕರ್ನಾಟಕ ಎಂಬ ಪದವನ್ನು ನೀಡಿದವರು ಆಲೂರು ವೆಂಕಟರಾಯರು.
- ಕರ್ನಾಟಕದ ರಾಜ್ಯಪಕ್ಷಿ – ನೀಲಕಂಠ ಪಕ್ಷಿ, ರಾಜ್ಯ ಪ್ರಾಣಿ ಆನೆ, ರಾಜ್ಯವೃಕ್ಷ – ಶ್ರೀಗಂಧ, ರಾಜ್ಯಪುಷ್ಪ ಕಮಲ
- ಕರ್ನಾಟಕದ ನಾಡಗೀತೆ – ಜಯಭಾರತ ಜನನಿಯ ತನುಜಾತೆ(ಕುವೆಂಪು)
- ಕರ್ನಾಟಕ ಸರ್ಕಾರದ ಚಿನ್ಹೆ – ಗಂಡಭೇರುಂಡ (ಎರಡು ತಲೆಗಳನ್ನು ಹೊಂದಿರುವ ಕಾಲ್ಪನಿಕ ಪಕ್ಷಿ)
- ಭಾರತದಲ್ಲಿ ಅತಿ ಹೆಚ್ಚು ಶ್ರೀಗಂಧದ ಮರಗಳನ್ನು ಬೆಳೆಯುವ ರಾಜ್ಯ – ಕರ್ನಾಟಕ
- ಕರ್ನಾಟಕದ ಮೊದಲ ನಾಡಗೀತೆ – ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು (ಹುಯಿಲಗೋಳ ನಾರಾಯಣರಾವ್)
- ಕರ್ನಾಟಕವು ದ್ವಿಸದನ ವ್ಯವಸ್ಥೆಯನ್ನು ಹೊಂದಿದೆ (ವಿಧಾನಸಭೆ ಮತ್ತು ವಿಧಾನ ಪರಿಷತ್ತು)
- ಕರ್ನಾಟಕದ ವಿಧಾನಸಭೆಯ ಸದಸ್ಯರ ಸಂಖ್ಯೆ – 225
- ಕರ್ನಾಟಕದ ವಿಧಾನ ಪರಿಷತ್ ಸದಸ್ಯರ ಸಂಖ್ಯೆ – 75
- ಕರ್ನಾಟಕದಿಂದ ಲೋಕಸಭೆಗೆ ಆಯ್ಕೆಯಾಗುವ ಸಂಸದರ ಸಂಖ್ಯೆ – 28
- ಕರ್ನಾಟಕದಿಂದ ರಾಜ್ಯಸಭೆಗೆ ಆಯ್ಕೆಯಾಗುವ ಸಂಸದರ ಸಂಖ್ಯೆ – 12
- ಮೈಸೂರು ರಾಜ್ಯದ ಮೊದಲ ರಾಜ್ಯಪಾಲ – ಜಯಚಾಮರಾಜೇಂದ್ರ ಒಡೆಯರ್
- ಮೈಸೂರು ರಾಜ್ಯದ ಮೊದಲ ಮುಖ್ಯಮಂತ್ರಿ – ಕೆ. ಚಂಗಲರಾಯರೆಡ್ಡಿ
- ಏಕೀಕೃತ ಕರ್ನಾಟಕದ ಮೊದಲ ಮುಖ್ಯಮಂತ್ರಿ – ಎಸ್. ನಿಜಲಿಂಗಪ್ಪ
- ವಿಧಾನಸಭೆಯ ಮೊದಲ ಸಭಾಪತಿ – ವಿ.ವೆಂಕಟಪ್ಪ
- ಭಾರತದ ಉಪಗ್ರಹ ನಿಯಂತ್ರಣ ಕೇಂದ್ರವಿರುವುದು – ಹಾಸನದಲ್ಲಿ
- ಕಾಫಿ ಹಾಗೂ ಮೆಣಸು ಉತ್ಪಾದನೆಯಲ್ಲಿ ಕರ್ನಾಟಕವು ಪ್ರಥಮ ಸ್ಥಾನದಲ್ಲಿದೆ.
- ಕರ್ನಾಟಕದ ಒಟ್ಟು ವಿಸ್ತೀರ್ಣ 1,91,791 ಚ.ಕಿ.ಮೀಗಳು.
- ವಿಸ್ತೀರ್ಣದಲ್ಲಿ 7ನೇ ದೊಡ್ಡ ರಾಜ್ಯ.
- ಕರ್ನಾಟಕದ ಒಟ್ಟು ಜನಸಂಖ್ಯೆ 6,11,30,704 (2011ರ ಜನಗಣತಿಯಂತೆ)
- ಕರ್ನಾಟಕದ 4 ಕಂದಾಯ ವಿಭಾಗಗಳು – ಬೆಂಗಳೂರು, ಮೈಸೂರು, ಬೆಳಗಾವಿ ಮತ್ತು ಕಲಬುರ್ಗಿ

* * * * *

# ಕಳೆದುಹೋದ ಅವಕಾಶ (ಕಥೆ)

–ಪ್ರತಿಭಾ ಈ., ಪ್ರಥಮ ಬಿ.ಕಾಂ.,

ಒಂದು ಹಳ್ಳಿಯಲ್ಲಿ ರೈತನೊಬ್ಬನಿದ್ದ. ಕಾಲಕಾಲಕ್ಕೆ ಮಳೆ ಬರದೆ, ಬೆಳೆ ಸಾಕಷ್ಟು ಪಡೆಯದೆ, ಸಾಲದಲ್ಲೇ ಬದುಕುತ್ತಿದ್ದ. ದೇವರ ದಯೆಯಿಂದ ಈ ವರ್ಷ ಚೆನ್ನಾಗಿ ಮಳೆಯಾಗಿತ್ತು, ಫಸಲು ಚೆನ್ನಾಗಿ ಬೆಳೆದಿತ್ತು. ಹಾಕಿದ ಜೋಳದ ಬೆಳೆ ಆಳೆತ್ತರ ಬೆಳೆದು ನಿಂತು ಕಾಳುಗಳು ಹಾಲು ತುಂಬಿಕೊಳ್ಳುತ್ತಿತ್ತು. ಆಗ ಹಂದಿಗಳ ಕಾಟವೂ ಹೆಚ್ಚಾಯ್ತು. ಅದಕ್ಕೆ ಆತ ಮನೆಗೆ ಹೋಗದೆ ಹೊಲದಲ್ಲೇ ಒಂದು ಎತ್ತರದ ಮಂಚವನ್ನು ಕಟ್ಟಿಕೊಂಡು ಅಲ್ಲಿಯೇ ವಾಸ ಮಾಡಿಕೊಂಡು ಇದ್ದು, ಸದ್ದು ಮಾಡಿ ಕಲ್ಲು ಬೀಸಿ ಹಕ್ಕಿಗಳನ್ನು ಓಡಿಸುತ್ತಿದ್ದ. ಹಂದಿಗಳಿಂದ ಬೆಳೆ ರಕ್ಷಣೆಗಾಗಿ ರಾತ್ರಿ ಮಲಗುತ್ತಿದ್ದು, ಅಲ್ಲಿಯೇ ಅವನ ಹೆಂಡತಿ ಅವನಿಗೆ ಸಹಾಯ ಮಾಡುತ್ತಿದ್ದಳು. ಅವನ ಹೆಂಡತಿ ಅವನಿರುವಲ್ಲಿಯೇ ಊಟ ತಿಂಡಿಗಳನ್ನು ತಂದು ಕೊಡುತ್ತಿದ್ದಳು. ಕಾಲಕ್ರಮೇಣ ಆತನ ಸಾಲ ಏರುತ್ತಿತ್ತು.

ಒಂದು ದಿನ ರೈತ ನದಿಯ ದಂಡೆಗೆ ಹೋಗಿ ಕಲ್ಲುಗಳನ್ನು ಆಯ್ಕೆ ಮಾಡಿಕೊಳ್ಳುತ್ತಿದ್ದನು. ಒಂದಿಷ್ಟು ನೆಲ ಅಗೆದಾಗ ಅವನಿಗೊಂದು ಬುಟ್ಟಿ ಸಿಕ್ಕಿತು. ಅದರಲ್ಲಿ ಗುಂಡಗಿನ ಕಲ್ಲುಗಳಿದ್ದವು. ಅವುಗಳನ್ನು ಮಂಚದ ಮೇಲಿಟ್ಟುಕೊಂಡು ಹಕ್ಕಿಗಳು ಬಂದಾಗ ಬೀಸಿ ಎಸೆದು ಓಡಿಸುತ್ತಿದ್ದ. ಮನೆಯಲ್ಲಿ ಹಣದ ತೊಂದರೆಯಾಯಿತು. ಹಿಂದಿನ ಸಾಲವನ್ನು ತೀರಿಸದೆ ಇನ್ನುಮುಂದೆ ಸಾಮಾನು ಕೊಡುವುದಿಲ್ಲ ಎಂದು ಅಂಗಡಿಯವನು ಹೇಳಿದ. ಆ ದಿನ ಸಂಜೆ ಹೆಂಡತಿ ರೈತನಿಗೆ ಊಟ ಕೊಡಲು ಮಗನನ್ನು ಕರೆದುಕೊಂಡು ಹೋದಳು. ಅವನ ಮುಂದೆ ತನ್ನ ಗೋಳನ್ನು ಹೇಳಿಕೊಂಡಳು. ಆತ ಸ್ವಲ್ಪ ದಿನಗಳಲ್ಲಿ ಏನಾದರೂ ವ್ಯವಸ್ಥೆ ಮಾಡುತ್ತೇನೆ ಎಂದು ಹೇಳಿದ. ಅವನ ಮಗ ಆಟವಾಡುತ್ತಿದ್ದು, ಅಪ್ಪ ಎಸೆಯುತ್ತಿದ್ದ ಕಲ್ಲುಗಳಲ್ಲಿ ಒಂದನ್ನು ಜೇಬಿನಲ್ಲಿ ಹಾಕಿಕೊಂಡ. ಮರುದಿನ ಅಂಗಡಿಯವ ತುಂಬಾ ತೊಂದರೆ ಮಾಡಿದಾಗ ಹೋದಳು. ಅವಳೊಂದಿಗೆ ಹೋದ ಮಗ ತಾನು ನಿನ್ನೆ ತಂದಿದ್ದ ಕಲ್ಲಿನೊಂದಿಗೆ ಆಟವಾಡುತ್ತಿದ್ದ. ಅಂಗಡಿಯವನು ಆ ಕಲ್ಲನ್ನು ಗಮನಿಸಿ, ತೆಗೆದುಕೊಂಡು ಪರೀಕ್ಷಿಸಿದ. ಅದರಲ್ಲೇನೂ ವಿಶೇಷತೆ ಇದೆಯೆಂದು ಭಾವಿಸಿದನು.

ಮರುದಿನ ಅದನ್ನು ತೆಗೆದುಕೊಂಡು ಹತ್ತಿರದ ಪಟ್ಟಣಕ್ಕೆ ಹೋಗಿ ತೋರಿಸಿದಾಗ, ಅದೊಂದು ಅಪೂರ್ವವಾದ ವಜ್ರವೆಂದೂ ಅದರ ಬೆಲೆ ಕನಿಷ್ಟ ಮೂರು ಲಕ್ಷ ರೂಪಾಯಿಯಾಗುತ್ತದೆ ಎಂದು ತಿಳಿದುಕೊಂಡನು. ಆತ ಬಂದು ರೈತನ ಹೆಂಡತಿಗೆ ವಿಷಯ ತಿಳಿಸಿ, 'ನಿನ್ನ ಗಂಡನ ಬಡತನ ಕಳೆಯಿತು ಸಂತೋಷವಾಗಿರಲು ಹೇಳು' ಎಂದ. ಹೆಂಡತಿ ಸಂತೋಷದಿಂದ ಓಡುತ್ತಾ ಹೋಗಿ, ರೈತನಿಗೆ ಈ ವಿಷಯವನ್ನು ತಿಳಿಸುತ್ತಾಳೆ. ಆದರೆ ಕಾಲ ಕೈ ಮೀರಿ ಹೋಗಿತ್ತು. ಆದರೆ ಆ ಬಡ ರೈತನಿಗೆ ಅದರಿಂದ ಸಂತೋಷವಾಗುವುದಿಲ್ಲ. ಹೆಚ್ಚು ದುಃಖವೇ ಆಗುತ್ತದೆ. ಏಕೆಂದರೆ ಅವನು ಅವನ ಹತ್ತಿರ ಇದ್ದ ಬುಟ್ಟಿ ತುಂಬಾ ಇದ್ದ ಕಲ್ಲುಗಳನ್ನು ಅವುಗಳ ಬೆಲೆ ತಿಳಿಯದೆ, ಅವುಗಳನ್ನು ನದಿ ನೀರಿನಲ್ಲಿ ಎಸೆದುಬಿಟ್ಟಿದ್ದ. ಇದರಿಂದ ಅವನ ದುಃಖ ಮತ್ತಷ್ಟು ಹೆಚ್ಚಾಯಿತು. ಅನಂತರ ಅವನು ಅಂದುಕೊಳ್ಳುತ್ತಾನೆ ಅವುಗಳನ್ನು ಉಳಿಸಿಕೊಂಡಿದ್ದರೆ ನನ್ನ ಜೀವನವೇ ಗತಿಯೇ ಬದಲಾಗುತ್ತಿತ್ತು, ಅಲ್ಲದೇ ಜೀವನ ಬಂಗಾರಮಯವಾಗುತ್ತಿತ್ತು ಎಂದು ಅಳತೊಡಗಿದ. ಇದರಿಂದ ನಮಗೆಲ್ಲ ತಿಳಿಯುವುದೆನೆಂದರೆ ನಮ್ಮೆಲ್ಲ ಜೀವನದಲ್ಲೂ ನೂರಾರು ಸದವಕಾಶಗಳು ಬರುತ್ತಿರುತ್ತವೆ. ನಮ್ಮ ಬಾಗಿಲನ್ನು ತಟ್ಟುತ್ತವೆ. ಆಗ ಅವುಗಳ ಬೆಲೆಯನ್ನರಿಯದೇ ಕಳೆದುಕೊಂಡು ಬಿಡುತ್ತೇವೆ. ನಂತರ ಅದರ ಅರ್ಥವಾದಾಗ ಕಳೆದುಹೋದದ್ದರ ಬಗ್ಗೆ ದುಃಖಿಸುತ್ತೇವೆ. ಯಾವ ಅವಕಾಶವೂ ಅಪ್ರಯೋಜಕವಲ್ಲ. ಬಂದ ಯಾವುದೇ ಸಲಹೆಯನ್ನು, ಅವಕಾಶವನ್ನು ತಿರಸ್ಕರಿಸುವ ಮೊದಲು ಸ್ವಲ್ಪ ಆಳವಾಗಿ ಚಿಂತಿಸುವುದು ಮೇಲು.

ಈ ಒಂದು ಕಥೆಯು ನಮಗೆ ಒಂದು ಗಾದೆಯನ್ನು ನೆನಪಿಸುತ್ತದೆ. 'ಮಿಂಚಿಹೋದ ಕಾಲಕ್ಕೆ ಚಿಂತಿಸಿ ಫಲವಿಲ್ಲ' ಎಂದು. ಹಾಗಾಗಿ ಸಿಕ್ಕಂತಹ ಅವಕಾಶವನ್ನು ಸಕಾಲದಲ್ಲಿ ಸದುಪಯೋಗ ಪಡಿಸಿಕೊಳ್ಳಬೇಕು.

* * * * *

# ಅನ್ನದಾನದ ಮಹಿಮೆ (ಕಥೆ)

–ಕಾವ್ಯ ಕೆ. ಎನ್., ತೃತೀಯ ಬಿ.ಎಸ್ಸಿ.,

ಒಂದು ಊರಲ್ಲಿ ಒಬ್ಬ ಮುದುಕಿ ಇದ್ದಳು. ಅವಳದು ಒಂದು ನೇಮವಿತ್ತು. ಅದು ಏನೆಂದರೆ ತಾನು ಊಟ ಮಾಡುವ ಮೊದಲು ಸ್ವಲ್ಪ ಅನ್ನವನ್ನು ದಾನ ಮಾಡುತ್ತಿದ್ದಳು. ಆಮೇಲೆ ಊಟ ಮಾಡುತ್ತಿದ್ದಳು. ಬಲು ಪ್ರೀತಿಯಿಂದ ತನ್ನ ಜೀವನ ಪರಿಯ್ಯಂತ ಈ ನೇಮವನ್ನು ನಡೆಸಿಕೊಂಡು ಬಂದಿದ್ದಳು.

ಅಜ್ಜಿಗೆ ಹದಿನಾರು ವರ್ಷದ ಒಬ್ಬ ಮೊಮ್ಮಗ ಇದ್ದ. ಅವಳ ನೇಮ ಅವನಿಗೆ ಬಲು ವಿಚಿತ್ರ ಎನಿಸಿತ್ತು. ಒಂದು ದಿನ ಅಜ್ಜಿಯನ್ನು 'ಈ ಅನ್ನದಾನದಿಂದ ಪ್ರತಿಫಲವೇನು' ಎಂದು ಕೇಳುತ್ತಾನೆ. ಆಗ ಅಜ್ಜಿಯು 'ನನಗೆ ಏನು ತಿಳಿಯದಪ್ಪ ಬೇಕಾದರೆ ಪರಮೇಶ್ವರನನ್ನು ಕೇಳು' ಎನ್ನುತ್ತಾಳೆ. ಹುಡುಗ ಪರಮೇಶ್ವರನನ್ನು ಹುಡುಕಿಕೊಂಡು ನಡೆಯುತ್ತಾನೆ.

ಹುಡುಗ ಅಲ್ಲಿ ಇಲ್ಲಿ ಅಲೆದು ಒಂದು ಕಾಡಿಗೆ ಬಂದ, ರಾತ್ರಿ ಆಯಿತು. ಮುಂದೆ ಹೋಗುವುದು ಬೇಡ ಎಂದುಕೊಂಡ. ಆದರೆ ಉಳಿದುಕೊಳ್ಳುವುದು ಎಲ್ಲಿ ಎಂದು ವಿಚಾರಿಸತೊಡಗಿದ. ಸಮೀಪದಲ್ಲಿ ಒಂದು ಬೇಡರ ಹಟ್ಟಿ ಕಾಣಿಸಿತು. ಅಲ್ಲಿಗೆ ಹೋದ. ಅಲ್ಲಿ ದಂಪತಿಗಳಿದ್ದರು. 'ಅಯ್ಯಾ, ಈ ರಾತ್ರಿ ಇಲ್ಲಿ ಉಳಿದುಕೊಳ್ಳಲು ತುಸು ಜಾಗ ಕೊಡಿ' ಎಂದನು. ಹೆಂಡತಿ 'ಬೇಡ' ಎಂದಳು. ಗಂಡ ಹೆಂಡತಿಯನ್ನು ಗದರಿಸಿದ. ಹುಡುಗನಿಗೆ 'ಉಳಿದುಕೊ' ಎಂದ. ಊಟದ ಸಮಯವಾಯಿತು. ಗಂಡ ಅನ್ನದಲ್ಲಿ ಮೂರು ಪಾಲು ಮಾಡಿ, 'ಹುಡುಗನಿಗೆ ಒಂದು ಪಾಲು ಕೊಡೋಣ' ಎಂದ. ಹೆಂಡತಿ ಈ ಮಾತನ್ನು ಒಪ್ಪಲಿಲ್ಲ. ಆಗ ಅವನು ತನ್ನ ಪಾಲಿನಲ್ಲೆ ಅರ್ಧವನ್ನು ಹುಡುಗನಿಗೆ ಕೊಟ್ಟ, ಮಲಗುವಾಗ ಹುಡುಗನನ್ನು ಒಳಗೆ ಹಾಕಿಕೊಂಡು ತಾನು ತುದಿಗೆ ಮಲಗಿದ. ನಡುರಾತ್ರಿ ನಿದ್ದೆಗಣಿನಲ್ಲಿ ದಂಪತಿಗಳು ಕೆಳಗೆ ಬೀಳುತ್ತಾರೆ. ಕೆಳಗೆ ಇದ್ದ ಹುಲಿ ಅವರನ್ನು ತಿಂದುಬಿಡುತ್ತದೆ.

ಹುಡುಗ ಮುಂಜಾನೆ ಮತ್ತೆ ಪಯಣ ಮುಂದುವರಿಸಿದ. ಬರುತ್ತಿರುವಾಗ ದಾರಿಯಲ್ಲಿ ಒಬ್ಬ ಬ್ರಾಹ್ಮಣನನ್ನು ನೋಡಿದ. ಅವನು ಕೆರೆಗೆ ಕಟ್ಟೆಯನ್ನು ಕಟ್ಟಿಸುತ್ತಿದ. ಅವನು ಕಟ್ಟಿದಂತೆ ಅದು ಒಡೆದು ಬೀಳುತ್ತಿತ್ತು. ಬ್ರಾಹ್ಮಣ, ಹುಡುಗನನ್ನು 'ಎಲ್ಲಿಗೆ ಹೊರಟಿರುವೆ' ಎಂದು ಕೇಳಿದ. 'ಪರಮೇಶ್ವರನ ಕಡೆಗೆ ದಾನದ ಸುಖ ಏನು ಎಂದು ಕೇಳಲು ಹೊರಟಿರುವೆ' ಎಂದು ಹುಡುಗ ಹೇಳಿದ. ಆಗ ಬ್ರಾಹ್ಮಣನು 'ನೋಡಪ್ಪ ಈ ಕೆರೆಯ ಕಟ್ಟೆ ಭದ್ರವಾಗಿ ನಿಲ್ಲಲು ಏನು ಮಾಡಬೇಕು' ಎಂದು ಪರಮೇಶ್ವರನನ್ನು ಕೇಳಿಕೊಂಡು ಬಾ' ಎಂದನು. ಹುಡುಗ 'ಆಯಿತು' ಎಂದು ಮುಂದೆ ನಡೆದ.

ಹೀಗೆ ಹೋಗುತ್ತಿರುವಾಗ ಹಾದಿಯಲ್ಲಿ ಒಂದು ದೊಡ್ಡ ಹುತ್ತ ಕಾಣಿಸಿತು. ಅದರಲ್ಲಿ ಒಂದು ಮುಪ್ಪಾದ ಸರ್ಪ ವಾಸವಾಗಿತ್ತು. ಅದು ಇವನನ್ನು ನೋಡಿ 'ಅಪ್ಪಾ ಎಲ್ಲಿಗೆ ಹೊರಟಿರುವೆ?' ಎಂದಿತು. 'ಪರಮೇಶ್ವರನ ಕಡೆಗೆ ಹೊರಟಿರುವೆ' ಎಂದು ಹೇಳಿದ. ಆಗ ಸರ್ಪವು 'ಹಾಗಾದರೆ ನನಗೆ ಮೋಕ್ಷ ಯಾವಾಗ ಸಿಗುತ್ತೆ ಕೇಳಿಕೊಂಡು ಬಾ' ಎಂದಿತು. ಹುಡುಗ ಆಗಲಿ ಎಂದು ಮುಂದೆ ನಡೆದ.

ದಾರಿಯಲ್ಲಿ ನಡೆಯುತ್ತಿರುವಾಗ ತುಂಬಾ ಬಿಸಿಲಿರುವುದರಿಂದ ಆ ಹುಡುಗನಿಗೆ ತುಂಬಾ ಸುಸ್ತಾಯಿತು. ಪಕ್ಕದಲ್ಲಿ ಒಂದು ಮಾವಿನ ಮರ ಕಂಡಿತು. ಅದರ ನೆರಳಲ್ಲಿ ಕುಳಿತುಕೊಂಡ. ಆಗ 'ಅಯ್ಯಾ, ನೀನು ಎಲ್ಲಿಗೆ ಹೊರಟಿರುವೆ?' ಎಂದು ಮಾವಿನಮರ ಕೇಳಿತು. ಪರಮೇಶ್ವರನ ಕಡೆಗೆ ಹೊರಟಿರುವ ವಿಷಯ ಹೇಳಿದ. ಮಾವಿನಮರ 'ನೋಡಪ್ಪ ನನ್ನ ನೆರಳಲ್ಲಿ ಯಾರೂ ಕುಳಿತುಕೊಳ್ಳೊಲ್ಲ, ನನ್ನ ಹಣ್ಣನ್ನು ತಿನ್ನೊಲ್ಲ. ಯಾಕೆ ಎಂದು ಕೇಳಿಕೊಂಡು ಬಾ' ಎಂದಿತು. ಹುಡುಗ ಮುಂದೆ ನಡೆದ.

ಹೀಗೆ ನಡೆದ........ ನಡೆದ...... ಪರಮೇಶ್ವರನ ಪಟ್ಟಣ ಸಮೀಪ ಬಂದಿತು. ಈತ ಬರಲು ಆ ಪಟ್ಟಣ ಅಲುಗಿತು, ಪಾರ್ವತಿಯು 'ಹೀಗೇಕೆ?' ಎಂದು ಕೇಳಿದಳು. ಆಗ ಪರಮೇಶ್ವರ ತನ್ನ ಭಕ್ತ ಬರುವ ವಿಷಯ ತಿಳಿಸಿದ.

ಪರಮೇಶ್ವರ ಮುದುಕ ಜಂಗಮನ ವೇಷ ಹಾಕಿಕೊಂಡು ಹುಡುಗನ ಹತ್ತಿರ ಬಂದ. 'ಅಪ್ಪಾ, ನೀನು ಯಾರು? ಎಲ್ಲಿಗೆ ಹೊರಟಿರುವೆ?' ಎಂದು ಕೇಳಿದ. ಹುಡುಗ ಪರಮೇಶ್ವರನ ಹತ್ತಿರ ಹೊರಟಿರುವೆನೆಂದು ಹೇಳಿದ. ಆಗ ಜಂಗಮ 'ನೋಡಪ್ಪ ಪರಮೇಶ್ವರ ಸುಲಭವಾಗಿ ಸಿಗಲಾರ, ನೀನು ಈಗಾಗಲೇ ಬಳಲಿರುವೆ, ಸುಮ್ಮನೆ ಮನೆಗೆ ಹೋಗು' ಎಂದನು.

ಹುಡುಗ 'ನನ್ನ ಪ್ರಾಣವೇ ಹೋಗಲಿ, ನಾನು ಅವನನ್ನು ಕಾಣಲೇಬೇಕು' ಎಂದು ಮುಂದೆ ನಡೆದನು. ಆಗ ಪರಮೇಶ್ವರ ತನ್ನ ನಿಜರೂಪ ತೋರಿದನು. ಹುಡುಗನಿಗೆ ಖುಷಿಯಾಯಿತು'. ದಾನದಿಂದ ಸಿಗುವ ಸುಖವೇನು?' ಎಂದು ಕೇಳಿದ.

ಆಗ ಪರಮೇಶ್ವರನು 'ಬಂದ ದಾರಿಯನ್ನು ಬಲಕ್ಕೆ ಮಾಡಿಕೊಂಡು ಹೋಗು ಒಂದು ಪಟ್ಟಣ ಸಿಗುತ್ತದೆ. ಅಲ್ಲಿ ಒಬ್ಬ ರಾಜನಿರುವನು. ಅವನಿಗೆ ಮಕ್ಕಳಿಲ್ಲ. ಈ ತೀರ್ಥ ಕೊಡು, ಒಂದು ಗಂಡು ಮಗು ಹುಟ್ಟುತ್ತದೆ. ಆ ಮಗು ನಿನಗೆ ದಾನದ ಸುಖವೇನು ಎಂಬುದನ್ನು ಹೇಳುತ್ತದೆ' ಎಂದನು.

ಹುಡುಗ ಮಾವಿನಮರದ ಪ್ರಶ್ನೆ ಕೇಳುತ್ತಾನೆ. 'ಆ ಮರದ ಅಡಿಯಲ್ಲಿ ರಾಶಿರಾಶಿ ಬಂಗಾರವನ್ನು ಕೂಡಿಟ್ಟುಕೊಂಡಿದೆ. ಅದನ್ನು ಯಾರಿಗಾದರೂ ದಾನ ಮಾಡಿದರೆ, ಅದರ ನೆರಳಲ್ಲಿ ಜನ ಕೂರುತ್ತಾರೆ; ಹಣ್ಣು ತಿನ್ನುತ್ತಾರೆ' ಎಂದನು. ನಂತರ ಹುಡುಗ ಸರ್ಪದ ಸಮಸ್ಯೆ ತಿಳಿಸಿದನು.ಆಗ ಪರಮೇಶ್ವರನು 'ಅದರ ತಲೆಯ ಮೇಲೆ ಒಂದು ರತ್ನವಿದೆ, ಅದನ್ನು ಬೇರೆಯವರಿಗೆ ಕೊಟ್ಟರೆ ಅದಕ್ಕೆ ಮೋಕ್ಷ' ಎಂದನು. ಕೊನೆಗೆ ಹುಡುಗ ಬ್ರಾಹ್ಮಣನ ಪ್ರಶ್ನೆ ಕೇಳಿದ. ಅದಕ್ಕೆ ಪರಮೇಶ್ವರನು 'ಅವನಿಗೆ ಇಬ್ಬರು ಹೆಣ್ಣು ಮಕ್ಕಳಿರುವರು. ಮದುವೆ ವಯಸ್ಸಿಗೆ ಬಂದಿರುವರು. ಆ ಕನ್ಯಾದಾನವಾದರೆ ಕಟ್ಟೆ ಭದ್ರವಾಗಿ ನಿಲ್ಲುತ್ತದೆ' ಎಂದು ತಿಳಿಸಿದನು. ಹುಡುಗ ಪರಮೇಶ್ವರನಿಗೆ ನಮಿಸಿ ಹಿಂದಿರುಗಿದನು.

ಹುಡುಗ ಪರಮೇಶ್ವರ ಹೇಳಿದ ಹಾದಿಯಲ್ಲಿ ಬಂದನು. ಒಂದು ಪಟ್ಟಣ ಸಿಕ್ಕಿತು. ಅಲ್ಲಿ ಅರಸನಿದ್ದ. ಅವನಿಗೆ ಮಕ್ಕಳಿರಲಿಲ್ಲ. ಹುಡುಗ ಹೋಗಿ ತೀರ್ಥಕೊಟ್ಟ. ಅರಸ ಹುಡುಗನನ್ನು ಕೆಲಕಾಲ ತನ್ನಲ್ಲೇ ಇರಿಸಿಕೊಂಡ. ನವಮಾಸ ತುಂಬಲು ರಾಣಿಗೆ ಗಂಡು ಮಗು ಹುಟ್ಟಿತು. ಹುಡುಗ ಹುಟ್ಟಿದ ಕೂಸನ್ನು ದಾನದ ಮಹಿಮೆ ನೀಡಿದ್ದೆ. ಮಲಗಲು ಜಾಗ ಕೊಟ್ಟಿದ್ದೆ. ಅದರ ಫಲವಾಗಿಯೇ ಇಂದು ರಾಜನ ಹೊಟ್ಟೆಯಲ್ಲಿ ಹುಟ್ಟಿರುವೆ, ನನ್ನ ಹೆಂಡತಿ ಏನೂ ಕೊಡಲಿಲ್ಲ ಆಕೆ ಹಂದಿಯ ಹೊಟ್ಟೆಯಲ್ಲಿ ಹುಟ್ಟಿರುವಳು' ಎಂದಿತು. ಹುಡುಗನಿಗೆ ಅನ್ನದಾನದ ಮಹಿಮೆಯನ್ನು ಕೇಳಿ ಸೋಜಿಗವಾಯಿತು. ಮಾವಿನ ಮರದ ಹತ್ತಿರ ಬಂದ. ಪರಮೇಶ್ವರ ತಿಳಿಸಿದ ಪರಿಹಾರ ಹೇಳಿದ.

ಆಗ ಮಾವಿನಮರವು ಜೀವನವಿಡೀ ಅನ್ನದಾನದ ಮಾಡಿದ ಅಜ್ಜಿಯ ಮನೆಗೆ ಮಾವಿನಮರ ತನ್ನ ಸಂಪತ್ತನ್ನು ಸಾಗಿಸಿತು. ಹುಡುಗ ಮುಂದೆ ಹೋಗಿ ಸರ್ಪವನ್ನು ಕಂಡ. ಪರಮೇಶ್ವರ ಸೂಚಿಸಿದ ಪರಿಹಾರ ತಿಳಿಸಿದ. ಸರ್ಪವು ತನ್ನಲ್ಲಿರುವ ರತ್ನವನ್ನು ಹುಡುಗನಿಗೆ ದಾನ ಮಾಡಿತು. ಮೋಕ್ಷ ಪಡೆಯಿತು. ಕೊನೆಯಲ್ಲಿ ಹುಡುಗ ಬ್ರಾಹ್ಮಣನಿಗೆ ಪರಮೇಶ್ವರ ಸೂಚಿಸಿದ ಪರಿಹಾರ ತಿಳಿಸಿದ. ಆಗ ಅವನು ತನ್ನ ಮಕ್ಕಳನ್ನು ಇವನಿಗೆ ಧಾರೆ ಎರೆದುಕೊಟ್ಟ, ನಂತರ ಕೆರೆಯ ಕಟ್ಟೆ ಭದ್ರವಾಗಿ ನಿಂತಿತು.

ಹುಡುಗ ಹೆಂಡತಿರನ್ನು ಕರೆದುಕೊಂಡು ಮನೆಗೆ ಬರುತ್ತಾನೆ. ನೋಡಿದರೆ ಗುಡಿಸಲು ಹೋಗಿ ಅರಮನೆ ಆಗಿರುತ್ತದೆ. ಅವನಿಗೆ ಬಹಳ ಖುಷಿಯಾಗುತ್ತದೆ. ಇದು ಅಜ್ಜಿ ಮಾಡಿದ ಅನ್ನದಾನದ ಮಹಿಮೆ ಎಂದು ಹುಡುಗನಿಗೆ ಅರಿವಾಗುತ್ತದೆ. ಎಂದಿನಂತೆ ದಾನ ಧರ್ಮ ಮಾಡುತ್ತಾ ಎಲ್ಲರೂ ಸುಖವಾಗಿರುತ್ತಾರೆ.

* * * * *

# ಭಾರತದ ಪ್ರಪ್ರಥಮ ಮಹಿಳೆಯರು

–ಸಿಮ್ರಾನ್ ಐ., ಪ್ರಥಮ ಬಿ.ಎ.,

1. ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ಸಿನ ಪ್ರಥಮ ಮಹಿಳಾ ಅಧ್ಯಕ್ಷರು – ಶ್ರೀಮತಿ ಅನಿಬೆಸೆಂಟ್
2. ಭಾರತದ ಪ್ರಥಮ ಮಹಿಳಾ ಪ್ರಧಾನಮಂತ್ರಿ – ಶ್ರೀಮತಿ ಇಂದಿರಾ ಗಾಂಧಿ
3. ಭಾರತದ ಪ್ರಥಮ ಮಹಿಳಾ ರಾಜ್ಯಪಾಲೆ – ಶ್ರೀಮತಿ ಸರೋಜಿನಿ ದೇವಿ ನಾಯ್ಡು
4. ಜಗತ್ತಿನ ಪ್ರಥಮ ದಾದಿ (ನರ್ಸ್) – ಪ್ಲಾರೇನ್ಸ್ ನೈಟಿಂಗೇಲ್ಸ್
5. ಭಾರತದಲ್ಲಿ ಪ್ರಪ್ರಥಮವಾಗಿ ಐ.ಪಿ.ಎಸ್. ಪಾಸಾದ ಮಹಿಳೆ – ಅನ್ನರಾಜಮ್ ಜಾರ್ಜ್
6. ಭಾರತದ ಸುಪ್ರೀಂ ಕೋರ್ಟಿನ ಪ್ರಥಮ ಮಹಿಳಾ ನ್ಯಾಯಮೂರ್ತಿ – ಮೀರಾ ಸಾಹೀಬ ಫಾತಿಮಾ ಬಿ.ವಿ.
7. ಭಾರತದ ಪ್ರಥಮ ಮಹಿಳಾ ಪೈಲಟ್ – ಸುಶ್ಮಾ
8. ಎವರೆಸ್ಟ್ ಶಿಖರ ಏರಿದ ಪ್ರಥಮ ಮಹಿಳೆ – ಬಚ್ಚೇಂದ್ರಿಪಾಲ್
9. ದಿಲ್ಲಿಯನ್ನು ಆಳಿದ ಪ್ರಥಮ ಮಹಿಳೆ – ಸುಲ್ತಾನ್ ರಜಿಯಾ ಬೇಗಮ್
10. ಕನ್ನಡದ ಮೊದಲನೆಯ ಕವಯತ್ರಿ – ಅಕ್ಕಮಹಾದೇವಿ
11. ಅತೀ ಚಿಕ್ಕ ವಯಸ್ಸಿನಲ್ಲಿ ಭಾರತದ ಕ್ಯಾಬಿನೇಟ್ ದರ್ಜೆಯ ಮಂತ್ರಿಯಾದ ಮಹಿಳೆ – ಶ್ರೀಮತಿ ಮೇನಕಾ ಗಾಂಧಿ
12. ವಿಶ್ವಸಂಸ್ಥೆಗೆ ಆಯ್ಕೆಯಾದ ಭಾರತದ ಪ್ರಥಮ ಮಹಿಳೆ – ವಿಜಯಲಕ್ಷ್ಮಿ ಪಂಡಿತ್
13. ಅಥ್ಲೇಟಿಕ್ ಕ್ರೀಡಾ ಕೂಟಗಳಲ್ಲಿ ಅತೀ ಹೆಚ್ಚು ಚಿನ್ನದ ಪದಕ ಪಡೆದುಕೊಂಡ ಭಾರತದ ಮಹಿಳೆ – ಪಿ. ಟಿ. ಉಷಾ
14. ಭಾರತದಲ್ಲಿ ಪ್ರಥಮವಾಗಿ ಸಚಿವ ಸಂಪುಟದಲ್ಲಿ ಮಂತ್ರಿ ಆಗಿ ಆಯ್ಕೆ ಆದ ಮಹಿಳೆ – ರಾಜಕುಮಾರಿ ಅಮೃತಾಕೌರ್
15. ಭಾರತದ ಚಲನಚಿತ್ರ ರಂಗದ ಪ್ರಥಮ ನಟಿ – ದೇವಿಕಾರಾಣಿ
16. ಇಂಗ್ಲಿಷ್ ಕಡಲ್ಗಾಲುವೆ ಈಜಿದ ಪ್ರಥಮ ಭಾರತೀಯ ಮಹಿಳೆ – ಆರತಿ ಚಹಾ
17. ಜಗತ್ತಿನಲ್ಲಿ ಉಕ್ಕಿನ ಮಹಿಳೆ ಎಂದು ಬಿರುದು ಪಡೆದ ಮಹಿಳೆ – ಮಾರ್ಗರೇಟ್ ಥ್ಯಾಚರ್
18. ಬ್ರಿಟಿಷ್‌ರೊಡನೆ ಹೋರಾಡಿದ ಪ್ರಥಮ ಭಾರತೀಯ ಮಹಿಳೆ – ಝಾನ್ಸಿ ರಾಣಿ ಲಕ್ಷ್ಮೀಬಾಯಿ
19. ಸ್ವಾತಂತ್ರಕ್ಕಾಗಿ ಹೋರಾಡಿದ ಪ್ರಥಮ. ಭಾರತದ ಮಹಿಳೆ – ಕನ್ನಡದ ಮೊದಲ ಮಹಿಳೆ ಕಿತ್ತೂರು ರಾಣಿ ಚೆನ್ನಮ್ಮ
20. ಗಾಯನ ಕ್ಷೇತ್ರದಲ್ಲಿ ಗಿನ್ನಿಸ್ ದಾಖಲೆ ನಿರ್ಮಿಸಿದ ಭಾರತದ ಮಹಿಳೆ – ಲತಾ ಮಂಗೇಶ್ಕರ್

* * * * *

# ಜನಪ್ರಿಯ ಒಗಟುಗಳು

–ಸಂಗ್ರಹ : ರಾಜಣ್ಣ ಜಿ., ಸಹಾಯಕ ಪ್ರಾಧ್ಯಾಪಕರು

1. ಗೂಡಿನಲ್ಲಿನ ಪಕ್ಷಿ ನಾಡೆಲ್ಲ ನೋಡುತ್ತದೆ – **ಕಣ್ಣು**
2. ಕಾಸಿನ ಕುದುರೆಗೆ ಬಾಲದ ಲಗಾಮು – **ಸೂಜಿದಾರ**
3. ಎಲೆ ಇಲ್ಲ, ಸುಣ್ಣ ಇಲ್ಲ, ಬಣ್ಣವಿಲ್ಲ ತುಟಿ ಕೆಂಪಗಾಗಿದೆ, ಮಳೆಯಿಲ್ಲ, ಬೆಳೆಯಿಲ್ಲ, ಮೈ ಹಸಿರಾಗಿದೆ – **ಗಿಳಿ**
4. ಸುತ್ತ ಮುತ್ತ ಸುಣ್ಣದ ಗೋಡೆ, ಎತ್ತ ನೋಡಿದರೂ ಬಾಗಿಲಿಲ್ಲ, ಇದು ಏನು? – **ಮೊಟ್ಟೆ**
5. ಅಂಗಳದಲ್ಲಿ ಹುಟ್ಟುವುದು, ಅಂಗಳದಲ್ಲಿ ಬೆಳೆಯುವುದು, ತನ್ನ ಮಕ್ಕಳ ಹಂಗಿಸಿ ಮಾತಾಡುವುದು ಇದು ಏನು? – **ಕೋಳಿ**
6. ಇದ್ದಲು ನುಂಗುತ್ತ, ಗದ್ದಲ ಮಾಡುತ್ತಾ, ಉದ್ದಕ್ಕೂ ಓಡುತ್ತಾ ಮುಂದಕ್ಕೆ ಸಾಗುವ ನಾನ್ಯಾರು? – **ರೈಲು**
7. ಊಟಕ್ಕೆ ಕುಳಿತವರು ಹನ್ನೆರಡು ಜನರು, ಬಡಿಸುವವರು ಇಬ್ಬರು, ಒಬ್ಬರಿಗೆ ಬಡಿಸುವಷ್ಟರಲ್ಲಿ ಇನ್ನೊಬ್ಬನು ಹನ್ನೆರಡು ಜನಕ್ಕೂ ಬಡಿಸಿರುತ್ತಾನೆ. – **ಗಡಿಯಾರ**
8. ಮೊಟ್ಟೆ ಒಡೆಯೋ ಹಾಗಿಲ್ಲ, ಕೊಡ ಮುಳುಗಿಸೋ ಹಾಗಿಲ್ಲ, ಬರಿ ಕೊಡ ತಗೊಂಡು ಬರೋ ಹಾಗಿಲ್ಲ – **ತೆಂಗು**
9. ಅಬ್ಬಬ್ಬ ಹಬ್ಬ ಬಂತು, ಸಿಹಿಕಹಿ ಎರಡೂ ತಂತು. – **ಯುಗಾದಿ**
10. ಸಾಗರ ಪುತ್ರ, ಸಾರಿನ ಮಿತ್ರ. – **ಉಪ್ಪು**
11. ಸಾವಿರಾರು ಹಕ್ಕಿಗಳು, ಒಂದೇ ಬಾರಿಗೆ ನೀರಿಗಿಳಿತವೆ. – **ಅಕ್ಕಿ**
12. ಗುಡುಗು, ಗುಡುಗಿದರೆ ಸಾವಿರ ನಯನಗಳು ಅರಳುವುದು. – ನವಿಲು
13. ಹಲ್ಲಿಲ್ಲದ ಹಕ್ಕಿಗೆ ಗೂಡು ತುಂಬ ಮರಿಗಳು. – **ಕೋಳಿ**
14. ಮೋಟು ಗೋಡೆ ಮೇಲೆ, ದೀಪ ಉರೀತಿದೆ. – **ಮೂಗುಬೊಟ್ಟು**
15. ಹೊಂಚು ಹಾಕಿದ ದೆವ್ವ, ಬೇಡ ಬೇಡ ಎಂದರೂ ಜೊತೆಯೇ ಬರುತ್ತೆ. – **ನೆರಳು**
16. ಮಣ್ಣು ಅಗೆದೆ ಕಲ್ಲು ಸಿಕ್ಕಿತು, ಕಲ್ಲು ಅಗೆದೆ ಬೆಳ್ಳಿ ಸಿಕ್ಕಿತು, ಬೆಳ್ಳಿ ಒಡೆದರೆ ನೀರು ಸಿಕ್ಕಿತು. – **ತೆಂಗಿನಕಾಯಿ**
17. ಕತ್ತಲೆ ಮನೆಯಲಿ ಕಾಳವ್ವ ಕುಂತವ್ಳೆ ಕುಯ್ಯೋ, ಮರ್ರೋ ಅಂತವಳೇ. – **ತಂಬೂರಿ**
18. ಹಾರಿದರೆ ಹನುಮಂತ, ಕೂತರೆ ಮುನಿ, ಕೂಗಿದರೆ ಕಾಡಿನ ಒಡೆಯ. – **ಕಪ್ಪೆ**
19. ಗಿಡ ಕೊಡಲಾರದು, ಮರ ಬೆಳೆಸಲಾರದು, ಅದಿಲ್ಲದೆ ಊಟ ಸೇರಲಾರದು. – **ಉಪ್ಪು**
20. ನೀರಿಲ್ಲದ ಸಮುದ್ರ, ಜನರಿಲ್ಲದ ಪಟ್ಟಣ, ಸಂಚಾರವಿಲ್ಲದ ಮಾರ್ಗಗಳು ಎಲ್ಲಿ? – **ನಕ್ಷೆ**
21. ಕೊಳದ ಒಳಗೆ ಒಂದು ಮರ ಹುಟ್ಟಿ ಬೇರು ಇಲ್ಲ, ನೀರು ಇಲ್ಲ. – **ಎಣ್ಣೆ ದೀಪ**
22. ನೋಡಿದರೆ ನೋಟಗಳು, ನಕ್ಕರೆ ನಗುಗಳು, ಒಡೆದರೆ ತುಂಡುಗಳು. – **ಕನ್ನಡಿ**
23. ಸಾವಿರ ತರುತ್ತೆ, ಲಕ್ಷ ತರುತ್ತೆ, ನೀರಿನಲ್ಲಿ ಹಾಕಿದರೆ ಸಾಯುತ್ತೆ. – **ದುಡ್ಡು**
24. ಕಡ್ಲೆ ಕಾಳಷ್ಟು ಹಿಂಡಿ 32 ಮನೆ ಸಾರಿಸಿ ಬಚ್ಚಲು ಪಾಲು ಆಗಿತ್ತೆ. – **ಹಲ್ಲುಪುಡಿ**
25. ಕರಿ ಗುಡ್ಡ–ಬಿಳಿ ನೀರು ಅದ್ರಾಗೆ ಕುಂತವಳೇ ಚಂಪರಾಣಿ ಗಡಿಗೆ. – **ಮಜ್ಜಿಗೆ**

* * * * *

# ಕಂಪ್ಯೂಟರ್ ಗಾದೆಗಳು

**–ಅಯೇಷಾ ಕೆ. ಎ, ತೃತೀಯ ಬಿ.ಎಸ್ಸಿ.,**

1. ಮಳ್ಳಿ ಮಳ್ಳಿ ಮಂಚಕ್ಕೆ ಎಷ್ಟು ಕಾಲು ಎಂದರೆ ಮೂರು ಮತ್ತೊಂದು ಅಂದ್ಲಂತೆ; ಮಳ್ಳಿ ಮಳ್ಳಿ ಒಂದು Byteಗೆ ಎಷ್ಟು Bits ಎಂದರೆ ಏಳು ಮತ್ತೊಂದು ಅಂದ್ಲಂತೆ.
2. ಹಾಸಿಗೆ ಇದ್ದಷ್ಟು ಕಾಲು ಚಾಚು; Memoryಇದ್ದಷ್ಟು Data ಸ್ಟೋರ್ ಮಾಡು
3. ಕುಣಿಯಲಾರದವಳು ನೆಲ ಡೊಂಕು ಅಂದ್ಲಂತೆ; *Programmes execute* ಮಾಡಲಾರದವಳು *Soft-*Ware Problem ಅಂದ್ಲಂತೆ.
4. ಬೆಕ್ಕಿಗೆ ಚೆಲ್ಲಾಟ ಇಲಿಗೆ ಪ್ರಾಣ ಸಂಕಟ; Programmes ಗೆ ಚೆಲ್ಲಾಟ Mouseಗೆ ಪ್ರಾಣ ಸಂಕಟ
5. ಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗೀತೇ? Programme Segment ಆಗಿ ಆಗಿ Execute ಆಗಿದ್ದು Full Programme ಆಗಿ Execute ಆದೀತೇ?
6. ಹಾವೂ ಸಾಯಬಾರದು, ಕೋಲೂ ಮುರಿಯಬಾರದು; Destroyಯೂ ಆಗಬಾರದು Storeವೂ ಆಗಬಾರದು.
7. ಅತ್ತೆಗೊಂದು ಕಾಲ, ಸೊಸೆಗೊಂದು ಕಾಲ; Floppyಗೆ ಒಂದು ಕಾಲ C.Dಗೊಂದು ಕಾಲ
8. ಎತ್ತಿಗೆ ಜ್ವರ ಬಂದ್ರೆ ಎಮ್ಮೆಗೆ ಬರೆ ಎಳೆದ್ರಂತೆ; Programme ಹಾಳಾದ್ರೆ Key board ರಿಪೇರಿಗೆ ಕೊಟ್ರಂತೆ
9. ಊಟ ಬಲ್ಲವನಿಗೆ ರೋಗವಿಲ್ಲ; Programme ಬಲ್ಲವನಿಗೆ Error ಇಲ್ಲ.
10. ಕುಂಬಾರನಿಗೆ ವರುಷ, ದೊಣೆಗೆ ನಿಮಿಷ; Userಗೆ ವರುಷ Virusಗೆ ನಿಮಿಷ
11. ಊರೆಲ್ಲಾ ಕೊಳ್ಳೆ ಹೊಡೆದ ಮೇಲೆ ಕೋಟೆ ಬಾಗಿಲು ಹಾಕಿದ್ರಂತೆ : Virus Attack ಆದ ಮೇಲೆ Antivirus Install ಮಾಡಿದರಂತೆ.
12. ಸಂಕಟ ಬಂದಾಗ ವೆಂಕಟರಮಣ ಎಂದರಂತೆ; Help ಬೇಕಾದಾಗ F1 ಅಂದರಂತೆ.
13. ಗಣಪನಿಗೂ ಇಲಿ, ಗಣಕಯಂತ್ರಕ್ಕೂ ಇಲಿ.

* * * * *

# ನಗೆಹನಿಗಳು

**– ಚಂದ್ರಕಲಾ .ಡಿ, ತೃತೀಯ ಬಿ.ಎಸ್ಸಿ.,**

ಪರೀಕ್ಷೆಗೆ ಹೋದ ಗುಂಡ ಪರೀಕ್ಷೆ ಆರಂಭವಾಗಿ ಅರ್ಧ ಗಂಟೆಯಲ್ಲೇ ವಾಪಸ್ ಮನೆಗೆ ಬಂದ.

**ಅಪ್ಪ :** ಯಾಕೋ ಗುಂಡ, ಇಷ್ಟ್ ಬೇಗ ಮನೆಗೆ ಬಂದೆ?

**ಗುಂಡ :** ನೀವೇ ಹೇಳಿದ್ರಲ್ಲ ಅಪ್ಪಾ......... ಈ ಪರೀಕ್ಷೆಯಲ್ಲಿ ನೀನೇ ಮೊದಲು ಬರಬೇಕು ಅಂತ, ಅದಕ್ಕೆ ಬಂದೆ.

* * * * *

**ತಿಮ್ಮನ ಹೆಂಡತಿ :** ರೀ........ ಉಪ್ಪು ಖಾಲಿ ಆಗಿದೆ. ಹೋಗಿ ತೆಗೆದುಕೊಂಡು ಬನ್ರೀ.......

**ತಿಮ್ಮ :** ಅದಕ್ಯಾಕೇ ಅಷ್ಟು ದೂರ ಹೋಗ್ಬೇಕು. ನಿನ್ನೆಯಷ್ಟೇ ತಂದಿದೀನಲ್ಲಾ, ಕೋಲ್‌ಗೇಟ್ ಟೂಥ್‌ಪೇಸ್ಟ್ ಅದನ್ನೇ ಹಾಕು. ನಾನು ಜಾಹೀರಾತಿನಲ್ಲಿ ನೋಡಿದ್ದೇನೆ. ಅದರಲ್ಲಿ ಉಪ್ಪು ಇದೆಯಂತೆ.

* * * * *

# ನಗೆಹನಿಗಳು

-ಲಾವಣ್ಯ ಎಲ್. ಬಿ, ತೃತೀಯ ಬಿ.ಎಸ್ಸಿ.,

**ಎಲ್‌ಕೆಜಿ ಹುಡುಗ –** ನಮ್ಮಮ್ಮಂಗೆ ಸಿಕ್ಕಾಪಟ್ಟೆ ಭಯಕಣೇ......

**ಎಲ್‌ಕೆಜಿ ಹುಡುಗಿ –** ಹೌದಾ! ಯಾಕೋ.......?

**ಎಲ್‌ಕೆಜಿ ಹುಡುಗ–** ರೋಡ್ ಕ್ರಾಸ್ ಮಾಡೋವಾಗೆಲ್ಲಾ ಅಮ್ಮ ನನ್ ಕೈನ ಗಟ್ಟಿಯಾಗಿ ಹಿಡ್ಕೋತಾರೆ.

* * *

**ಮೇಡಂ :** ನಿಮ್ಮ ಹುಡುಗ ತುಂಬಾ ಬುದ್ಧಿವಂತ, ದಿನಾ ನನ್ನ ಪುಸ್ತಕವನ್ನು Referncಗೆ ಅಂತಾ ತಗೊಂಡು ಹೋಗ್ತಾನೆ.

**ಅಪ್ಪ :** ಯಾಕೋ ದಿನಾ ಟೀಚರ್ ಪುಸ್ತಕ ತಗೊಂಡು ಬರುತ್ತೀಯಾ?

**ಗುಂಡಾ :** ಹಿಂದೆ ಒಂದ್ಸಾರಿ ಅದರಲ್ಲಿ 100 ರೂ ನೋಟು ಸಿಕ್ಕಿತ್ತು ಅದಕ್ಕೆ.

* * *

**ಅಪ್ಪ :** ನೀನು ಈ ಸರಿ ಪರೀಕ್ಷೆಯಲ್ಲಿ ಪಾಸಾದರೆ ಒಂದು ಒಳ್ಳೆ ಸೈಕಲ್ ಕೊಡುಸ್ತೀನಿ.

**ಮಗ :** ಒಂದು ವೇಳೆ ಫೇಲ್ ಆದ್ರೆ

**ಅಪ್ಪ :** ಹತ್ತು ಸೈಕಲ್ ಕೊಡಿಸುತ್ತೇನೆ. ಸೈಕಲ್ ಶಾಪ್ ಇಟ್ಟುಕೊಳ್ಳುವುದಕ್ಕೆ.

* * *

ಸುಪಾಂಡಿ ಹುಡುಗಿ ನೋಡಲು ಹೋಗಿದ್ದ

**ಸುಪಾಂಡಿ :** ಏನು ಓದಿದ್ದೀಯಾ?

**ಹುಡುಗಿ :** ಬಿ.ಎ.,

**ಸುಪಾಂಡಿ :** ಅಯ್ಯೋ! ಓದಿರೋದು ಎರಡೇ ಅಕ್ಷರ, ಅದನ್ನು ಉಲ್ಟಾ-ಪಲ್ಟಾ ಹೇಳುತ್ತಿದ್ದೀಯಲ್ಲೇ.

* * *

**ವೈದ್ಯರು :** ಇವನ ಎರಡು ಕಿವಿಗಳನ್ನು ಕತ್ತರಿಸಿ.

**ಸುಪಾಂಡಿ :** ಬೇಡಿ ನಾನು ಕುರುಡ ಆಗಿಹೋಗುತ್ತೇನೆ.

**ವೈದ್ಯರು :** ಮೂರ್ಖ, ಕಿವಿ ಕತ್ತರಿಸಿದರೆ ಕುರುಡ ಹೇಗೆ ಆಗುತ್ತೀಯೆ?

**ಸುಪಾಂಡಿ :** ಕನ್ನಡಕವನ್ನ ನಿಮ್ಮ ತಾತನ ಕಿವಿಗೆ ಹಾಕಲಾ.

* * *

ಸುಪಾಂಡಿ ಮತ್ತು ಸುರೇಶ್ ಆಗಸ್ಟ್ 15 ರಂದು ಹೀಗೆ ಮಾತನಾಡಿಕೊಳ್ಳುತ್ತಿದ್ದರು.

**ಸುಪಾಂಡಿ :** ಸುರೇಶ್, ಬಾರೋ ಅಂಗಡಿಯಲ್ಲಿ ಬಾವುಟ ತೆಗೆದುಕೊಂಡು ಬರೋಣ. ಇಬ್ಬರೂ ಅಂಗಡಿಗೆ ಹೋದರು, ಇಬ್ಬರು ಬಾವುಟವನ್ನು ತೆಗೆದುಕೊಂಡರು.

**ಆಗ ಸುಪಾಂಡಿ ಅಂಗಡಿಯವನಿಗೆ ಕೇಳಿದ :** "ಅಂಕಲ್ ಬೇರೆ ಕಲರ್ ಇಲ್ವಾ"!

* * * * *

# A-Z ವರೆಗಿನ ಗಂಡ-ಹೆಂಡತಿ ಸಂಭಾಷಣೆ

- ಚಂದ್ರಕಲಾ ಡಿ., ತೃತೀಯ ಬಿ.ಎಸ್ಸಿ.,

Aನೇ - ಮಲಗಿದ್ದೀಯಾ ಯಾಕ್ ಹುಷಾರಿಲ್ವ?
Bಡ್ರಿ - ಮಾತಾಡಿಸಬೇಡಿ ನಿನ್ನೆ ನೀವು ಏನ್ ಹೇಳಿದ್ರಿ ?
Cನಿಮಾಕ್ಕೆ - ಕರೆದುಕೊಂಡು ಹೋಗ್ತೀನಿ ಅಂತ
Dಯರ್ - ಇಷ್ಟಕ್ಕೆ ಕೋಪಾನ, ನಾನು ಏನೋ ಅಂದ್ಕೊಂಡಿದ್ದೆ.
Eಷ್ಟಕ್ಕೆ - ಯಾಕ್ರೀ ಕೋಪ, ನಾನು ಇವಾಗ ಹೋಗಲೇಬೇಕು.
FOOD - ಮಾಡು, ಆಮೇಲೆ ಹೋಗೋಣ
Gಪುಣ್ರಿ - ಅನ್ಕೊಂಡಿದ್ದೆ ಪರವಾಗಿಲ್ಲ ನೀವು
Hಗೆ - ಮಾತಾಡಬೇಡ, ಇವಾಗ ಬಾ ಸುಮ್ನೆ
Iಯ್ಯೋ - ನಡೀರಿ ಬೇಗ ಲೇಟಾಯ್ತು
Jಬಿನಲ್ಲಿ - ಸ್ವಲ್ಪನೂ ದುಡ್ಡಿಲ್ಲ, ತಾಳು ಬಂದೆ
Kಳಗಡೆ - ಇರ್ತೀನಿ ಬೇಗ ಬನ್ನಿ
Lಗಾದ್ರು - ಹೋಗಬೇಕಂದ್ರೆ ಹೀಗೆ ಲೇಟು
Mಬತ್ತು - ರೂಪಾಯಿ ಇದೆ ಅಷ್ಟೆ ಕಣೆ
Nರೀ - ನಿಮ್ಮದು ಯಾವಾಗ್ಲೂ ಇದೇ ಗೋಳು
Oಹೋ - ನೀನೇನು ಸಾಹುಕಾರನ ಮಗಳು ನೋಡು
Pಕ್ಚರ್‌ಗೆ - ಟಿಕೆಟ್ ಕೊಡ್ತಾ ಇರಬಹುದು ಬೇಗ ಬನ್ನಿ
Qನಲ್ಲಿ - ನಿಂತ್ಕೋ ಬಾ ಅಲ್ಲೇನು ನೋಡ್ತಾ ಇದ್ದೀಯಾ
Rರೂಪಾಯಿ - ಕೊಟ್ಟು ಹೂವು ತಗೊಂಬರ್ತೀನಿ.
Sಷ್ಟೇ - ಮಾಡಿದ್ರು ನಿನ್ ಬುದ್ಧಿ ಬಿಡಲ್ವೆ
Tಕೆಟ್ - ತಗೋತಾ ಇರಿ ಬೇಗ ಬರ್ತಿನಿ
Uಸ್‌ಲೆಸ್ - ಕಣೆ ನೀನು, ಇಷ್ಟೊತ್ತಾ ಬರೋದು
Vಷಯ - ಏನ್ರೀ ಯಾಕೆ ಏನಾಯಿತು?
Wಚ್- ನೋಡೆ ಸಿನಿಮಾ ಶುರು ಆಯ್ತು
Xಟ್ರಾ - ದುಡ್ಡಾದ್ರು ಕೊಟ್ಟು ಹೋಗೋಣ ಬನ್ನಿ ಮತ್ತೆ
Yಯ್ಯಾರ - ಮಾಡ್ಕೋಂಡು ಬರೋದೇ ಆಯ್ತು ನೀನು
Zರೋನಲ್ಲಿ - ಆದರೂ ಪರವಾಗಿಲ್ಲ ಸಿನಿಮಾ ನೋಡಲೇಬೇಕು ಬನ್ನಿ.

* * * * *

# ಅಮ್ಮ

–ಭವಾನಿ ಬಿ. ಕೆ., ತೃತೀಯ ಬಿ.ಕಾಂ.

ನನ್ನ ತಾಯಿಯ ಹಾರ್ಟ್
ಮಮತೆಯ ಕೋರ್ಟ್
ಅವಳು ಹಾಡುವ ಲಾಲಿಯ ಹಾಡು
ತುಂಬಾ ತುಂಬಾನೆ ಸ್ವೀಟ್
ಲೋಕದ ಮಾತಲ್ಲಿ ಅವಳ ಹೆಸರೇ ಗ್ರೇಟ್
ಅವಳ ಪ್ರೀತಿಯ ಮಾತು ತುಂಬಾನೆ ಕ್ಯೂಟ್
ಅ ಆ ಇ ಈ ಎಂದು ಹೇಳಿ ಕೊಟ್ಟವಳು
ಎಲ್ಲರಿಗಿಂತ ಅವಳೇ ಫಸ್ಟ್
ಮಕ್ಕಳ ಲಾಲನೆ ಪೋಷಣೆಯಲ್ಲಿ ಅವಳು
ತುಂಬಾನೆ ಅಲರ್ಟ್
ಪ್ರತಿ ಕ್ಷಣ ಅಮ್ಮ ಅಮ್ಮ ಎನ್ನುವುದು ನನ್ನಯ
ಹಾಟ್ ಬೀಟ್.

* * * * *

# ಸ್ನೇಹವೆಂದರೆ..!

–ಎಚ್. ಆರ್. ತ್ರಿವೇಣಿ, ಸಹಾಯಕ ಪ್ರಾಧ್ಯಾಪಕರು

ಸ್ನೇಹವೆಂದರೆ ಶ್ರೀಮಂತರ ಸಹವಾಸವಲ್ಲ
ಅಂದವಾದ ಹುಡುಗ ಹುಡುಗಿಯರ ಜೊತೆ ನಡೆಸುವ
ಸಲಿಗೆಯ, ಸಭ್ಯತೆ ಮರೆತ ಸಂಭಾಷಣೆಯಲ್ಲ
ಹಣ ಸಂಪಾದಿಸುವಂತೆ ಗಳಿಸುವ ಜನರ ಸಂಪರ್ಕವಲ್ಲ
ದೂರ ಸರಿದಾಗ ನೊಂದು ಕಣ್ಣೀರಿಡುವ ದುಃಖದ ಸಂಗತಿಯಲ್ಲ

ಸ್ನೇಹವೆಂದರೆ,
ಬಡವನಲ್ಲಿ ಹೃದಯ ಶ್ರೀಮಂತಿಕೆಯ ಹುಡುಕಾಟ
ಕತ್ತಲಿಗೆ ಬೆಳಕನ್ನು ಸೇರಿಸಿ ಸುಂದರಗೊಳಿಸುವ ಪ್ರಯತ್ನ
ಹೇಳದೆ ತಿಳಿಯಬಲ್ಲ ಮನದಾಳದ ನೋವುಗಳಿಗೆ ಸಾಂತ್ವನ
ಲೋಕವೆಲ್ಲ ತಿರಸ್ಕರಿಸಿದರೂ ಮರೆಯಾಗದ ಸಹಾಯ ಹಸ್ತ
ಪ್ರತಿಫಲ ಬಯಸದ, ಸ್ವಾರ್ಥವಿರದ ತಾಯಿ ಪ್ರೀತಿಯ ತುಣುಕು
ದೇಹಗಳು ದೂರ ಸರಿದರೂ, ಪ್ರತಿಕ್ಷಣವೂ ನಿಶ್ಕಪಟ
ನಿಶ್ಕಲ್ಮಶ, ಆಸೆರಹಿತ, ಕಿರುನಗೆ ಬೀರಿ, ನಾನಿರುವೆ ಎಂದು ಹೇಳುವ
ಕುಸಿದ ಮನಕ್ಕೆ ಭರವಸೆ ನೀಡುವ ಬಾನೆತ್ತರದ ವಿಶಾಲ ಮನಸ್ಸು
ಈ ಎರಡಕ್ಷರದ ಸ್ನೇಹ.

* * * * *

## ಕನಸು

–ನೇತ್ರಾವತಿ ಎಚ್. ಕೆ., ತೃತೀಯ ಬಿ.ಎಸ್ಸಿ.,

ಕ, ಕಾ, ಕಿ, ಕೀ ಕನಸಿನಲ್ಲಿ ಕಾಡಿಗೆ ಹೊರಟೆ
ಕಿಚ ಕಿಚ ಎನ್ನುವ ಪಕ್ಷಿಯ ಕಂಡೆ
ಕುಹೂ ಕುಹೂ ಎನ್ನುವ ಕೋಗಿಲೆಯ ಕಂಡೆ
ಇನ್ನೂ ಮುಂದೆ ಹೊರಟೆ

ಆಗ ಸಿಂಹವ ಕಂಡೆ ಭಯ ಪಟ್ಟೆ
ಅದು ನನ್ನ ಹತ್ತಿರ ಬರುತ್ತಿರುವುದನ್ನು ಕಂಡೆ
ನಾನು ಪೊದೆಯೊಳಗೆ ನುಗ್ಗಿ ಬಿಟ್ಟೆ
ಅದು ಹೋಗಿತ್ತು ಆ ಕಡೆ ನಾನು ಬಂದೆ ಈ ಕಡೆ

ತಲೆ ಎತ್ತಿ ನೋಡಿದೆ ಸೂರ್ಯನ ಕಡೆ
ಹೋಗುತ್ತಿತ್ತು ಅದು ನನ್ನ ಮನೆ ಕಡೆ
ಆಗ ಎಚ್ಚರವಾಗಿ ನಾನು ಅಮ್ಮನ ಕಂಡೆ
ಕನಸಲಿ ಕಂಡ ಅಪಾಯವ ನೆನೆದು ಬೆಚ್ಚಿಬಿದ್ದೆ

* * * * *

## ರಾಷ್ಟ್ರಕವಿ ಕುವೆಂಪು

–ಅಜಿತ್ ಕುಮಾರ್ ಟಿ. ಪಿ., ದ್ವಿತೀಯ ಬಿ.ಎ.,

ರಾಷ್ಟ್ರಕವಿ ಕುವೆಂಪು
ಕನ್ನಡ ಸಾಹಿತ್ಯಕ್ಕೆ ಇಂಪು
ನಾಡಗೀತೆಯ ರಚನಾಕಾರ
ಕನ್ನಡಾಂಭೆಯ ಈ ಕುವರ

ಪ್ರಕೃತಿ ದೇವತೆಯ ಆರಾಧಕ
ಸಾಹಿತ್ಯ ಪರಂಪರೆಯ ನಾಯಕ
ನವೋದಯ ಪಂಥದ ಕವಿ
ನವ ಕಾವ್ಯಗಳ ಉದಯರವಿ

ಸಾಮಾಜಿಕ ಕಳಕಳಿಯ ಸುಧಾರಕ
ಕನ್ನಡ ಸಾಹಿತ್ಯ ಶ್ರೀಮಂತಗೊಳಿಸಿದ ಪ್ರೇರಕ

ವಿಶ್ವಮಾನವ ಸಂದೇಶದ ಯುಗಯೋಗಿ
ವಿಶ್ವಪಥದೆಡೆಗಿರಲಿ ನಮ್ಮ ಹಾದಿ

ಶ್ರೀ ರಾಮಾಯಣ ದರ್ಶನಂ ಎಂಬ ಮಹಾಕಾವ್ಯ
ಕುವೆಂಪು ಸಾಹಿತ್ಯ ರಚನೆ ಎಷ್ಟೊಂದು ಭವ್ಯ
ಮಲೆನಾಡಿನ ಜನ ಜೀವನದ ಚಿತ್ರಣ
ಇದುವೇ ಸಹೃದಯರಿಗೆ ನೀಡುತ್ತೆ ರಸದೌತಣ

ರಾಷ್ಟ್ರಕವಿಯಾಗಿ ಜ್ಞಾನಪೀಠ ಅಲಂಕರಿಸಿದ ಸರದಾರ
ಕುವೆಂಪು ಸಾಹಿತ್ಯ ರಚನಾ ಪ್ರತಿಭೆಗೆ ಸಾಕ್ಷಾಧಾರ
ಕನ್ನಡಿಗರ ಕಣ್ಮಣಿ ಕನ್ನಡದ ವರ್ಡ್ಸ್‌ವರ್ತ್
ಇನ್ನಾರು ಇಹರು ಇವರಷ್ಟು ಸಮರ್ಥ

* * * * *

# ನನಸಲ್ಲಿ ಕನಸು ಬಿತ್ತುತ್ತಿರುವಾಗಲೇ ಹೊರಟುಬಿಟ್ಟರು

–ಸ್ಫೂರ್ತಿ ಬಿ. ಎ., ದ್ವಿತೀಯ ಬಿ.ಕಾಂ.,

ತೊರೆದು ಹೋದೆ ನಡುನೀರಿನಲ್ಲಿ ಕೈಬಿಟ್ಟು ಹೋದೆ
ಭಾರತಾಂಬೆಯ ಮಡಿಲಲ್ಲಿ ಕರಗಿ ಹೋದೆ ಡಾ॥ ಕಲಾಂ
ದೇಶಭಕ್ತಿಯ ನಮ್ಮಲ್ಲಿ ಹರಿಸಿಹೋದೆ
ಜಗಕೆ ಜ್ಞಾನಜ್ಯೋತಿ ಹಂಚಿಹೋದೆ
ನಿನ್ನ ಸರಿ ಸಮರಾರನೂ ಕಾಣನಾದೆ
ವ್ಯಕ್ತಿಗಳ ಮನದಲಿ 'ಕಲಾಂ ಅಮರನಾದೆಯಾ'

ಗುರುವಿಗೊಂದು ಗುರಿಯ ಕಂಡೆ
ವಿಧಿಯು ನಿನ್ನ ಕರೆಯಿತೆಂದುಕೊಂಡೆ
ನೀನು ಬಿತ್ತ ಬೀಜ ಫಲವಾಯಿತೆಂದೆ
ಫಲವು ಬರುವ ಮುನ್ನ ಕಣ್ಮರೆಯಾಗಿ ಹೋದೆ

ನೀ ಹರಡಿದ ಜ್ಯೋತಿ ಕಣದಲ್ಲಿ
ಹರಡಲಿ ಜಗದ ಕಣಕಣದಲ್ಲೂ
ಕಲಾಂ ಡಾ॥ ಅಬ್ದುಲ್ ಕಲಾಂ
ಅಮರವಾಗು ಜಗದ ಕೊನೆವರೆಗೂ

ಕಂಬನಿಯ ಹರಿಸುತಿಹುದು
ಭಾರತೀಯನ ಅಣುಅಣುವಿನಲ್ಲೂ
ಭ್ರಷ್ಟ-ದುಷ್ಟರ ರಾಜಕಾರಣದಲ್ಲೂ
ಮರೆಯಲಾರದ ಧ್ರುವತಾರೆಯಾದೆಯಲ್ಲಾ

ಮತ್ತೆ ಬಾರದೆ ಹೋಗು ನೀ ಕಲಾಂ
ನಿನ್ನಂತವರಿಗಲ್ಲ ಈ ಭ್ರಷ್ಟರ ಸಂತೆ
ನೆನಪಾಗದಿರಲಿ ಈ ಲೋಕದ ಚಿಂತೆ
ಕಲಾಂ ನಿಮಗೆ ಕೋಟಿಕೋಟಿ ಸಲಾಂ ಸಲಾಂ......

* * * * *

## ಪ್ರೀತಿಸುವ ಮನಸ್ಸುಗಳಿಗೆ ಕಿವಿಮಾತು

–ಯಶವಂತ್ ಕೆ. ಜೆ., ಪ್ರಥಮ ಬಿ.ಕಾಂ.,

ಪ್ರೀತಿ ಮಾಡಬೇಕು ಎನಿಸಿದಾಗ ಅಪ್ಪ ಅಮ್ಮನನ್ನು ನೆನೆಯೋಣ
ಪ್ರೀತಿ ಮಾಡಲೇಬೇಕಾದಾಗ ಅಣ್ಣ ತಮ್ಮನನ್ನು ಸ್ಮರಿಸೋಣ
ಪ್ರೀತಿ ಮಾಡುವವರಿಂದ ದೂರ ಸರಿಯೋಣ
ಏಕೆಂದರೆ ತಂದೆತಾಯಿಯ ಪ್ರೀತಿಯೇ ಅಮೂಲ್ಯವಾದುದು

ನಾ ಪ್ರೀತಿಯನ್ನು ದ್ವೇಷಿಸುವುದಿಲ್ಲ ಹಾಗೆಂದು ಉತ್ತೇಜಿಸುವುದಿಲ್ಲ
ಪ್ರೀತಿ ಮಾಡಬೇಕು, ಅಪ್ಪ, ಅಮ್ಮ, ಅಣ್ಣ–ತಮ್ಮ ಭಾಂಧವರನ್ನು

ಪ್ರೀತಿಸುವ ಸಮಯ ಬಂದಾಗ ಪ್ರೀತಿಸೋಣ ಮುಂದೆ ಸಾಗೋಣ
ಮರಿಯಬೇಡಿರಿ ನಮ್ಮ ಹೆತ್ತು–ಹೊತ್ತವರ ಸಾಕಿಸಲಹಿದವರ
ಮರೆಯಲಾಗದ ಕ್ಷಣಗಳನ್ನು ಸ್ಮರಿಸುತ್ತಾ ಆ ಗಳಿಗೆಗಳ
ಪರರಿಗೆ ಆದರ್ಶವಾಗುವ ಜೀವನವನ್ನು ನಡೆಸೋಣ

* * * * *

## ಜೀವನವೆಂಬ ಬುಗುರಿ

–ನೇತ್ರಾವತಿ ಎಚ್. ಕೆ, ತೃತೀಯ ಬಿ.ಎಸ್ಸಿ.,

ಬುಗುರಿಯಂಗಾ. . . . . ॥ 2 ॥ ತಿರುಗುತ್ತಿಹದು ನೋಡು
ನಮ್ಮ ಬಣ್ಣದ ಭೂಮಿ ॥ ಪ ॥
ಭೂಮಿಯೊಳಗ. . . . ॥ 2 ॥ ಬಣ್ಣದ ಜನರು
ಸುಳ್ಳು ಮೋಸದೊಳಗೇ ತಿರುಗುತ್ತಿಹರು. . . .
ಬುಗುರಿಯಂಗಾ. . . . ॥ 2 ॥
ಹಾವಿನಂಗಾ. . . . ಸಿರಿವಂತರು ಬಡವರ ಕಂಡರೆ
ಬುಸುಗುಟ್ಟುತ್ತಿಹರು
ನೋಡು ನಮ್ಮಯ ಜನರ . . . . ॥ 2 ॥
ಬುಗುರಿಯಂಗಾ . . . . . ॥ ಪ ॥

ಜಾತಿ ಧರ್ಮ ಎನುತ್ತಲೇ
ಭೇದ ಭಾವ ಮಾಡುತ್ತಿಹರು . . . .
ನೋಡು ತಾರತಮ್ಯ ಮಾಡುವ ಜನರ . . . .
ಎಲ್ಲಿ ಉಳಿದಿದೇ ಧರ್ಮ
ಎಲ್ಲಾವು ಇಲ್ಲಿ ಅಧರ್ಮ

ಬಣ್ಣ ಬಣ್ಣದ ಜನರು ಬಣ್ಣ ಬಣ್ಣದ ಮಾತುಗಳಾಡಿ
ಬಡವರನ್ನು ಬಡವರಾಗಿಯೇ ಇರಿಸುತ್ತಿಹರು . . . .
ನೋಡು ನಮ್ಮ ಬಣ್ಣದ ಜನರ . . . . ॥ 2 ॥
ಬುಗುರಿಯಂಗಾ . . . . . . ॥ಪ॥

ನಮ್ಮ ಯುವ ಜನರು ಕೆಲಸ ಮಾಡದೆ ಅಲೆಯುತ್ತಿಹರು
ಅಲೆಮಾರಿಯ ಹಾಗೆ . . . . .
ನೋಡು ನಮ್ಮ ಯುವಜನತೆಯ . . . . ॥ 2 ॥
ನಮ್ಮ ನಾಗರೀಕರು ನಾರಿಯರನ್ನು ಹೆಚ್ಚಾಗಿ ದುಡಿಸಿ
ಅವರನ್ನು ಕೀಳಾಗಿ ಕಾಣುತ್ತಿಹರು . . . .
ಏನ್ ಈ ಅಸಹಾಯಕತೆ
ಎಲ್ಲಿ ಉಳಿದಿದೆ ಮಾನವೀಯತೆ
ನೋಡು ನಮ್ಮ ನಾಗರೀಕರ . . . . ॥ 2 ॥
ಬುಗುರಿಯಂಗಾ . . . . . ॥ ಪ ॥

* * * * *

## ನಮ್ಮ ದೇಶದ ನಿಜವಾದ ನಾಯಕರು

**–ದರ್ಶನ್ ಬಿ. ಎಂ., ಪ್ರಥಮ ಬಿ.ಕಾಂ.,**

ನಮ್ಮ ಭಾರತದ ನಿಜವಾದ ನಾಯಕರು
ನಮ್ಮ ದೇಶಕ್ಕೆ ಅನ್ನ ಕೊಡುವ ರೈತರು
ನಮ್ಮ ದೇಶಕಾಯುವ ವೀರಯೋಧರು
ಇವರೇ ನಿಜವಾದ ದೇಶಭಕ್ತರು

ಅನ್ನ ಕೊಡುವ ರೈತನೇ ಕಿಸಾನ್,
ದೇಶಕಾಯುವ ಯೋಧನೇ ಜವಾನ್,
ಇವರೇ ನಮಗೆ ನಿಜವಾದ ಭಗವಾನ್
ಎಲ್ಲರೂ ಹೇಳಿ ಜೈ ಜವಾನ್, ಜೈ ಕಿಸಾನ್

ಮನೆಗೆ ಇರಲಿ ಇಬ್ಬರು ಪುತ್ರರು
ಒಬ್ಬ ಆಗಲಿ ಭೂಮಿಯ ಪುತ್ರ
ಇನ್ನೊಬ್ಬ ಆಗಲಿ ದೇಶದ ಪುತ್ರ
ಆಗ ಅವರ ಜನ್ಮ ಆಗುತ್ತೆ ಪವಿತ್ರ

ಕೆಸರಿನಿಂದ ರೈತ ಬೆಳೆಯುವ ಬೆಳೆ
ತಿನ್ನುವಿರಿ ನೀವು ಇಂದು–ನಾಳೆ
ನಮಗಾಗಿ ದೇಶವ ಹಗಲಿರುಳು ಕಾಯುವ ಯೋಧ
ಇವರಿಗೆ ಇರಲಿ ಯಾವಾಗಲೂ ನಮಸ್ಕಾರ ನಮ್ಮಿಂದ.

* * * * *

## ಗುರುಕೃಪೆ

-ಚಂದ್ರಕಲಾ ಡಿ., ತೃತೀಯ ಬಿ.ಎಸ್ಸಿ.,

ಒಂದು ಎರಡು
ಗುರುಗಳಿಗೆ ನಮಸ್ಕಾರ ಮಾಡು
ಮೂರು ನಾಲ್ಕು
ಜ್ಞಾನದೆಡೆಗೆ ಹೆಜ್ಜೆ ಹಾಕು
ಐದು ಆರು
ಗುರುಗಳೇ ನಮ್ಮ ಪ್ರತ್ಯಕ್ಷ ದೇವರು
ಏಳು ಎಂಟು
ಬೆಳೆಸು ಗುರುವಿನ ನಂಟು
ಒಂಬತ್ತು ಹತ್ತು
ಗುರುಗಳ ಆಶೀರ್ವಾದ ಸದಾ ಇತ್ತು
ಒಂದರಿಂದ ಹತ್ತು ಹೀಗಿತ್ತು
ನಮ್ಮ ಜೀವನ ಶೈಲಿಯೇ ಬದಲಿಸಿತ್ತು

* * * * *

## ತಾನೆನ್ನುವುದೇ?

-ಅಯೇಷಾ ಕೆ. ಎ., ತೃತೀಯ ಬಿ.ಎಸ್ಸಿ.,

ಚಲಿಸುವ ಮೋಡಗಳು
ಮಳೆಯ ಸುರಿಸಿ ತಾನ್ನೆನ್ನುವುದೇ?
ಬೆಳದಿಂಗಳ ಶಶಿ
ನಗೆ ಸೂಸಿ ತಾನ್ನೆನ್ನುವುದೇ?
ಅರಳುವ ಮೊಗ್ಗು
ಸುವಾಸನೆ ಬೀರಿ ತಾನ್ನೆನ್ನುವುದೇ?
ಬೀಸುವ ತಂಗಾಳಿ
ಉಸಿರು ಕೊಟ್ಟು ತಾನ್ನೆನ್ನುವುದೇ?
ಹರಿಯುವ ನೀರು
ಜಗದ ದಾಹ ನೀಗಿಸಿ ತಾನ್ನೆನ್ನುವುದೇ?
ಉರಿಯುವ ಬೆಂಕಿ
ಶಾಖ ನೀಡಿ ತಾನ್ನೆನ್ನುವುದೇ?
ಭೂಮಿ ತಾಯಿ
ಅನ್ನ ನೀಡಿ ತಾನ್ನೆನ್ನುವುದೇ?
ನಾನು-ನಾನು ಎಂದರೆ
ಜಗದಲಿ ಉಳಿಯುವವರ್‍ಯಾರು?

* * * * *

# ಸ್ನೇಹ

–ಅನು ಆರ್., ಪ್ರಥಮ ಬಿ.ಕಾಂ.,

ಮನಸೆಂಬ ಮಂದಿರದಲ್ಲಿ
ಕನಸ್ಸೆಂಬ ಸಾಗರದಲ್ಲಿ
ನೆನಪೆಂಬ ಅಲೆಗಳಲ್ಲಿ
ಚಿರಕಾಲ ಮಿನುಗುತಿರಲಿ
ನಮ್ಮ ಈ ಅಮರ ಸ್ನೇಹ

ಅಳಿಸಲಾಗದ ಚಿತ್ರ ಪ್ರಕೃತಿ
ಕದಿಯಲಾಗದ ವಸ್ತು ವಿದ್ಯೆ
ಸೋಲಿಸಲಾಗದ ಬಂಧನ ಪ್ರೇಮ
ಮುರಿಯಲಾಗದ ನೆನಪು ಸ್ನೇಹ

ಪರಿಚಯವಾಗಲು ಮಾತು ಬೇಕಿಲ್ಲ ನಗು ಸಾಕು
ಒಳ್ಳೆಯವರಾಗಲು ಹಣ ಬೇಕಾಗಿಲ್ಲ ಗುಣ ಸಾಕು
ಸ್ನೇಹಿತರಾಗಲು ಸಂಬಂಧ ಬೇಕಿಲ್ಲ
ಮನಸ್ಸಿನ ಭಾವನೆ ಸಾಕು ನೆನಪಿರಲಿ

* * * * *

# ಹಿತವಚನ

–ಮಾನಸ ಎಂ. ಜಿ., ದ್ವಿತೀಯ ಬಿ.ಕಾಂ.,

ಹೆತ್ತ ತಾಯಿಯ ಋಣ
ಹೊತ್ತ ಭೂದೇವಿಯ ಋಣ
ತೀರಿಸಲು ಸಾಧ್ಯವೇ ಆತ್ಮೀಯರೇ
ದೇಹದಲ್ಲಿ ಉಸಿರಿರುವತನಕ

ಹಿರಿಯರೆದುರು ವಾದಿಸಬೇಡ
ಸಹೋದರರೊಡನೆ ಜಗಳಬೇಡ
ಎಲ್ಲರನ್ನೂ ಆತ್ಮೀಯತೆಯಿಂದ ಗೌರವಿಸು,
ಪ್ರೀತಿಸು, ಸಂತೋಷದಿಂದ ಜೀವಿಸು

ಕಷ್ಟಪಟ್ಟು ದುಡಿಮೆ ಮಾಡಿದರೆ
ದೇಹ ಸವೆಯದು, ಆದರೆ
ಮೈ ಮನಸ್ಸು ಗಟ್ಟಿಯಾಗುವುದು
ಬನ್ನಿ ಪರಿಶ್ರಮವನ್ನು ಪ್ರೀತಿಸೋಣ
ಗೌರವಿಸಿ ಪರಿಶ್ರಮಿಗಳಾಗೋಣ

ನಮ್ಮ ಪ್ರಗತಿಗೆ ತಾಳ್ಮೆ, ಸಹನೆ, ಪ್ರೀತಿ
ವಿಶ್ವಾಸ, ದಯೆ, ಕರುಣೆ, ಶಿಸ್ತುಗಳೇ ರಕ್ಷಕ
ಆದರೆ ಪ್ರಗತಿಯ ಅವನತಿಗೆಸ್ವಾರ್ಥ, ದುರಾಸೆ,
ಅಹಂಕಾರ, ಕೋಪ,ಆಲಸ್ಯಗಳೇ ಪ್ರೇರಕ

* * * * *

# ಚುಟುಕುಗಳು

–ವಿಜಯಕುಮಾರ ಎನ್ ಟಿ., ಗ್ರಂಥಾಲಯ ವಿಭಾಗ

ಎಲ್ಲಿಯವರೆಗೆ ಪ್ರಜೆಗಳು ಒತ್ತುತ್ತಾರೂ ಹೆಬ್ಬಟ್ಟು
ಅಲ್ಲಿಯವರೆಗೆ ರಾಜಕಾರಿಣಿ ತಿನ್ನುತ್ತಾನೆ ಒಬ್ಬಟ್ಟು
ಅದಕೆ ನಾ ಹೇಳುವೆ ಪ್ರಜೆಗಳಿಗೆ ಒಂದು ಗುಟ್ಟು
ಎಲ್ಲರೂ ವಿದ್ಯಾವಂತರಾಗಿರೆಂದು ದಯವಿಟ್ಟು

* * * * *

ಜನಿವಾರ ಶಿವದಾರಗಳಲ್ಲಿ ಯಾವುದು ಶ್ರೇಷ್ಠದಾರ
ಒಬ್ಬ ಹೇಳಿದ ಅದಕ್ಕೆಲ್ಲ ಶ್ರೇಷ್ಠ ನನ್ನ ಉಡದಾರ
ನೀರಿಗೆ ಬಿದ್ದಾಗ ಹಿಡಿದೆಳೆದರೆ ತಡೆಯುವುದು ಭಾರ
ದೇಹದ ಸಮತೋಲನಕ್ಕೆ ಇದು ಅಸ್ತಿಭಾರ

* * * * *

ಸೇರುವುದಿಲ್ಲ ಒಂದು ಕಡೆ ಲಕ್ಷ್ಮಿ ಮತ್ತು ಸರಸ್ವತಿ
ಲಕ್ಷ್ಮಿ ಓಡುವಳು ಕಂಡಾಗ ಸಾಹಿತಿ
ಸರಸ್ವತಿಗೆ ಬೇಸರ ಕಂಡಾಗ ಲಕ್ಷಾಧಿಪತಿ
ಇವೆರಡು ಇಲ್ಲದವನ ಜೀವನ ಬಲು ಫಜೀತಿ

* * * * *

ಕಾಗೆ ಒಂದು ಚೂರು ತಿನ್ನಲು ಕರೆಯುವುದು ತನ್ನ ಬಳಗ
ಕೊಕ್ಕರೆ ಮಾತ್ರ ಕರೆಯದೆ ತಿನ್ನುವುದು ಬೇಗ ಬೇಗ
ಕಾಗೆ ಕಪ್ಪಾಗಿದ್ದರೂ ಅದರ ಹೃದಯ ಸಮುದ್ರ
ಕೊಕ್ಕರೆ ಬೆಳ್ಳಗಿದ್ದರೂ ಅದರ ಹೃದಯ ಕ್ಷುದ್ರ

* * * * ** * * * *

# ಚುಟುಕುಗಳು

–ಸುಷ್ಮಿತ ಕೆ., ತೃತೀಯ ಬಿ.ಕಾಂ.,

ಪ್ರೀತಿಸು ನೀನು ಗುರುವ
ಅವರಿಗೆ ತೋರು ಗೌರವ
ಕಣ್ಣಿಗೆ ಕಾಣುವ ದೇವರು
ಅವರೇ ನಮ್ಮಯ ಗುರು

* * * * *

ಶಾಂತಿಯಿಲ್ಲದ ಮನಸ್ಸೇಕೆ ?
ಮೌನವಿರದ ಮಾತೇಕೆ ?
ಕರುಣೆಯಿಲ್ಲದ ನುಡಿಯೇಕೆ ?
ವಿದ್ಯೆಯಿಲ್ಲದ ಬದುಕೇಕೆ?

* * * * *

ಸ್ನೇಹ ಒಂದು ಸುಂದರ ಕವನ
ಬರೆದರೂ ಮುಗಿಯದ ಕಥನ
ಮರೆತರೂ ಮರೆಯಲಾಗದ ಸ್ಪಂದನ
ಬಿಟ್ಟರೂ ಬಿಡಲಾಗದ ಬಂಧನ
ಅದುವೇ ನಮ್ಮಯ ಗೆಳೆತನ

* * * * *

ಸ್ನೇಹ ಎನ್ನುವುದು ಒಂದು ಸುಂದರ ರೂಪ
ಸ್ನೇಹದಲ್ಲಿ ಬರಬಾರದು ಕೋಪ
ಸ್ನೇಹದಲ್ಲಿ ಇರಬಾರದು ಮನಸ್ತಾಪ
ಯಾಕೆಂದರೆ, ಸ್ನೇಹವೇ 'ಜೀವನಕ್ಕೆ ದಾರಿದೀಪ'

* * * * *

## ಚುಟುಕುಗಳು

–ರೋಹಿಣಿ ಬಿ. ವಿ., ಪ್ರಥಮ ಬಿ.ಕಾಂ.,

ಹೆಂಡತಿಯಾದವಳು ಗಂಡನಿಗೆ ಬಾಗಿ
ನಡೆಯಬೇಕು ಇದು ನಾರಿ ಧರ್ಮಸೂತ್ರ
ಗಂಡನೂ ಬಾಗಿ ನಡೆಯಬೇಕು
ಹೆಂಡತಿ ಕುಳ್ಳಿಯಾದರೆ ಮಾತ್ರ

* * * * *

ಖಾತೆಯಲ್ಲಿ ಹಣ ಇದ್ದರೆ
ಮಾತ್ರ ನೀಡಬೇಕು ಚೆಕ್ಕು
ಸಾಲ ಮಾಡಿದರೂ ಪರವಾಗಿಲ್ಲಾ
ಓದಿರಿ ಒಳ್ಳೆಯ ಬುಕ್ಕು

* * * * *

ಅಚ್ಚರಿ ಆಗುವುದಿಲ್ಲ ನನಗೆ
ಆಕಾಶದಲ್ಲಿ ನಿಗೂಢ ಹಾರುವ
ತಟ್ಟೆಗಳ ಕಂಡರೆ
ನಮ್ಮ ಮನೆಯಲ್ಲಿ ತಟ್ಟೆ–ಲೋಟಗಳು
ಹಾರುತ್ತವೆ ಅಮ್ಮನಿಗೆ ಸಿಟ್ಟು ಬಂದರೆ

* * * * *

ಹಬ್ಬದ ದಿನವೂ ಗಂಡ
ತಡವಾಗಿ ಬಂದ ಮನೆಗೆ
ಕಂಠಪೂರ್ತಿಯಾಗಿ ಕುಡಿದು
ಮಡದಿ ಮಾಡಿದಳು ಆಯುಧಪೂಜೆ
ಕೈಯಲ್ಲಿ ಪೊರಕೆ ಹಿಡಿದು

* * * * *

## ಚುಟುಕುಗಳು

–ಪ್ರಿಯಾಂಕ ಎ. ಎಸ್., ಪ್ರಥಮ ಬಿ.ಎ.,

ಬದುಕು ಎಂದಿಗೂ
ಮುಗಿಯದ ದೂರಗಳ
ಸರಿಪಡಿಸಲಾಗದ
ಲೋಪ ದೋಷಗಳ
ಒಂದು ಅಕ್ಷಯ ಪಾತ್ರೆ

* * * * *

ನೋಡಿಲ್ಲಿ ಓ ಗೆಳೆಯ ಕಾಗೆಗಳ ಗುಂಪು
ಅವುಗಳಲ್ಲಿಯು ಇಹುದು ಸಹಕಾರವಿಂಪು
ಹುಲುಮಾನವರಲ್ಲಿ ಇದು ಎಂದೂ ಇಲ್ಲ
ಪರರ ಕೇಡನು ದಿನವೂ ಬಯಸುವರಲ್ಲಾ!

* * * * *

ಆಗ ತಾನೆ ಚಿಗುರುತಿದ್ದ ಹರೆಯ
ಜೊತೆಯಲ್ಲಿ ಬಾಲ್ಯದ ಗೆಳತಿ ಗೆಳೆಯ
ಅವರದು ನಿಶ್ಕಲ್ಮಶ ಪವಿತ್ರವಾದ ಸ್ನೇಹ
ಕೂತರೂ ಮುಗಿಯದ ಮಾತಿನ ದಾಹ
ಇವರಿಗೆಲ್ಲಿತ್ತು ಲೋಕದ ಜನರ ಪರಿವೆ
ಎಚ್ಚರವಾದದ್ದು ಬಂದು ಕಚ್ಚಿದಾಗ ಇರುವೆ

* * * * *

ಬಟ್ಟಲು ಕಂಗಳ ಸುಂದರ ವದನ
ಪ್ರತಿದಿನ ಬಸ್ಸಲ್ಲಿ ನಮ್ಮ ನೋಟಗಳ ಮಿಲನ
ಹೆಸರು ಕೇಳಲಿಲ್ಲ ವಿಳಾಸ ತಿಳಿಯಲಿಲ್ಲ
ಕೊನೆಗೂ ಆಗಿ ಹೋದೆ ನಾ, ಮೂರ್ಖ ನಾ..

* * * * *

## ಚುಟುಕುಗಳು

-ನವ್ಯ ಬಿ. ಆರ್., ಪ್ರಥಮ ಬಿ.ಕಾಂ.,

ಕಣ್ಣು ತೆರೆದರೆ ಜನನ
ಕಣ್ಣು ಮುಚ್ಚಿದರೆ ಮರಣ
ಇವೆರೆಡರ ಮಧ್ಯೆ ನಯನ
ಕಣ್ಣು ಮಿಟುಕಿಸುವುದೇ ಜೀವನ

* * * * *

ಅಂದದ ಸಕ್ಕರೆಯ ನಾಡು
ಸಂಸ್ಕೃತಿಯ ಬೀಡು
ಶಿಲ್ಪಕಲೆಗಳ ನಾಡು
ಕವಿಗಳ ಬೀಡು
ಮತ್ತೆಲ್ಲೂ ಹುಡುಕಿದರು ಸಿಗದು
ಈ ಮಣ್ಣಿನ ಸೊಗಡು.

* * * * *

ಅಭಿಮಾನದ ಗಣಿ
ಪ್ರೀತಿಯ ಅರಗಿಣಿ
ಶ್ರೀ ಕ್ಷೇತ್ರದ ಮುತ್ತಿನ ಮಣಿ
ಶ್ರೀ ಬಾಲಗಂಗಾಧರನಾಥ ಸ್ವಾಮೀಜಿ
ಅವರೇ ನಮ್ಮಯ ಕಣ್ಮಣಿ

* * * * *

ತಾಯಿ ಇಲ್ಲದ ಮಗುವಿಲ್ಲ
ಗುರುವಿಲ್ಲದ ಶಿಷ್ಯನಿಲ್ಲ
ಸಾವಿಲ್ಲದ ಮನುಕುಲವಿಲ್ಲ
